ಬೆಲೆ ಎರಡು ಆಣೆ

ಕರ್ಮವೀರ


ಸಂಪಾದಕರು:
ಹ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor,
H. R. PUROHIT, M. A.

— [ಸಂಪುಟ ೧೯] — ಹುಬ್ಬಳ್ಳಿ ಸೋಮವಾರ ತಾರೀಖು ೨೨—೩—೧೯೪೮ — [ಸಂಚಿಕೆ ೪೭] —

ಸರದಾರ ವಲ್ಲಭಭಾಯಿ ಪಟೇಲರು



೫೬೦ ಸಂಸ್ಥಾನಗಳಿಗೆ 'ಸಾಯುಜ್ಯ' ಕೊಡಿಸಿದ ಮಹಾ ಮುತ್ಸದ್ದಿತನ ಮುಖದಲ್ಲಿ ಮಿಂಚುತ್ತಿದೆ!

ಕೈಗಾರಿಕೆಗಳ ಸ್ಥಿತಿಗತಿ

ಲೇಖಕರು:— ಶ್ರೀ ಎಸ್. ಕೆ. ಕಲ್ಲಾಪುರ, ಬಿ. ಎ. ಎಲ್. ಎಲ್. ಬಿ

ಕೈಗಾರಿಕೆಗಳ ವರ್ಗೀಕರಣ

ನಮ್ಮ ದೇಶದಲ್ಲಿ ವಾಣಿಕೆಯಲ್ಲಿ ಬಂದ ಎಲ್ಲಾ ಕೈಗಾರಿಕೆಗಳನ್ನು ಉಲ್ಲೇಖಿಸುವದು ಅಸಾಧ್ಯವಾದ ಮಾತು. ಯಂತ್ರಯುಗವು ಪ್ರಾರಂಭವಾಗಿ ಪರದೇಶಗಳಲ್ಲಿ ತಯಾರಾದ ಒಡವೆಗಳು ನಮ್ಮ ದೇಶವನ್ನು ಪ್ರವೇಶಿಸಿ ನಮ್ಮ ಕೈಗಾರಿಕೆಗಳನ್ನು ಹೊಡೆದೋಡಿಸುವ ವರೆಗೆ ನಮ್ಮ ದೇಶದ ಜನರಿಗೆ ಬೇಕಾಗುವ ಯಾವತ್ತೂ ಒಡವೆಗಳು ನಮ್ಮಲ್ಲಿ ನಮ್ಮ ಹಳ್ಳಿಗಳಲ್ಲಿ ಸಿದ್ಧವಾಗುತ್ತಿದ್ದವು. ಅವುಗಳನ್ನು ಅನೇಕರು ಅನೇಕ ರೀತಿಯಿಂದ ವರ್ಗೀಕರಿಸಿದ್ದಾರೆ. ನಾನು ಈ ಕೆಳಗಿನಂತೆ ಅವುಗಳಲ್ಲಿಯ ಕೆಲಸವನ್ನು ಮಾತ್ರ ಉಲ್ಲೇಖಿಸುತ್ತೇನೆ.

೧ ಆಹಾರಕ್ಕೆ ಸಂಬಂಧಪಟ್ಟವು: ಭತ್ತ ಕುಟ್ಟುವದು, ಬೀಸುವದು, ಎಣ್ಣೆ ತೆಗೆಯುವದು, [illegible] ಮುಂತಾದವುಗಳನ್ನು [illegible], ಬೆಲ್ಲ [illegible].

೨ ವಸ್ತ್ರ ಹೊದಿಕೆಗಳಿಗೆ ಸಂಬಂಧಪಟ್ಟವು: ಹತ್ತಿ, [illegible] ಮತ್ತು [illegible]ಗಳನ್ನು ನೂಲುವದು, [illegible] ಬಣ್ಣ ತಯಾರಿಸುವದು ಮತ್ತು ಹಾಕುವದು; ಅಚ್ಚು ಹಾಕುವದು; [illegible] ತಯಾರಿಸುವದು; [illegible] ಕಾಗದಗಳನ್ನು [illegible]; [illegible] ತಯಾರಿಸುವದು ಹೊಲಿಗೆಯ ಕೆಲಸ; ಸತ್ತ ಪ್ರಾಣಿಗಳನ್ನು [illegible] ತಯಾರಿಸುವದು; [illegible] ಗುಂಡಿಗಳನ್ನು ತಯಾರಿಸುವದು.

೩ ಅಲಂಕಾರಗಳಿಗೆ ಸಂಬಂಧಪಟ್ಟವು: [illegible] ಕಲ್ಲು [illegible] ಮತ್ತು ಇತರ ಧಾತುಗಳ ಒಡವೆ [illegible] ರತ್ನಗಂಬಳಿ ಮುಂತಾದವುಗಳು. [illegible] ಸುಗಂಧ ದ್ರವ್ಯಗಳು

೪ ಮನೆತನಕ್ಕೆ ಬೇಕಾಗುವ ಒಡವೆಗಳು: [illegible] ಪಾತ್ರ; ಕಲ್ಲಿನ [illegible] ಕಟ್ಟಿಗೆಗಳ ಒಡವೆ; ಔಷಧ ಮತ್ತು ಇತರ ಆರೋಗ್ಯ ಸಾಧನದ ಒಡವೆಗಳು; [illegible]

೫ ಬೇಸಾಯಕ್ಕೆ ಬೇಕಾದವುಗಳು: ನೇಗಿಲು, [illegible], [illegible], ಕಬ್ಬಿಣ ಉಕ್ಕುಗಳ ಇತರ ಒಡವೆಗಳು.

೬ ಕಟ್ಟಡಗಳಿಗೆ ಬೇಕಾದವುಗಳು: [illegible] ಗಚ್ಚು ಗಾರೆಗಳನ್ನು ತಯಾರಿಸುವದು; [illegible] ಹಂಚು ತಯಾರಿಸುವದು; ಇವುಗಳಿಗೆ ಬೇಕಾಗುವ [illegible] ಕಬ್ಬಿಣ ತಾಮ್ರ ಹಿತ್ತಾಳೆಗಳ ಒಡವೆಗಳು; ಇವೆಲ್ಲವುಗಳಿಗೆ ಬೇಕಾದ ಬಣ್ಣಗಳು.

೭ ವಾಹನಗಳಿಗೆ ಬೇಕಾದವುಗಳು: [illegible] ಕಟ್ಟುವಿಕೆ, [illegible], ರಥ, ಪಲ್ಲಕ್ಕಿ ಮುಂತಾದವುಗಳನ್ನು ಮಾಡುವದು; ಇವುಗಳಿಗೆಲ್ಲ ಬೇಕಾಗುವ ಸಾಧನಗಳ ತಯಾರಿಕೆ.

೮ ಕಲೆಗಳಿಗೆ ಬೇಕಾದವುಗಳು: ಬರೆಯುವ ಸಾಧನ ಸಾಮಗ್ರಿ ಇತ್ಯಾದಿ

೯ ಯುದ್ಧೋಪಕರಣಗಳ ತಯಾರಿಕೆ.

ಇವುಗಳಲ್ಲಿ ಸಣ್ಣ ಅಕ್ಷರಗಳಲ್ಲಿ ಉಳ್ಳವುಗಳು ಮಾತ್ರ ಜೀವಂತ ಸಳುತ್ತ ಜೀವ ಹಿಡಿದಿವೆ. ಉಳಿದವುಗಳು ನಾಮಶೇಷವಾಗಿವೆಯೆಂದರೂ ಸಲ್ಲುತ್ತದೆ.

ಕೈಗಾರಿಕೆ ಸೋತುದೇಕೆ?

ಈ ಕೈಗಾರಿಕೆಗಳ ವಿನಾಶ ಇಲ್ಲವೆ ಅವನತಿಗಳ ಕಾರಣಗಳನ್ನು ನೋಡಲು ಕಂಡು ಹಿಡಿಯಬೇಕಾಗಿದೆ. ಇವುಗಳಲ್ಲಿ ಕೆಲವು ಯಂತ್ರಗಳಿಂದ ತಯಾರಾಗುತ್ತಿರುವ ಒಡವೆಗಳೊಡನೆ ಸ್ಪರ್ಧಿಸಲಾರದೆ ಸೋತವು. ಇನ್ನು ಕೆಲವು ಅಂದ ಮಾಟಗಳ ವಿಚಾರದಲ್ಲಿ ಸೋತವು. ಮತ್ತೆ ಕೆಲವು ಜಾಳಿಕೆ ಬಾಳಿಕೆಗಳ ವಿಚಾರದಿಂದ ಸೋತವು. ಎಷ್ಟೋ ಕೆಲವು ಯಂತ್ರಗಳ ಒಡವೆಗಳಂತೆ ಸುಲಭವಾಗಿ ಒಯ್ಯುವದಕ್ಕೆ ಅನುಕೂಲವಾಗದೆ ಸೋತವು. ಲೋಕರೀತಿಗಳು ಬದಲಾದ ಕಾರಣದಿಂದ ಅಳಿದವುಗಳು ಅಸಂಖ್ಯ. ಕೆಲವು ತರದ ಜರತಾರಿ ಸೀರೆ ಕಣ ರುಮಾಲ ಜೊತ್ತಿಗೆ ಮುಂತಾದವುಗಳನ್ನು ಈಗ ಉಪಯೋಗಿಸುವವರೇ ಕಾಣುವದಿಲ್ಲ. ಇದರಂತೆ ಇನ್ನೂ ಕೆಲವು ಒಡವೆಗಳು ಜೀವನಕ್ಕೆ ಅನವಶ್ಯವಾಗಿವೆ. ಹಿತ್ತಾಳೆ ಕಂಚು ತಾಮ್ರ [illegible]ಗಳಿಂದ ತಯಾರಾಗುತ್ತಿದ್ದ [illegible]

ಜೀವನದ ರೀತಿಗಳು ಬದಲಾಗಿ ಹೊಸ ಹೊಸ ಕೆಲವು ಕೈಗಾರಿಕೆಗಳು ಹುಟ್ಟುತ್ತವೆ. ಬೀಡಿಗಳನ್ನು ಕಟ್ಟುವದು, ಲಕೋಟೆಗಳನ್ನು ತಯಾರಿಸುವದು ಇತ್ಯಾದಿ.

ಪುನರುಜ್ಜೀವನವೆಂತು ?

ಇಂಥ ಪರಿಸ್ಥಿತಿಗಳಲ್ಲಿ ಲೋಕರೀತಿಗಳನ್ನು ಬದಲಿಸುವದು ಯೋಗ್ಯವೋ ಅವುಗಳಿಗೆ ವಿರೋಧವಾದ ರೀತಿಯಿಂದ ನಡೆದೇ ಕೈಗಾರಿಕೆಗಳ ಉಳಿಗಾಲವನ್ನು ತಂದುಕೊಡುವದು ಯೋಗ್ಯವೋ? ಅವುಗಳ ಪುನರುಜ್ಜೀವನವಾಗಬೇಕಾದರೆ ಅವುಗಳಿಗೆ ಈಗಿರುವ ತೊಂದರೆಗಳನ್ನು ನೀಗಿಸಿಕೊಡುವದು ಒಂದೇ ಉಪಾಯವೆಂದು ಎಲ್ಲರೂ ಒಪ್ಪಿಕೊಳ್ಳಬೇಕು. ಬೆಲೆ ಹೆಚ್ಚಾಗಿ ಅಳಿದವುಗಳು ಜೀವಗೊಳ್ಳಬೇಕಾದರೆ ಅವುಗಳ ಬೆಲೆ ಕಡಿಮೆಯಾಗತಕ್ಕದ್ದು. ಸರಕಾರದ ಸಹಾಯ ದ್ರವ್ಯಗಳ ಮೂಲಕ ಬೆಲೆ ಇಳಿಯುವದು ಒಂದು ರೀತಿ. ತಯಾರಿಕೆಯ ವೆಚ್ಚವನ್ನು ಕಡಿಮೆಮಾಡುವದು ಇನ್ನೊಂದು ರೀತಿ. ಅಂದವಿರದೆ ಅಳಿದವುಗಳನ್ನು ಅಂದಗೊಳ್ಳುವಂತೆ ಮಾಡತಕ್ಕದ್ದು. ಬಾಳಿಕೆ ಬರದಂಥ ಕೈಗಾರಿಕೆಗಳು ಬಾಳಿಕೆ ಬರುವಂತೆ ಮಾಡಬೇಕು. ಭಾರವಾಗಿರುವಂಥವು ಹಗುರಾಗಬೇಕು. ಅಕೃತಿಯಿಂದ ಅನಾದೃತವಾಗಿರುವವು ಸಣ್ಣವಾಗಬೇಕು. ಜೀವನಕ್ಕೆ ಅನವಶ್ಯವಾದವುಗಳನ್ನು ತೆಗೆದೊಗೆಯಬೇಕು. ಜೀವನಕ್ರಮವು ಬದಲಾಗಿರುವದರಿಂದ ಹೊಸ ಯುಗಕ್ಕೆ ಬೇಕಾದವುಗಳು ಅಸ್ತಿತ್ವದಲ್ಲಿ ಬರಬೇಕು. ಈ ಪ್ರಕಾರ ಯಾವದೊಂದು ಕೈಗಾರಿಕೆಯ ಅಳಿಗಾಲದ ಕಾರಣ ಕಂಡು ಕೊರತೆಗಳನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿ ಅವುಗಳನ್ನು ಶಾಸ್ತ್ರೀಯ ರೀತಿಯಿಂದ ಪರಿಹರಿಸುವ ಮತ್ತು ರೋಗಕ್ಕೆ ತಕ್ಕುದಾದ ಔಷಧವನ್ನು ಕೊಡುವ ಉಪಾಯವೇ ವಿಹಿತ. ಇದು ನಿಜವಾದರೆ ನಮ್ಮ ಅಧ್ಯಕ್ಷರ್ತವ್ಯವು ಕೈಗಾರಿಕೆಗಳ ರೋಗವನ್ನು ಮತ್ತು ಅವುಗಳಿಗೆ ತಕ್ಕ ಉಪಾಯಗಳನ್ನು ಕಂಡುಹಿಡಿಯುವದಾಗಿರುತ್ತದೆ.

ಸರಕಿನ ತಲೆ ಭಾರದ ಬೆಲೆಯೂ ಉತ್ಪಾದನೆಯ ಮಂದಗತಿಯೂ

ಕೈಗಾರಿಕೆಗಳ ವಿನಾಶದ ಕೆಲವೊಂದು ಕಾರಣಗಳನ್ನು ಉಲ್ಲೇಖಿಸಿದೆನು. ಇವುಗಳಲ್ಲಿ ಮುಖ್ಯವಾದವುಗಳೆಂದರೆ ಕಾರಖಾನೆಗಳಲ್ಲಿ ತಯಾರಾಗುವ ಒಡವೆಗಳು ಕೈಗಾರಿಕೆಯ ಒಡವೆಗಳಿಗಿಂತ ಅಗ್ಗವಾಗಿರುವದು. ಇದಕ್ಕೆ ಕಾರಣವೇನು? ಒಂದನೆಯದಾಗಿ ಕಾರಖಾನೆಯವರು ತಮಗೆ ಅವಶ್ಯವಿರುವ ಕಚ್ಚಾ ಸರಕು ಉಪಕರಣಗಳನ್ನು ದೊಡ್ಡ ಪ್ರಮಾಣದಿಂದ ಸೋಕ ವ್ಯಾಪಾರದ ಸ್ಥಳಗಳಲ್ಲಿ ಕೊಳ್ಳುತ್ತಾರೆ. ಕೆಲವು ಸಾರೆ ತಾವೇ ಅವುಗಳನ್ನು ತಯಾರಿಸಿಕೊಳ್ಳುತ್ತಾರೆ. ಹಳ್ಳಿಯ ವ್ಯವಸಾಯಗಾರರು ಬಹುಸಣ್ಣ ಪ್ರಮಾಣದಿಂದ ಕೊಳ್ಳತಕ್ಕವರು. ಕಾರಣ ಅವರು ಹಳ್ಳಿಗಳೊಳಗಿನ ಅಂಗಡಿಕಾರರನ್ನು ಅವಲಂಬಿಸಿರಬೇಕಾಗುತ್ತದೆ. ಈ ಸರಕುಗಳು ಇವರ ಕೈಸೇರುವಷ್ಟರಲ್ಲಿಯೇ ೪-೫ ಜನ ದಲಾಲರ ದಳಾಲಿ, ಹೊರಗೂಲಿ, ತರತರದ ಕರಭಾರಗಳು ಅವುಗಳ ಮೇಲೆ ಹೇರಲ್ಪಡುತ್ತವೆ. ಮೇಲೆ ಅಂಗಡಿಕಾರರ ಲಾಭ. ಇಷ್ಟು, ನಗದಿ ಹಣಕೊಡುವ ಪ್ರಸಂಗಗಳಲ್ಲಿ ಉದ್ರಿಯಿಂದ ಕೊಂಡರೆ ಅದರ ಮೇಲಿನ ಬಡ್ಡಿ. ಅಂತೂ ಕೈಗಾರಿಕೆಯಲ್ಲಿ ತೊಡಗಿದವರು ಕಚ್ಚಾ ಸರಕುಗಳಿಗೆ ನೂರಕ್ಕೆ ೨೫ ರಿಂದ ೫೦ ರ ವರೆಗೆ ಹೆಚ್ಚಿನ ಹಣ ತೆರುತ್ತಾರೆ. ಇದರಿಂದಲೇ ತಯಾರಿಕೆ ಸರಕುಗಳ ಬೆಲೆ ಏರುತ್ತದೆ. ಕೈಗಾರಿಕೆ ಶಿಕ್ಷಣಗಳು ಅವರಿಗಿರುವದಿಲ್ಲ. ಕಾರಖಾನೆಗಳಲ್ಲಿರುವ ಅಧುನಿಕ ಯಂತ್ರೋಪಕರಣಗಳೂ ಅವರಲ್ಲಿರುವದಿಲ್ಲ. ಈ ಮೂಲಕ ಒಂದು ತಾಸಿನಲ್ಲಾಗುವ ಸರಕನ್ನು ಮಾಡಲು ಹಳ್ಳಿಯ ವ್ಯವಸಾಯಗಾರರಿಗೆ ದಿನಗಳು ಬೇಕಾಗುತ್ತವೆ.

ಕಾರಖಾನೆಯ ಕೂಲಿಗಾರ ಹಳ್ಳಿಯ ಕೆಲಸಗಾರ

ಕಾರಖಾನೆಯಲ್ಲಿ ಹೆಚ್ಚಿನ ಯೋಗ್ಯತೆಯವರು ಹೆಚ್ಚಿನ ಕೆಲಸವನ್ನೂ ಕಡಿಮೆಯವರು ಕಡಿಮೆ ತರದ ಕೆಲಸಗಳನ್ನೂ ಮಾಡುತ್ತಾರೆ. ಇದರಿಂದ ಹೆಚ್ಚಿನ ಯೋಗ್ಯತೆಯವರು ಹೆಚ್ಚುದುಡಿಯಲು ಸಾಧ್ಯವಾಗುತ್ತದೆ. ಹಳ್ಳಿಯ ಕೆಲಸಗಾರರು ಹೆಚ್ಚಿನ, ಕಡಿಮೆಯ ಎಂಬುದನ್ನು ಲಕ್ಷ್ಯಕ್ಕೆ ತಾರದೆ ಯಾವತ್ತೂ ಕೆಲಸಗಳನ್ನು ತಾವೇ ಮಾಡುವದರಿಂದ ಅಪ್ರಮಾಣದಿಂದ ಅವರ ಗಳಿಕೆ [illegible] ಸರಕುಗಳ ಧಾರ[illegible]

[illegible] ಏರುತ್ತದೆ. ಎಷ್ಟು ಸಣ್ಣ ತುಂಡುಗಳಿಂದಾದರೂ ಒಂದಿಲ್ಲೊಂದು ಒಡವೆಯನ್ನು ಮಾಡಲು ಕಾರಖಾನೆಯವರು ಬಲ್ಲರು. ಹಳ್ಳಿಯ ವ್ಯವಸಾಯಗಾರರು ಸಾಮಗ್ರಿಗಳನ್ನು ಸರಿಯಾಗಿ ಉಪಯೋಗಿಸಲಾರದೆ ಚೆಲ್ಲಿಬಿಡುತ್ತಾರೆ. ಅವರು ತಯಾರಿಸಿದ ಒಡವೆಗಳನ್ನು ಅವರೇ ಮಾರಬೇಕಾಗುವದರಿಂದ ಸಮಯವು ಹಾಳಾಗಿ ಹೋಗುತ್ತದೆ. ಕಾರಖಾನೆಗಳಲ್ಲಿ ಅನೇಕರು ಒಡವೆಗಳನ್ನು ತಯಾರಿಸುತ್ತಿದ್ದು ಆ ಪ್ರಮಾಣದಿಂದ ಮಾರಾಟದ ವೆಚ್ಚವು ಅತಿಕಡಿಮೆಯಾಗಿರುತ್ತದೆ. ಕೈಗಾರಿಕೆಯ ಶಿಕ್ಷಣವಿಲ್ಲದಿರುವದರಿಂದಲೂ ಅವಶ್ಯವುಳ್ಳ ಯಂತ್ರೋಪಕರಣಗಳ ಅಭಾವದಿಂದಲೂ ಹಳ್ಳಿಯವರ ತಯಾರಿಕೆಗಳ ಅಂದ ಮಾಟಗಳು ಕೆಡುತ್ತವೆ. ಯಾವಯಾವ ಒಡವೆಗಳು ಯಾವಲ್ಲಿ ಮಾರತಕ್ಕದ್ದು ಎಂಬದರ ಅರಿವು ಹಾಗೂ ಯಾವ ರೀತಿಗಳು ಬದಲಾಗಿ ಯಾವವು ಬರುತ್ತವೆಂಬುದರ ಅರಿವು ಹಳ್ಳಿಗರಿಗೆ ಇರದ್ದರಿಂದ ಅವರು ಹಳೆಯುಪದ್ಧತಿಯ ಒಡವೆಗಳನ್ನೇ ತಯಾರಿಸುತ್ತ ಹೋಗುತ್ತಾರೆ. ಅವರಿಗೂ ಜಗತ್ತಿನ ಪ್ರಗತಿಗೂ ಯಾವ ಸಂಬಂಧವೂ ಇರುವದಿಲ್ಲ. ಹೀಗಾಗಿ ಹಳ್ಳಿಯ ಕೈಗಾರಿಕೆಗಳು ಮುಗ್ಗರಿಸುವದು ಅನಿವಾರ್ಯವಾಗಿ ಹೋಗಿದೆ.

ಯುಕ್ತ ಸಹಾಯ

ಕೈಗಾರಿಕೆಗೆ ಸಹಾಯ ನೀಡುವದಾದರೆ ಅದು ಯಾವ ತರದ್ದಿರಬೇಕು? ಕೆಲವೊಂದು ಯಂತ್ರಗಳನ್ನು ಕಡಿಮೆ ಖರ್ಚಿನಿಂದ ತಂದಿಸಿ ಕೊಡುವದು ಅಥವಾ ಆ ಬಗ್ಗೆ ಕೆಲ ಹಣ ಸಹಾಯ ಮಾಡುವದು. ಸಾಲ ಕೊಡುವದು ಈ ಮುಂತಾದ ಉಪಾಯಗಳಿಂದ ಕೆಲವಟ್ಟಿಗೆ ಸಹಾಯವಾಗಬಹುದಾದರೂ ಅವುಗಳಿಂದ ಇಂದಿನ ಮರಣವನ್ನು ನಾಳೆಗೆ ಒಯ್ದಂತಾಗುತ್ತದೆ. ಆದರೆ ಅವುಗಳಿಗೆ ಶಾಶ್ವತವಾದ ಉಳಿಕೆಗಳನ್ನು ತಂದುಕೊಂಡಂತಾಗುವದಿಲ್ಲ. ಈ ಪ್ರಕಾರದ ಸಹಾಯಧನವನ್ನು ಪಡೆದವರು ಸ್ವಲ್ಪಕಾಲದಲ್ಲಿಯೇ ಯಥಾಪ್ರಕಾರ ಪೂರ್ವ ಸ್ಥಿತಿಗೇ ಮುಟ್ಟಿ ತಿರುಗಿ ಸಹಾಯಗಳಿಗೆ ಹಾತೊರೆಯುವ ಪ್ರಸಂಗಗಳೇ ಬರುತ್ತವೆ. ಅವರೆಂದೂ ತಮ್ಮ ಕಾಲಮೇಲೆ ತಾವು ನಿಲ್ಲುವದು ಸಾಧ್ಯವಾಗುವದಿಲ್ಲ. ಇದು ಸಾಧ್ಯವಾಗುವಂತಿದ್ದರೆ ಅವರ ಅವಸ್ಥೆಯು ಈ ಪ್ರಕಾರ ಆಗುತ್ತಲೇ ಇದ್ದಿಲ್ಲ.

ಆದ್ದರಿಂದ ಸರಕಾರದವರು ಕೊಡಬಹುದಾದ ಸಹಾಯವು ಹೇಗಿರಬೇಕೆಂದರೆ ಆ ಸಹಾಯವು ದೊರೆತ ಬಳಿಕ ಬೇರೆ ಯಾವ ತೊಂದರೆಗಳಿಲ್ಲದೆ ಯಾವುದೊಂದು ಕೈಗಾರಿಕೆಯು ಸರಿಯಾಗಿ, ಸಜೀವವಾಗಿ ನಡೆಯತಕ್ಕದ್ದು. ಇದು ಸಾಧ್ಯವಾಗಬೇಕಾದರೆ ಆಯಾ ಕೈಗಾರಿಕೆಗಳ ರೋಗಗಳ ನಿಜವಾದ ಕಾರಣಗಳನ್ನು ಕಂಡು ಹಿಡಿದು ಆ ರೋಗವು ಇಲ್ಲದಂತೆ ಮಾಡುವದು ಒಂದೇ ಯೋಗ್ಯ ಉಪಾಯವು. ಯಾವುದೊಂದು ಕೈಗಾರಿಕೆಗೆ ಸೇರಿದವರು ಸಾಲಸಿಗದೆ ಪೇಚಾಡುತ್ತಿದ್ದರೆ ಮತ್ತು ಆ ಮೂಲಕ ಆ ಕೈಗಾರಿಕೆಯು ನಾಶವಾಗುತ್ತಿದ್ದರೆ ಸುಲಭ ದರದಲ್ಲಿ ಅವರಿಗೆ ಸಾಲ ಸಿಗುವಂತೆ ಮಾಡುವದೇ ಯುಕ್ತ ಸಹಾಯ. ಕಚ್ಚಾ ಸರಕು ದೊರೆಯದೆ ಯಾವುದೊಂದು ಕೈಗಾರಿಕೆಯು ಮುಗ್ಗರಿಸುತ್ತಿದ್ದರೆ ಅದನ್ನು ದೊರಕಿಸಿಕೊಡುವದು ಸಹಾಯ. ತಯಾರಾದ ಸರಕುಗಳಿಗೆ ಗಿರಾಕಿಗಳು ದೊರೆಯದಿದ್ದರೆ ಅವರನ್ನು ದೊರಕಿಸಿಕೊಡುವದೂ ಯುಕ್ತ ಸಹಾಯವೇ. ಪರದೇಶದ ಸರಕುಗಳೊಡನೆ ಸ್ಪರ್ಧಿಸುವದು ಏನು ಮಾಡಿದರೂ ಸಾಧ್ಯವಾಗದೆ ಯಾವದೊಂದು ಕೈಗಾರಿಕೆಯು ಸಾಯುತ್ತಿದ್ದರೆ ಪರದೇಶದ ಸರಕುಗಳನ್ನು ಪ್ರತಿಬಂಧಿಸುವದು ಇನ್ನೊಂದು ಬಗೆಯ ಸಹಾಯ. ಅಧುನಿಕ ಗಿರಣಿಗಳಲ್ಲಿ ತಯಾರಾಗುತ್ತಿರುವ ಒಡವೆಗಳೊಡನೆ ಏನು ಮಾಡಿದರೂ ಮೇಲೋಡಲಾರದೆ ಯಾವದೊಂದು ಕೈಗಾರಿಕೆಯು ನಾಶವಾಗ ಹತ್ತಿದರೆ ಗಿರಣಿಗಳಲ್ಲಿ ಅವು ತಯಾರಾಗದಂತೆ ಮಾಡುವದು ಮತ್ತೊಂದು ಸಹಾಯ. ಏನಾದರೂ ಮಾಡಿದರೆ ಮೇಲಾಡಿಸುವದು ಸಾಧ್ಯವಾಗುವದಾದರೆ ಅದನ್ನು ಮಾಡುವಂತೇ ಅನುವು ಒದಗಿಸಿ ಕೊಡುವದು ಸಹಾಯ. ಯಾವ ಉಪಾಯಗಳನ್ನು ಕೈಕೊಂಡರೂ ಕಡೆಗಾಣದೆ ಯಾವದೊಂದು ಕೈಗಾರಿಕೆಯು ಸಾಯುವದು ಕಟ್ಟಿಟ್ಟದ್ದೇ ಆದರೆ ಅದಕ್ಕೆ ಸಹಾಯ ನೀಡುವದರಲ್ಲಿ ಅರ್ಥವಿಲ್ಲ. ಸಾರಾಸಾರ ವಿಚಾರಗಳನ್ನೆಲ್ಲ ಬದಿಗಿಟ್ಟು ಯಾವ ಸಹಾಯಗಳು ಬೇಕೆಂಬುದರ ವಿಚಾರವಿಲ್ಲದೆ ಕೇವಲ ಹಣವನ್ನು ಕೊಡುತ್ತ ಹೋಗುವ ಧೋರಣವು ಸರಿಯೆಂದು ಯಾರು ಹೇಳಿಯಾರು? ಅದು ರೋಗಕ್ಕೆ ತಕ್ಕ ಔಷಧವಲ್ಲ. ಇಂಥ ಔಷಧವನ್ನು ಕೊಡುವುದರಿಂದ ಸಮಾಜವು ಇನ್ನಿಷ್ಟು ರೋಗಿಯಾಗುವದಲ್ಲದೆ ಅದು ಸುಧಾರಿಸುವದಿಲ್ಲ. ಈ ಬಗ್ಗೆ ಹೆಚ್ಚಿನ ವಿವೇಚನೆಯನ್ನು ಮುಂದಿನ ಲೇಖದಲ್ಲಿ ಮಾಡುವಾ.

ವಿವಿಧ ಪ್ರಪಂಚ

ಅವಿವಾಹಿತರು ಹೇಡಿಗಳು!

ಹುಡುಗನಿರಲಿ, ಹುಡುಗಿಯಿರಲಿ— ಸರಿಯಾದ ಹುಡುಗಿ, ಹುಡುಗ ಸಿಗಲಿಲ್ಲವೆಂಬ ನೆಪದಿಂದ ಮದುವೆಯಾಗದೆ ಉಳಿದವರೆಲ್ಲ ಹೇಡಿಗಳು ಎಂದು ಎಚ್. ಬಿ. ಜೋನ್ಸನ್ನನು ಬರೆಯುತ್ತಾನೆ. ಅವರೇನು ಪರಿಸ್ಥಿತಿ ಅಂಥದಿದೆಯೋ, ಅಥವಾ ಅವರ ಮನಸ್ಸಿನೊಳಗೊಂದು ಕಳ್ಳ ಬೆದರಿಕೆ ಅಡಗಿಕೊಂಡಿದೆಯೋ— ಎಂಬುದನ್ನು ವಿಚಾರಿಸುತ್ತ ಹೋದನವ.

ಒಂದು ವರ್ಗದ ತರುಣ ತರುಣಿಯರು ತಾಯ್ತಂದೆಯರು ಸ್ವಾರ್ಥಕ್ಕಾಗಿ ಅವರನ್ನು ತಮ್ಮ ವಾತ್ಸಲ್ಯಜಾಲದಿಂದ ಹಿಡಿದುಕೊಂಡು ಮದುವೆಗೆ ಪ್ರೋತ್ಸಾಹವೀಯದುದರಿಂದ ಮದುವೆಗಂಜುತ್ತಾರೆ, ಆ ಬಗ್ಗೆ ಪ್ರಯತ್ನ ಮಾಡ ಹೋಗುವುದಿಲ್ಲ.

ಮದುವೆಯ ಅಂಜಿಕೆ ನಾನಾವಿಧದ್ದಿದೆ:— ತಾಯ್ತಂದೆಯರ ಅನಂಗೀಕಾರದ ಭಯ, ಮನೆ ಬಿಡುವ ಭಯ, ಜಗಳದ ಭಯ, ಹತ್ತಿರದ ಅವಿವಾಹಿತರ ಮಾದರಿ; ಇದಲ್ಲದೆ ತರುಣಿಯರಿಗೆ ಲಿಂಗದ ಭಯವೂ ಇರುತ್ತದೆ. ಬಲಾತ್ಕಾರದ ರತಿಯ ಅನುಭವದಿಂದ ಜುಗುಪ್ಸೆ ಹೊಂದಿದ್ದೇ ಅಂತಹ ಭಯಕ್ಕೆ ಕಾರಣ. ಇನ್ನು ಅಪ್ರಿಯ ಪ್ರಣಯಿಯೊಡನೆ ನಡೆದ ವ್ಯವಹಾರದಿಂದ ಉತ್ಪನ್ನವಾಗಿರಬಹುದು. ಒಂದು ಸಲ ಈ ಅನುಭವವಾದರೆ ಮುಗ್ಧೆಯರು ಸ್ತ್ರೀತ್ವದ ಅಂಗಸಹಜ ಭಾವವನ್ನು ಪೋಷಿಸಿಕೊಳ್ಳಲಾರದೆ ಕಡೆಯತನಕ ಅಪ್ರಬುದ್ಧರಾಗಿಯೇ ಉಳಿಯುತ್ತಾರೆ.

ಇದಲ್ಲದೆ ಕೆಲವೊಮ್ಮೆ ತಾಯ್ತಂದೆಯರು ಬಾಲಕ ಬಾಲಿಕೆಯರು ಕೇಳುವ ಲೈಂಗಿಕ ಪ್ರಶ್ನೆಗಳಿಗೆ ಮೌನದ ಇಲ್ಲವೆ ಅವಿಶ್ವಾಸ್ಯವೆನಿಸುವ ಅಸಮರ್ಪಕ ಉತ್ತರಗಳನ್ನು ಕೊಡುವುದರಿಂದ ಅವರ ಮನಸ್ಸನ್ನು ಅಜ್ಞಾತಭಯವೊಂದು ಆವರಿಸಿಬಿಡುತ್ತದೆ. ಇದು ಬೆಳೆದು ಒಂದು ಪೆಡಂಭೂತವಾಗಿ ಅವರನ್ನು ಸದಾ ಬೆದರಿಸುತ್ತಿರುತ್ತದೆ; ಬಸಿರಾಗುತ್ತೇವೆಂಬ ಭಯ ಅದರ ಪೂರ್ವೋತ್ತರ ತಿಳಿಯದ ತರುಣಿಯರಿಗೆ ಬಹಳ. ಒಂದು ವೇಳೆ ಬಹಳ ತಡವಾಗಿ ಲಿಂಗಜ್ಞಾನ ಗೊತ್ತಾದರೆ ಆಗ ತಾನು ಯೋಗ್ಯ ಪ್ರಣಯಿನಿಯಾಗಲಾರೆನೆಂಬ ಭಯದಿಂದ ಹಾಗೇ ನರಳುತ್ತ ಒಂದು ದಿನ ಸಾಯುತ್ತಾರೆ.

ಇನ್ನೊಂದು ಹೆದರಿಕೆಯೆಂದರೆ ಮದುವೆಯಾದಲ್ಲಿ ತಂತಮ್ಮಲ್ಲಿ ಬಂದಿಕೆ ಹೊಂದಿಕೆಗಳು ಅಸಾಧ್ಯವಾಗಿ ಬಿಟ್ಟರೇನು ಗತಿ?— ಎಂಬುದು. ಇದಕ್ಕೆ ತಮ್ಮ ತಾಯ್ತಂದೆ ಮುಂತಾದ ಹತ್ತಿರದ ಬಂಧುವರ್ಗದವರಲ್ಲಿ ಉಂಟಾದ ಪತಿಪತ್ನಿಯರ ಕಲಹ, ಹಿಂಸೆ, ಪ್ರತಿಹಿಂಸೆ, ವಿವಾಹವಿಚ್ಛೇದ ಮುಂತಾದವನ್ನು ಕಂಡು ಹೆದರಿ ಹೋದ ಮನಸ್ಸೇ ಕಾರಣ. ಇದಕ್ಕೇನೆನ್ನಬೇಕು? ಇದು ಕಾಗೆಯು ಗುಬ್ಬಿಯ ಮನೆಯಲ್ಲಿ ಬಂದು ಮಲಗಲು ಸ್ಥಳಬೇಡಿ, ಗೋಡೆ ಬಿದ್ದರೇನು ಮಾಡಲಿ? ಮಾಡು ಬಿದ್ದರೇನು ಮಾಡಲಿ? ಎಂದು ಎಲ್ಲಿ ಮಲಗೆಂದರೂ ಅದು ತಲೆಯಮೇಲೆ ಬಿದ್ದೀತೆಂದು ಕಪಟಪ್ರಶ್ನೆ ಕೇಳಿದಂತಾಯಿತು. ಜೀವನವೆಂದರೆ ಅಪಮೃತ್ಯುಯೋಗಗಳ ಮತ್ತು ಆಕಸ್ಮಿಕ ಕಷ್ಟನಷ್ಟಗಳ ಒಂದು ಅನಿಶ್ಚಿತ ಕಾಲಯಾಪನೆಯೆಂಬುದನ್ನು ತಿಳಿದು ಈಸಿ, ಇದ್ದು ಜಯಿಸುವ ಮನೋದಾರ್ಢ್ಯವಿಲ್ಲದವರಪಾಡು ಹೀಗೇ ಸರಿ.

ಮತ್ತೊಂದು ಬಗೆಯಲ್ಲಿ ಮೋಸಹೋದ ಪ್ರಣಯಿಗಳು: ತಮ್ಮ ಜೊತೆಗಾರ ಜೊತೆಗಾರ್ತಿಯರ ಮೋಸಕ್ಕೆ ಹಲವು ಬಾರಿ ಬಲಿಯಾಗಿ ನಿರುತ್ಸಾಹ, ನಿರಾಶೆಗಳಿಂದ ವಿರುದ್ಧ ಲಿಂಗಿಗಳು ತಮ್ಮಿಂದ ಕೀಳು ಅಥವಾ ತಾವು ಅವರಿಂದ ಕೀಳು-ಎಂಬ ಭಾವನಾದರ್ಪ ಇಲ್ಲವೆ ದೈನ್ಯದ ಒಂದು ವಿಲಕ್ಷಣ ಜಂತುಗಳಾಗಿ ಬದುಕಿಯೂ ಸತ್ತಂತಿರುತ್ತಾರೆ.

ಕೆಲವು ವೇಳೆ ವಿವಾಹಿತರನ್ನು ಪ್ರೀತಿಸಿ, ಅವರ ಜೀವನದಲ್ಲಿ ಗೊಂದಲ ಉಂಟಾದೀತೆಂಬ ಭಯದಿಂದ ಪ್ರಣಯಾಕ್ರಾಂತರು ಮದುವೆಯ ಮಾತೆತ್ತದೆ ನೋಯುತ್ತಿರುತ್ತಾರೆ. ಏಕೆಂದರೆ, ಅವರ ಮನಸ್ಸು ಅವಿವಾಹಿತ ಪ್ರಣಯಿಗಳು ಮೊದಲು ಒಪ್ಪಿ ಆ ಮೇಲೆ ತಿರಸ್ಕರಿಸಿಯಾರೆಂಬ ಭಯದಿಂದ ಯಾವಾಗಲೂ ಸುರಕ್ಷಿತವೆನಿಸುವ ವಿವಾಹಿತರನ್ನೇ ಅರಸುತ್ತದೆ ಎಂಬುದು ಒಂದು ಮನಃಶಾಸ್ತ್ರದ ಗುಟ್ಟು.

ಇದರ ಮೇಲೆ ಗಂಡ ಹೇಳಿದಂತೆ ಕೇಳಬೇಕಾದೀತೆಂಬ ಹೆದರಿಕೆಯಿಂದ ಇಂದಿನ ಅನೇಕ ಉದ್ಯೋಗನಿರತ ಸ್ತ್ರೀತರುಣಿಯರು ಮದುವೆಯಾಗಲು ಅಂಜುತ್ತಾರೆ. ಇದಕ್ಕೆ ಪ್ರೇಮಬಲದ ಬಗ್ಗೆ ಅವರಿಗಿರುವ ಅಜ್ಞಾನವೇ ಕಾರಣ. ಅಲ್ಲದೆ, ಒಮ್ಮೊಮ್ಮೆ ಮನೆಯಲ್ಲಿ ತಮ್ಮ ತಾಯಂದಿರನ್ನು ತಂದೆ ಆ ರೀತಿ ಸರ್ವಾಧಿಕಾರತ್ವ ಮನೋಭಾವದಿಂದ ನಡೆಸಿಕೊಂಡಿದ್ದನ್ನು ನೋಡಿ ಅಂಜಿಕೆ ಹುಟ್ಟಿರುವುದೂ ಕಾರಣವಾಗಬಲ್ಲುದು. ಹೀಗೆ ಸಾಮಾನ್ಯ ಅವಿವಾಹಿತರಿಗೆ ಇಂತಹ ಹಲವಾರು ಹೆದರಿಕೆಗಳು ಅಂಟಿಕೊಂಡಿರುತ್ತವೆ. ಆದರೆ ಇಂತಹ ಪ್ರತಿಯೊಬ್ಬ ವ್ಯಕ್ತಿಯೂ ಒಳಗೆ ಇಷ್ಟು ಅಂಜಿಕೆಯಿದ್ದರೂ ಹೊರಗೆ ಮಾತ್ರ ತನಗೆ ತಾನೇ ಯಜಮಾನ (ಮಾನಿತಿ)ನಾಗಿ ಉಳಿಯುವುದೇ ಸುಖಕರವೆಂದು ತಿಳಿದು ತಾನು ಮದುವೆಯಾಗದೆ ಉಳಿದೆನೆಂದು ಜಂಭಕೊಚ್ಚುತ್ತಿರುತ್ತಾನೆ (ತ್ತಾಳೆ).

ಕೆಲವು ತರುಣಿಯರು ಅಕ್ಕಮಹಾದೇವಿಯಂತೆ ಅದೃಶ್ಯ, ಅಸ್ಪೃಶ್ಯನಾದ ಪ್ರಣಯಿಯನ್ನು ಆರಾಧಿಸುತ್ತ ಕಾಲಹಾಕುತ್ತಾರೆ. ಹಾಗಲ್ಲದಿದ್ದರೆ ತನ್ನ ಪ್ರಣಯದೇವ ಸತ್ತು ಹೋಗಿ ೨೦ ವರ್ಷವಾಯಿತೆಂದು ಹೇಳಿಕೊಂಡು ತಿರುಗುತ್ತಾರೆ. ನಿಜವಾಗಿ ಅಂಥವನೊಬ್ಬನಿದ್ದರೆ ಅವನ ಸರಿ ಯಾರೂ ಇಲ್ಲವೆಂದು ಉಳಿದವರನ್ನು ಹೋಲಿಸಿ, ನಿರಾಶರಾಗಿ ಹಳೆಯಗಂಡನ ಧ್ಯಾನವೇ ಗತಿ ಎಂದುಕೊಂಡು ಬಿದ್ದಿರುತ್ತಾರೆ. ಇವರ ಗಮನಕ್ಕೆ ಬಂದರೆ ಅವರು ತಮ್ಮ ಆ ಮೃತ ಎಂಥವನೆಂಬುದನ್ನೂ ಅವನನ್ನು ತಾವು ಪ್ರೀತಿಸಿದ್ದು ನಿಜವೆಂಬುದನ್ನೂ ಅರಿಯದೆ ಕಲ್ಪನಾವಿಲಾಸಿನಿಯರಾಗಿ ಇಂಥ ಭ್ರಾಂತಿಯಲ್ಲಿ ಮುಳುಗಿರುತ್ತಾರೆ. ನಿಜವಾಗಿಯೂ ಆ ವ್ಯಕ್ತಿ ಇದ್ದಾಗಲೂ ಮದುವೆಯಾಗಲು ಅಂಥವರು ಅಂಜಿಯೇ ಇದ್ದರು!

ತಂದೆ ತಾಯಿಗಳಿಗಂಟಿಕೊಂಡಿರುವುದರಲ್ಲಿ, ಇನ್ನೊಬ್ಬರಲ್ಲಿ ವಿಶ್ವಾಸವಿಡದೆ ಸಂಶಯಾತ್ಮರಾಗಿರುವುದರಲ್ಲಿ ಮತ್ತು ಮದುವೆಯ ಅನಿವಾರ್ಯವಾದ ಸಂಭಾವ್ಯ ಅಪಾಯವನ್ನು ಎದುರಿಸದಿರುವುದರಲ್ಲಿ ಯಾವ ಧೈರ್ಯವಿದೆ? ಆದುದರಿಂದ ಅವಿವಾಹಿತರೆಲ್ಲ ರಣಹೇಡಿಗಳೆಂದು ಧಾರಾಳವಾಗಿ ಹೇಳಬಹುದು.

ನ್ಯಾಯ ಕೊಡದ ನ್ಯಾಯಾಧಿಕಾರಿ !

ನ್ಯಾ. ಮೂ. ಎನ್ನಾ ಕ್ರಾಸ್ ಎಂಬ ಹೆಸರು ಅಮೇರಿಕದಲ್ಲಿ ಜನಜನಿತವಾಗಿದೆ. ಅವಳು ಸ್ತ್ರೀತ್ವದ ಸಂಪೂರ್ಣತೆಯನ್ನು ಮುಟ್ಟಿ ಪುಂಸ್ತ್ರೀಭೇದವನ್ನು ವಿವರಿಸಿದಂತ ಸಂಸ್ಕೃತಿಸಂಪನ್ನ ವ್ಯಕ್ತಿಯಾಗಿದ್ದಾಳೆ.

ಎನ್ನಾ ಕ್ರಾಸಳು ಒಂದು ವರ್ಷದ ಮಗುವಿದ್ದಾಗ ಅವಳನ್ನು ಕರೆದುಕೊಂಡು ಅವಳ ತಾಯ್ತಂದೆಯರು ಅಮೇರಿಕಕ್ಕೆ ಬಂದರು. ಬಡತನದಲ್ಲಿದ್ದು ದುಡಿಯುತ್ತ ಕಲಿತು ದೊಡ್ಡವಳಾಗಿ ಮೊದಲು ವಕೀಲಿಯ ವೃತ್ತಿಯನ್ನು ಪ್ರಾರಂಭಿಸಿದಳು. ೧೯೨೨ ರಲ್ಲಿ ಡಾ. ಜಸಿ ಡೋರ್ ಕ್ರಾಸರನ್ನು ಮದುವೆಯಾದಳು. ಅವಳಿಗೀಗ ಇಬ್ಬರು ಹೆಣ್ಣುಮಕ್ಕಳಿದ್ದಾರೆ. ಅವರಿಬ್ಬರೂ ವೈದ್ಯಶಾಸ್ತ್ರವನ್ನು ಕಲಿಯುತ್ತಿದ್ದಾರೆಂದು ತಿಳಿದು ಬರುತ್ತದೆ.

ವಕೀಲಿಯಲ್ಲಿ ಹೆಸರು ಪಡೆದು ಒಮ್ಮೆ ಎನ್ನಾ ಕ್ರಾಸಳು ನ್ಯೂಯಾರ್ಕಿನಲ್ಲಿ ನ್ಯಾಯಾಧಿಕಾರಿಯ ಹುದ್ದೆಗೆ ಆರಿಸಲ್ಪಟ್ಟಳು. ಅವಳ ನ್ಯಾಯನಿರ್ಣಯ ಅನೇಕರನ್ನು ಆಶ್ಚರ್ಯಚಕಿತರನ್ನಾಗಿ ಮಾಡುವಂಥದಿತ್ತು.

ನಗರದಲ್ಲಿ ಜೂಜಿನ ವಿರುದ್ಧ ಕಾಯಿದೆ ಅಮಲಿನಲ್ಲಿದ್ದಾಗ ನಗರಾಧ್ಯಕ್ಷನು ಜೂಜಾಡುತ್ತಿರುವಾಗ ಒಂದು ವಿರಾಮಧಾಮ (Club)ದಲ್ಲಿ ಕೆಲವರನ್ನು ಹಿಡಿದು ಎನ್ನಾ ಕ್ರಾಸಳ ಎದುರು ಹಾಜರು ಮಾಡಿಸಿದನು. ಕೈದಿಗಳೆಲ್ಲರೂ ಗಾಬರಿಯಿಂದ ಹೆಸ್ಪಳಿಸುತ್ತಿದ್ದಾಗ ಒಮ್ಮಿಂದೊಮ್ಮೆ ನ್ಯಾಯಮೂರ್ತಿ ಕ್ರಾಸಳು 'ಕಟ್ಟಳೆಯನ್ನು ವಜಾಮಾಡಿದ್ದೇನೆ' ಎಂದುಬಿಟ್ಟಳು. ಇದರಿಂದ ಅವರಿಗೆ ಆನಂದಾಶ್ಚರ್ಯಗಳೂ ನಗರ ಪಿತನಿಗೆ ಕೋಪತಾಪಗಳೂ ಏಕಕಾಲದಲ್ಲಿ ಉಂಟಾದವು. 'ನಾನು ಹಾಜರು ಪಡಿಸಿದ ಕಟ್ಟಳೆಗಳನ್ನೆಲ್ಲ ನೀವು ಹೀಗೆ ತೆಗೆದು ಹಾಕಿ ಬಿಟ್ಟರೆ ನಾನೇನು ಮಾಡಬೇಕು?' ಎಂದು ಉಗ್ರ ಸ್ವರದಿಂದ ನಗರಾಧ್ಯಕ್ಷ ಕೇಳಿದ. ಅದಕ್ಕುತ್ತರವಾಗಿ ನ್ಯಾ. ಮೂ. ಕ್ರಾಸಳು— 'ಬಡವರ ವಿಶ್ರಾಂತಿಸ್ಥಳಗಳನ್ನು ಹೊಕ್ಕು ಹಿಡಿದು ತರುವ ಅಪರಾಧಿಗಳ ಜೊತೆಗೆ ಸಿರಿವಂತರ ವಿಹಾರಾವಾಸ ಮಂದಿರಗಳಲ್ಲೂ ನುಗ್ಗಿ ಅಲ್ಲಿಯ ಅಪರಾಧಿಗಳನ್ನೂ ಹಿಡಿದು ತಂದರೆ ಕಟ್ಟಳೆ ನಡೆಸುತ್ತೇನೆ' ಎಂದುಬಿಟ್ಟಳು; ಆಗ ನಗರ ಪಿತನ ಮೋರೆ ಎಷ್ಟಗಲವಾಗಿರಬೇಕೆಂಬುದನ್ನು ಊಹಿಸಬಲ್ಲಿರಾ?

ಅಪರಾಧಿಗಳನ್ನು ಹಗೆಗಾರರೆಂದು ತಿಳಿಯದೆ ಮನೋದೌರ್ಬಲ್ಯವುಳ್ಳವರೆಂದು ಗಣಿಸಿ ಅವರಿಗೆ ದಂಡನೆಯ ಬದಲು ಶಿಕ್ಷಣವನ್ನು ಕೊಡುವ ನ್ಯಾಯ ಮರ್ಮಜ್ಞತೆ ಎನ್ನಾ ಕ್ರಾಸಳಲ್ಲಿದ್ದುದರಿಂದ ಮೇಲಿನಂತೆ ಎಷ್ಟೋ ಸಲ ಅವಳು ಕಾಯ್ದೆಗೆ ಬಗ್ಗದೆ ನ್ಯಾಯ ನಿರ್ಣಯ ಕೊಟ್ಟದ್ದುಂಟು. ಆದರಿಂದಲೇ ಇವಳನ್ನು 'ನ್ಯಾಯ ಕೊಡದ ನ್ಯಾಯಾಧಿಕಾರಿ' ಎಂದು ವಿನೋದ ತುಂಬಿದ ಹೆಮ್ಮೆಯಿಂದ ಜನರು ಆಡಿಕೊಳ್ಳುತ್ತಾರೆ.

ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯ ಒತ್ತಾಯಕ್ಕೆ ಬಲಿಯಾಗಿ ಪಾಪಾಚಾರಕ್ಕಿಳಿದ ಅನೇಕರಿಗೆ ಉತ್ತಮ ಮಾರ್ಗವನ್ನು ನ್ಯಾ. ಮೂ. ಕ್ರಾಸಳು ತೋರಿಸಿಕೊಟ್ಟಿದ್ದಾಳೆ. Legal ಶಾಸನಬದ್ಧ ನಿರ್ಣಯಗಳಿಗಿಂತ Legitimate ಮಾನವಧರ್ಮಬದ್ಧ ನಿರ್ಣಯಗಳೇ ಅವಳ ವ್ಯಕ್ತಿತ್ವವನ್ನು ಅಷ್ಟು ಸುಂದರಗೊಳಿಸಿದವು. ಈ ದೃಷ್ಟಿಯಿಂದ, ದಾರಿದ್ರ್ಯಮೂಲ ಪಾಪಾಚಾರಗಳನ್ನು ತಡೆಗಟ್ಟಲು ಆಕೆ ವಾಷಿಂಗ್ಟನ್ ಹೈಟ್ ಸಿಟಿಜೆನ್ಸ್ ಕಮಿಟಿ ಎಂಬುದನ್ನು ೧೪ ರಿಂದ ೧೮ ರ ವರೆಗಿನ ತರುಣರಿಗಾಗಿಯೂ ವನಿತಾ ವಿರಾಮಧಾಮ ಮಂಡಲದ ಮೂಲಕ ಯೂಥ್ ಕನ್ಸರ್ವೇಶನ್ ಕಮಿಟಿಯನ್ನು ಅದೇ ವಯಸ್ಸಿನ ತರುಣಿಯರಿಗಾಗಿಯೂ ಸ್ಥಾಪಿಸಿದಳು. ಇದರಿಂದ ವ್ಯಭಿಚಾರ ಜೂಜು ಮುಂತಾದ ಪಾಪ ಪ್ರವೃತ್ತಿ ನಿಂತು ಬಹಳ ಮಟ್ಟಿಗೆ ಅವರು ಸುಧಾರಿಸುವಂತಾಯಿತು. ಹೆಂಗಸರ ಬಗ್ಗೆ ನ್ಯಾ. ಮೂ. ಎನ್ನಾ ಕ್ರಾಸಳ ತೀರ್ಪು ಹೀಗಿದೆ:—

"ಗಂಡಸಿಗೆ ದೊರೆವ ಅರ್ಧದಷ್ಟು ಮರ್ಯಾದೆಯನ್ನು ಹೊಂದಬೇಕಾದರೆ ಹೆಂಗಸು ಅವನ ೨ ರಷ್ಟು ಉತ್ತಮಳೆನಿಸಬೇಕು. ಅಲ್ಲದೆ ಕಾಯಿದೆಯ ಮೂಲಕ ಹೆಂಗಸರಿಗೆ ಗಂಡಸರೊಡನೆ ಸಮಾನ ಸ್ಥಾನ ಕೊಡಿಸುವುದು ಅಸಾಧ್ಯ; ಕೊಡಿಸಿದರೆ ಅದು ಸಫಲವಾಗದು" ಎಂದು ನಿರ್ಣಯ ಕೊಟ್ಟಿದ್ದಾಳೆ. 'ಗಂಡಸಿಗೆ ವಿಚಾರಶಕ್ತಿ ಆತ್ಮಸೌಂದರ್ಯಕ್ಕೆ ಪ್ರಕಾಶ ಸಾಧನವೆನಿಸಿದರೆ, ಹೆಂಗಸಿಗೆ ಪ್ರೇಮವೇ ಆ ಸಾಧನ ಎಂಬುದು ಬಹುಪಕ್ಷ ಅನುಭವ ಸಿದ್ಧವಾದುದೆಂಬುದು ಇದರಿಂದ ಸ್ಪಷ್ಟವಾಗುವುದಿಲ್ಲವೆ? ಸ್ತ್ರೀ ಪುರುಷರು ನಿರ್ವಿಕಾರ ಮನಸ್ಸಿನಿಂದ ಈ ಮಾತನ್ನು ಮನನ ಮಾಡುವರೆ?

ನರಾವತಾರ

ಕೋಟಿ ಹೇಳುತ್ತಾನೆ— ಜಗತ್ತಿನಲ್ಲಿ ಎರಡು ಬಗೆಯ ಯಃಕಶ್ಚಿತ್ ಪುರುಷರಿದ್ದಾರೆ—ಎಂದು. ಹೇಳಿದ್ದಷ್ಟನ್ನೂ ಮಾಡಲು ಬರದವರದು ಮೊದಲ ವರ್ಗ; ಹೇಳಿದ್ದಷ್ಟನ್ನಲ್ಲದೆ ಇನ್ನಾವುದನ್ನೂ ಮಾಡಲಾರದವರದು ಎರಡನೆಯ ವರ್ಗ!

ಮಾನಸಿಕವಾಗಿ ನರಾವತಾರಿ ನಾಲ್ಕು ಕಾಲಿನದೊಂದು ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತಾನೆ. ಅದರ ಒಂದು ಕಾಲು ಅವನ ಉದ್ಯೋಗ, ೨ನೆಯದು ಅವನ ಕಲಾಸಂಗತಿ, ೩ನೆಯದು ಶ್ರಮನಿವಾರಕ ಕ್ರೀಡೆ ಮತ್ತು ನಾಲ್ಕನೆಯದು ಅವನ ಭೌತಿಕ ಶರೀರ.

ಅವನ ಕುರ್ಚಿಗೆ ಅಂತಹ ನಾಲ್ಕು ಘನವಾದ ಕಾಲುಗಳಿದ್ದರೆ ಜೀವಾವಧಿ ಅವನು ಸುಖವಾಗಿ ಮತ್ತು ಸುರಕ್ಷಿತನಾಗಿ ಬದುಕಬಲ್ಲನು. ಒಂದು ಕಾಲು ತೀರ ಗಿಡ್ಡಾಗಿದ್ದರೆ ಇಲ್ಲವೆ ಕಳೆದು ಹೋಗಿದ್ದರೆ ಅವನು ತಕ್ಕಮಟ್ಟಿಗೆ ಸುರಕ್ಷಿತವಾಗಿ ಕಾಲಹಾಕಬಲ್ಲ. ೨ ಕಾಲುಗಳು ನ್ಯೂನವಾಗಿದ್ದರೆ ಅವನು ಅಸುಖಿಯಾಗುತ್ತಾನೆ. ಕೆಲವರ ಕುರ್ಚಿಯ ನಾಲ್ಕೂ ಕಾಲುಗಳು ಭಿನ್ನಭಿನ್ನ ಉದ್ದಳತೆಯವಿರುತ್ತವೆ, ಕೆಲವರದಕ್ಕೆ ಒಂದು ಕಾಲೂ ಇರುವದಿಲ್ಲ— ಅದರ ಪರಿಣಾಮವಾಗಿ ಸಮತೋಲವನ್ನಿಟ್ಟುಕೊಳ್ಳಲಾರದೆ ಅವರು ಧೊಪ್ಪನೆ ಉರುಳಿಬೀಳುತ್ತಾರೆ. ಆದರೆ ಮೂರ್ಖರ ಕುರ್ಚಿಗೆ ನಾಲ್ಕೂ ಕಾಲುಗಳು ಸರಿಯಾಗಿದ್ದರೂ ಒಮ್ಮೊಮ್ಮೆ ಬಿದ್ದು ಏಳಲಾರದಂಥ ಪೆಟ್ಟನ್ನು ತಿನ್ನುತ್ತಾರೆ. ಅಂಥವರ ಕುರ್ಚಿಯೆನ್ನುತ್ತದೆ—

'ನಾಲ್ಕು ಕಾಲುಗಳುಂಟು
ನಡೆ ಬಾರದೆನಗೆ;
ನಾಲ್ಕು ಕಾಲಿನ ಮೇಲೆ
ಮೂರ್ಖತೆಯ ಹಲಗೆ;
ಕೈಯೆರಡು ಬೆನ್ನೊಂದು
ಇದ್ದರೂ ವ್ಯರ್ಥ.
ನನ್ನೇರಿದವ ಮೂಳ—
ದೇವ, ಅಪಾರ್ಥ!!'

ಕೊಬ್ಬಿದ ಹುಡುಗಿಯರು!

'ಅನೇಕ ಹುಡುಗಿಯರು ಕೊಬ್ಬಿ ಹಾಗೇಕಿರುತ್ತಾರೆ; ಇದಕ್ಕೆ ಕಾರಣವೇನು?' ಎಂದು ಕೊಬ್ಬಿದ ಹುಡುಗಿಯರನ್ನೆಲ್ಲ ಗಣತಿಸಿದ ಮೇಲೆ ತಾವೇ ಅನೇಕ ಸಲ ಪ್ರಶ್ನಿಸಿಕೊಂಡು ಖರೆಯಾಗಿ ಸಂಕಟಕ್ಕೀಡಾಗಿದ್ದೇವೆ. ಅದಕ್ಕೆ ಗುಣತಃ ಮತ್ತು ಅವರ ಸಂಬಂಧ, ಬೆಳವಣಿಗೆ ಪಡೆಯುವ ಜೊತೆ, ಮಾತ್ರವಲ್ಲ ಭಾವನೆಗಳನ್ನು ಕೈಕೊಳ್ಳಲು ಅಂಜುವುದೇ ಕಾರಣವೆಂದು ಕೊಲಂಬಿಯಾ ವಿಶ್ವವಿದ್ಯಾನಿಲಯದ ಡಾ. ಹೈಲ್ಡ್ ಬ್ರೂಕ್‌ರವರು ಕಂಡುಹಿಡಿದಿದ್ದಾರೆ.

ದಪ್ಪ ವ್ಯಕ್ತಿಯರು ಯಾವಾಗಲೂ 'ಅದೃಷ್ಟ' ಎಂದು ತಮ್ಮ ದಪ್ಪತನವನ್ನು ದೂರಿಕೊಳ್ಳುತ್ತಲೇ ಇರುತ್ತಾರೆ. ಆದರೆ ಅದನ್ನು ಹೋಗಲಾಡಿಸಿಕೊಳ್ಳಲು ಏನನ್ನೂ ಮಾಡುವುದಿಲ್ಲ. ಏಕೆಂದರೆ, ದಪ್ಪನೆಯವರು ಮೂಲತಃ ರಣಹೇಡಿಗಳು. ತಮಗಿಲ್ಲದ ಶಕ್ತಿ, ಸುರಕ್ಷಿತತೆ, ಮತ್ತು ಪ್ರಧಾನ್ಯಗಳನ್ನು ದಪ್ಪತನದಿಂದ ತುಂಬಿಕೊಂಡು ಸಮಾಧಾನಪಟ್ಟುಕೊಳ್ಳುವರು!

ವ್ಯಯವಾದ ಶಕ್ತಿಯನ್ನು ತುಂಬಿಕೊಳ್ಳಲು ಬೇಕಾಗುವುದಕ್ಕಿಂತ ಹೆಚ್ಚಿನ ಆಹಾರವನ್ನು ತೆಗೆದುಕೊಳ್ಳುವುದೇ ಕೊಬ್ಬಿಗೆ ಕಾರಣ. ತಿನ್ನುವುದನ್ನು ಕಡಿಮೆಮಾಡಿ ವ್ಯಾಯಾಮವನ್ನು ಹೆಚ್ಚಿಸುವುದೇ ಇದಕ್ಕೆ ಮದ್ದು. ಆದರೆ ಹೀಗೆ ಮಾಡೆಂದರೆ ಸ್ಥೂಲಕಾಯದ ಸುಂದರಿ ಮಾತಾಡಲೊಲ್ಲಳೆಂದು ಡಾಕ್ಟರ ಬ್ರಕ್ಕರು ಹೇಳುತ್ತಾರೆ. ಹೀಗೆ ಮಾಡಿದರೆ ನಿಜವಾಗಿ ಸಾಮಾಜಿಕ ಜೀವನದಲ್ಲಿ ಹೆಚ್ಚು ಚಟುವಟಿಕೆದೋರಿ ತನ್ಮೂಲಕ ಹೆಚ್ಚು ಸುಖವನ್ನೂ ಇಷ್ಟಮಿತ್ರರೊಡನೆ, ಸಮಾಜದ ಜನರೊಡನೆ ಹೆಚ್ಚಿನ ಹೊಂದಿಕೆಯನ್ನೂ ಪಡೆಯಬಹುದು.

ಇದರ ಮೇಲೆ ದಪ್ಪನೆಯ ಹುಡುಗಿಯರು ಕಲಿಯತಕ್ಕ ಪಾಠವೊಂದಿದೆ: ತಮ್ಮ ಸಂಗಾತಿಗಳ ಗುಣ ಅಭಿರುಚಿಗಳನ್ನು ಅರಿತುಕೊಂಡು ವಾಸ್ತವವಾದ ಸಮಸ್ಯೆಗಳನ್ನು ಅವಕ್ಕೆ ಸಾಕಷ್ಟು ಮರ್ಯಾದೆ ಮತ್ತು ಗಮನಕೊಟ್ಟು ಬಿಡಿಸಿ ಸಂಹೊಂದಲು ಪ್ರಯತ್ನಿಸುವುದು.


ಆಧುನಿಕ ಲೇಖಕನೊಬ್ಬನು ದಪ್ಪನೆಯವರ ಸಮಸ್ಯೆಯನ್ನು ಹೀಗೆ ಚಿತ್ರಿಸಿದ್ದಾನೆ: 'ಪ್ರತಿಯೊಬ್ಬ ಕೊಬ್ಬಿದ ವ್ಯಕ್ತಿಯಲ್ಲೂ ತೆಳ್ಳನೆಯ ವ್ಯಕ್ತಿಯೊಂದು ಸೆರೆಯಾಗಿದ್ದು ಪ್ರತಿಕ್ಷಣವೂ ಹೊರಹೊರಡಲು ಹೋರಾಡುತ್ತಿರುವುದು.'

ಕೊಬ್ಬಿದವರು ಸಾಮಾಜಿಕ ಸಂಬಂಧ ಮತ್ತು ಮಾಂಸಖಂಡಗಳ ಚಟುವಟಿಕೆ ಇವನ್ನು ಒಲ್ಲೆನೆನ್ನಲು ಅವರಿಗಿರುವ ಅಪಾಯ, ಭಯ ಮತ್ತು ಅರಕ್ಷಿತತೆಯ ಭಾವನೆಗಳೇ ಕಾರಣ. ಅವರು ಹಿಂದು ಮುಂದಿನ ಆಲೋಚನೆಯಿಲ್ಲದೆ, ವ್ಯಾಯಾಮ ತೆಗೆದುಕೊಳ್ಳದೆ, ತಿನ್ನುತ್ತಲೇ ಹೋಗುವುದು ಈ ಕಾರಣದಿಂದಲೇ. ಅಲ್ಲದೆ ಆಹಾರವು ಅವರಿಗೆ ಪ್ರೇಮ, ಸುರಕ್ಷಿತತೆ ಮತ್ತು ತೃಪ್ತಿ ಈ ಮೂರರಕ್ಕೂ ಬದಲಿಯಾಗಿ ನಿಂತು ಒಂದು ವಿಧದ ತಾಮಸೀ ಸಮಾಧಾನವನ್ನು ಕೊಡುತ್ತದೆ.

ದಪ್ಪವಾಗಿ ಅಸಹ್ಯಪಟ್ಟುಕೊಳ್ಳುವ ಅವರ ಭಾವನೆಯೇ ಕೆಲವೊಮ್ಮೆ ಅವರು ಭಯ ಮತ್ತು ಕಾತರತೆಯಲ್ಲಿ ಸಿಕ್ಕಿ ಬೀಳಬಹುದಾದ ಸನ್ನಿವೇಶಗಳಿಂದ ದೂರ ಇರಲು ಯತ್ನಿಸುವಂತೆ ಮಾಡುತ್ತದೆ.

ಮನಃಶಾಸ್ತ್ರ ರೀತ್ಯಾ ದಪ್ಪತನಕ್ಕೆ ತಾಯಿಯ ಅತೃಪ್ತಭಾವಗಳ ತೃಪ್ತಿ ಲಾಲಸೆಯೇ ಮೂಲ ಬೀಜ. ಚಿಕ್ಕಂದಿನಲ್ಲಿ ಅವಳಿಗೆ ಎಣಿಸಿದಷ್ಟು ದೊಡ್ಡಸ್ತಿಕೆಯ ಪೋಷಕ ಸಿಗದಿದ್ದರೆ ಆ ಅತೃಪ್ತಿಯನ್ನು ತೃಪ್ತಿಗೊಳಿಸಲು ಅವಳು ತನ್ನ ಮಗಳಿಗೆ ವಾತ್ಸಲ್ಯವನ್ನು ಅತಿ ಭೋಜನದ ಮೂಲಕ ತೋರಿಸುತ್ತಾಳೆ; ಮತ್ತು ತಾನೇ ಎಲ್ಲ ಶ್ರಮವನ್ನೂ ವಹಿಸಿಕೊಂಡು ಮಗಳನ್ನು ಅತಿ ಸುಖದಲ್ಲಿ ಬೆಳೆಯಿಸುತ್ತಾಳೆ. ಇದು ಮದುವೆಯ ವಯಸ್ಸಿಗೆ ಬರುವಷ್ಟರಲ್ಲಿ ಆ ಮಗಳನ್ನು ನೋಡಲಿಕ್ಕೆ ಬಂದವರು 'ಎದ್ದು ಹೊದ್ದು ಸ್ವರೂಪಾಯ ಎಮ್ಮೆ ಕೋಣಾಯ ಮಗಳಿರ' ಎಂದು ಕರೆವಂತೆ ಮಾಡುತ್ತದೆ. ಹಾಗೆ ತಾಯಿ ಅಥವಾ ತಂದೆಯು ಮಕ್ಕಳನ್ನು ಬಂಗಾರ ಬೆಳ್ಳಿಯ ಆಭರಣಗಳನ್ನಿಟ್ಟುಕೊಂಡಂತೆ ಇಟ್ಟುಕೊಂಡರೆ ಕಡೆಗೆ ಆಗುವುದು ಹೀಗೇ.

ಇದರ ಮೇಲೆ ತನ್ನನ್ನು ತಾಯಿ ಎಷ್ಟು ಉಪಚರಿಸಿದರೂ ಸಾಕಾಗದೆಂಬ ಪ್ರವೃತ್ತಿ ಮಗಳಲ್ಲಿ ಹುಟ್ಟಿ ಅವಳ ಮೇಲೆ ತಾಯಿಗೆ ಕೋಪವುಂಟಾಗಿ ಆ ಕೋಪದಿಂದ ಉಂಟಾದ ಪ್ರತಿಕ್ರಿಯೆಯನ್ನು ಅರಿಸಲು ಪುನಃ ಅತಿ ತಿನಿಸು [illegible] ಕಡೆಗೂ ಅಂತಹ ಹೆಂಗಸು ತನ್ನನ್ನು ತನ್ನ ಮಗಳನ್ನೂ [illegible] ತ್ತಾಳೆ. [illegible] ತಾಯಿ ತಿನಿಸಿದ ಮಗಳ [illegible]!



ಎತ್ತುಗಳು ಹೇಳುವ ಕಂನಾಡ ಕತೆ

ಲೇಖಕರು — ಶಂ. ಬಾ. ಜೋಶಿ. ಪ್ರಕಾಶಕರು, ಮನೋಹರ ಬುಕ್ಸ್ ಬಂಧುಗಳು ಧಾರವಾಡ ಪುಟಗಳು ೨೪೬+೧೦ ಬೆಲೆ ೩ ರೂಪಾಯಿ.

ಶ್ರೀ ಶಂ. ಬಾ. ಜೋಶಿ ಅವರು ಕನ್ನಡ ನಾಡಿನ ಶ್ರೇಷ್ಠ ಸಂಶೋಧಕ ಲೇಖಕರಲ್ಲಿ ಒಬ್ಬರು. ಪ್ರಸ್ತುತ ಪುಸ್ತಕವನ್ನು ಓದುತ್ತ ಹೋದಂತೆ ಊರುಗಳ ಹೆಸರಿನಲ್ಲಿ ಹುದುಗಿದ ಐತಿಹಾಸಿಕ ಸಂಗತಿಗಳನ್ನು ಲೇಖಕರು ಹೇಗೆ ಉದ್ಘಾಟಿಸಿದ್ದಾರೆ ಎಂಬುದನ್ನು ಅರಿಯಲು ಹೆಚ್ಚು ಹೆಚ್ಚು ಕುತೂಹಲ ಉಂಟಾಗುತ್ತದೆ. ಈ ಪುಸ್ತಕಕ್ಕೆ ನಾಡಿಗರ ರೂಢಿ, ಸಂಪ್ರದಾಯ, ಪೂರ್ವ ಪರಂಪರೆ ಇವನ್ನೇ ಪ್ರಮುಖ ಆಧಾರವಾಗಿಟ್ಟುಕೊಂಡಿರುವದಾಗಿ ಲೇಖಕರು ಹೇಳುತ್ತಾರೆ. “ಸಂಪ್ರದಾಯ, ಪೂರ್ವ ಪರಂಪರೆಗಳು ಪ್ರತ್ಯಕ್ಷ ಜೀವನದ ಭಾಗವಾಗಿದ್ದು, ಶಾಸನಾದಿಗಳು ಅದರ ನೆರಳು” ಎಂದು ಹೇಳಿ ಐತಿಹಾಸಿಕ ಪ್ರಮುಖ ಆಧಾರಗಳಾದ ಶಾಸನಾದಿಗಳಿಗೆ “ಗೌಣ ಸ್ಥಾನವಲ್ಲದೆ ಪ್ರಥಮ ಸ್ಥಾನವು ದೊರೆಯಲಾರದು” ಎಂದು ಮುಕ್ತಕಂಠವಾಗಿ ಲೇಖಕರು ಹೇಳಿದ್ದು ಸಂಶೋಧಕರಿಗೆ ರುಚಿಸುವದೋ ಇಲ್ಲವೋ ಹೇಳಲಿಕ್ಕಾಗದು. ಸಂಪ್ರದಾಯ, ರೂಢಿ, ಎನ್ನುತ ಊರ ಹೆಸರುಗಳನ್ನು ಹಿಂಬಾಲಿಸಿ, ಹೀಗೆ ಕೇವಲ ಕಲ್ಪನೆಯನ್ನು ಹರಿಬಿಟ್ಟು ಸಾಗಿದರೆ ಅದು ಕೇಳುವ ಬೋಧಗಳಲ್ಲಿ ಕಾಣುವ ಕೊಳ್ಳುವ ಅಕ್ಷರ ರೂಪ ವೈವಿಧ್ಯವನ್ನು ಕಂಡ ಆಭಾಸವಾಗಲಿಕ್ಕಿಲ್ಲವೇ? ಎಂಬ ಶಂಕೆ ಉದಯಿಸುತ್ತದೆ. ಈ ಬಗ್ಗೆ ಪಂಡಿತರಲ್ಲಿಯೂ ಸಂಶೋಧಕರಲ್ಲಿಯೂ ಮತಭೇದವಾಗಬಹುದಾದರೂ ಶ್ರೀ ಜೋಶಿಯವರು ಮುಂದಿಸಿದ ವಿಷಯ ವಿಚಾರಾರ್ಹವಾಗಿರುವದಲ್ಲದೆ ಎಷ್ಟೋ ಸಲ ಪ್ರತಿಪಾದನೆಯು ಯುಕ್ತವಾಗಿದೆಯೆಂದೂ ತೋರುತ್ತದೆ. ಸಂಸ್ಕೃತಿ ವಿಚಾರ ಎಂಬ ಪ್ರಕರಣದಲ್ಲಿ ಲೇಖಕರು ಎಷ್ಟೋ ಹೊಸ ಮಾತುಗಳನ್ನು ಹೇಳಿದ್ದಾರೆ. ನಾಡಿಗರು, ಕುಡವರು, ನಾಡವರು, ರೆಡ್ಡಿಗಳು ಮೊದಲಾದವರ ಮೂಲದ ಬಗ್ಗೆ ದೀರ್ಘ ವಿವೇಚನೆಯಿದೆ. ಈ ಪುಸ್ತಕದ ಬಗ್ಗೆ ಸಂಶೋಧಕರಲ್ಲಿ ಭಿನ್ನ ಮತ ವ್ಯಕ್ತವಾದರೂ ಒಂದು ಲಾಭವೇ ಎನ್ನಬೇಕು. ಈ ಮೂಲಕ ಹೆಚ್ಚಿನ ಸಂಶೋಧನೆಯಾಗಿ ಚರ್ಚೆ ನಡೆದು ಇಂಥ ವಿಷಯಗಳಿಗಾಗಿ ವಿಮರ್ಶಾ ರಂಗವೊಂದು ನಿರ್ಮಿಸಿಟ್ಟು ಸರ್ವಸಮ್ಮತವಾದ ಅಸಂದಿಗ್ಧ ತೀರ್ಮಾನಗಳು ಹೊರಬಿದ್ದರೆ ಅದು ಬೇಡವಾದೀತೆ? ಈ ದೃಷ್ಟಿಯಿಂದ ಪ್ರಸ್ತುತ ಗ್ರಂಥವನ್ನು ನಾವು ಆತ್ಮಾದರದಿಂದ ಸ್ವಾಗತಿಸಿ ಇದಕ್ಕಾಗಿ ಪಟ್ಟ ಪರಿಶ್ರಮಕ್ಕೂ ಮಾಡಿದ ಅಭ್ಯಾಸಕ್ಕೂ ಮುಂದಿಟ್ಟ ಸಂಶೋಧನೆಗೂ ಲೇಖಕರನ್ನು ಅಭಿನಂದಿಸುತ್ತೇವೆ. ವಾಚನಾಲಯಗಳೂ ಶಾಲೆ ಕಾಲೇಜುಗಳೂ ಇದನ್ನು ಅವಶ್ಯ ಸಂಗ್ರಹಿಸಬೇಕಲ್ಲದೆ ಇತಿಹಾಸದ ಹಾಗೂ ಭಾಷಾ ಶಾಸ್ತ್ರದ ವಿದ್ಯಾರ್ಥಿಗಳು ಅಗತ್ಯ ಅಭ್ಯಸಿಸಬೇಕೆಂದು ಧಾರಾಳವಾಗಿ ಹೇಳುತ್ತೇವೆ.

ಬಾರಕೆ

ಲೇಖಕರು— ವ್ಹಿ. ಜಿ. ಭಟ್ಟ ಎಂ.ಎ. ಪ್ರಕಾಶಕರು, ಕರ್ಣಕುಟಿ ಗ್ರಂಥಮಾಲೆ ಗೋಕರ್ಣ. ಪುಟಗಳು ೫೩ ಬೆಲೆ ೧೨ ಆಣೆ

ಲೋಕಕ್ಕೆಲ್ಲ ಒಂದು ಬಗೆಯ ಮೋಹ ಮಾಯೆಯ ಆವರಣವಿದೆಯೆಂದೇ ಜೀವಕ್ಕೆ ಇನ್ನಷ್ಟು ಇನ್ನಷ್ಟು ಬದುಕಿರಬೇಕೆಂಬ ಆಶೆ ಅಂಕುರಿಸುವದು. ನಮ್ಮ ಸುತ್ತಲಿನ ಸಮಾಜಕ್ಕೂ ರೂಢಿ, ಪರಂಪರೆ, ಸಂಸ್ಕೃತಿಗಳ ಮುಸುಕು ಉಂಟೆಂದೇ ಸಾಮಾಜಿಕ ಜೀವನವು ನಮಗೆ ಕಟು ನಿಕಟವಾಗಿ ಪರಿಣಮಿಸಿಲ್ಲವಷ್ಟೇ ಅಲ್ಲ, ಅದು ರಮ್ಯ ಮನೋಹರವೆಂದೇ ತೋರುತ್ತದೆ. ಶ್ರೀ ಭಟ್ಟರು ಸಮವಾಗಿ ನೇರವ್ವ ಬುದ್ಧಿಯ ಮರೆಯಲ್ಲಿ ಸಮಾಜದ ಹಾಗೂ ಮನುಷ್ಯನ ಚಿತ್ತ ವಿಭ್ರಮವನ್ನೂ ಚಪಲತೆಯನ್ನೂ ಇಣಿಕಿ ನೋಡಬಹುದಾಗಿದೆ. ಲೇಖಕರು ತಮ್ಮ ಈ ಬರಹಕ್ಕೆ ಲಗುಕತೆಗಳೆಂದು ಭಾಷ್ಯ ಸೂಚಿಸಿದ್ದಾರೆ. ಹತ್ತೆಂಟು ಮಾತುಗಳಲ್ಲಿಯೇ ಒಂದು ಅರ್ಥಗರ್ಭಿತ ರಹಸ್ಯವನ್ನು ಕತೆಯಾಗಿ ಹೇಳುವ ಈ ವಿಧಾನವು ಕನ್ನಡ ಸಾಹಿತ್ಯಕ್ಕೇ ಹೊಸತು. ಈ ಲಗು ಕತೆಗಳೆಲ್ಲ “ಕೊಂಕುಪೆತ್ತ ನೊಸಲು” ಗಳಂತೆ ಸುಂದರ ಕುಳುಕುತ್ತಿವೆ. ಕತೆಗಳು ಲಗುವಾಗಿದ್ದು ಪುಸ್ತಕ ಲಘುವಾಗಿ ಕಂಡರೂ ಇವರ ಲ್ಲಿಯ ಚಿದೂಷಕ ಅಂಶಗಳು ಗುರುಗಂಭೀರವಾಗಿಯೇ ಇವೆ. ‘ಇಬ್ಬರು ದುಂಬರು’ ಎಂಬ ಲಗು ಕತೆಯು ಮನುಷ್ಯನಲ್ಲಿ ಬೇರೂರಿನಿಂತ ಪ್ರಜ್ಞಾಭಾವವನ್ನು ಅಮೂಲಾಗ್ರ ಅಲುಗಾಡಿಸಿಬಿಡುತ್ತದೆ. ‘ಬುರುಕಿ’ ಎಂಬುದರಲ್ಲಿ ಕಾಣದ್ದು ಕಂಡವರು ಕಂಡದ್ದು ಬಂಡವರು ಎಂದು ಕೇಳಿ ಕೆಂಬಲದ ಲೋಕದ ನಿಜ ರೂಪ ನಮಗೆ ಕಾಣದೇ ಹಾವಿಲ್ಲ ಕ್ಷೇಮವಾಗಿಲ್ಲವೆಂಬುದನ್ನು

ಒಳ್ಳೆ ಪರಿಣಾಮಕಾರಿಯಾಗಿ ಹೇಳಲಾಗಿದೆ. ಹೀಗೆ ಈ ಲಗು ಹೊತ್ತಿಗೆಯಲ್ಲಿ ಬರೆಯಲಾದ ೪೫ ಲಗುಕತೆಗಳಲ್ಲಿಯೂ ಒಂದಿಲ್ಲೊಂದು ವ್ಯಂಗ್ಯವಿದ್ದೇ ಇದೆ. ಭಟ್ಟರ ಈ ಹೊಸ ಸಾಹಸಕ್ಕೆ ನಾವು ತುಂಬ ಪ್ರೋತ್ಸಾಹಿಸುತ್ತೇವಲ್ಲದೆ ಅಂತಹ ವೈಶಿಷ್ಟ್ಯಪೂರ್ಣ ಬರಹಗಳನ್ನು ಅವರಿಂದ ಇನ್ನೂ ಹೆಚ್ಚಾಗಿ ನಿರೀಕ್ಷಿಸುತ್ತೇವೆ.

ಮರುಭೂಮಿಯ ಅರಬರು

ಲೇಖಕರು — ಶ್ರೀ ಎಂ. ಹರಿದಾಸ ರಾವ. ಪ್ರಕಾಶಕರು, ಸಿಟಿ ಬುಕ್ ಸ್ಟಾಲ ಉಡುಪಿ. ಪುಟಗಳು ೯೫+೫ ಬೆಲೆ ೧ ರೂ. ೮ ಆಣೆ.

ಶ್ರೀ ಹರಿದಾಸರು “ಉತ್ಕೃಷ್ಟ ಮನುಷ್ಯ” ಮತ್ತು “ಎಚ್ಚೆತ್ತ ಆಗ್ನೇಯ ಏಶಿಯಾ” ಗಳ ಮೂಲಕ ಈಗಾಗಲೇ ಕನ್ನಡ ಸಾರಸ್ವತಕ್ಕೆ ಪರಿಚಿತರಾಗಿದ್ದಾರೆ. ಈ ಪುಸ್ತಕವು ನೋಡಲು ಸಣ್ಣದಾಗಿದ್ದರೂ ಇದರ ಪುಟ ಪುಟವನ್ನೂ ಬರೆಯಬೇಕಾದಾಗ ಬರೆಹಗಾರರು ತುಂಬ ಪರಿಶ್ರಮಪಟ್ಟು ಅಭ್ಯಾಸ ಮಾಡಿದ್ದಾರೆ. ಅದನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ. ಓದಿನ ಬಂಡವಾಳವಿಲ್ಲದ ಲೇಖಕರೇ ಇತ್ತೀಚೆ ವಿಪುಲರಾಗುತ್ತಿದ್ದಾರೆ. ಒಬ್ಬರ ಅಭ್ಯಾಸದ ಲಾಭವನ್ನು ಇನ್ನೊಬ್ಬರು ಸುಲಭವಾಗಿ ಮಾಡಿಕೊಳ್ಳಬೇಕಾದರೆ ಈ ಬಗೆಯ ಪುಸ್ತಕಗಳೇ ಬೇಕು. ಈ ಲೇಖಕರು ಆಯ್ದ ವಿಷಯವು ರುಕ್ಷ ಭೂಮಿಗೆ ಸಂಬಂಧಿಸಿದ್ದಿದ್ದರೂ ನಿರೂಪಿತ ವಿಷಯವು ರುಕ್ಷವಾಗಿಲ್ಲ. ಹುಡುಗರಾಗಲಿ ಹಿರಿಯರಾಗಲಿ ಇದನ್ನು ಓದಿ ಎಷ್ಟೋ ಹೊಸ ಹೊಸ ಮಾತುಗಳನ್ನು ಸುಲಭವಾಗಿ ಅರಿಯಬಹುದಾಗಿದೆ. ಅಲ್ಲಲ್ಲಿ ರೇಖಾ ಚಿತ್ರಗಳನ್ನು ಹಾಕಿದ್ದರಿಂದ ಪುಸ್ತಕಕ್ಕೆ ಕಳೆ ಬಂದಿದೆ. ನಮ್ಮ ದೇಶಕ್ಕೆ ನೆರೆಹೊರೆಯವರೆನ್ನಿಸಿದ ಅರಬರ ಸ್ಥಿತಿಗತಿಗಳನ್ನೂ ಅವರ ಜೀವನ ಕ್ರಮವನ್ನೂ ರಾಜಕೀಯ ಸಮಸ್ಯೆಗಳನ್ನೂ ಅರಿತುಕೊಳ್ಳುವದು ಅಗತ್ಯವೇ ಆಗಿದೆ. ಅಂತರಾಷ್ಟ್ರೀಯ ತಿಳುವಳಿಕೆ ನಮ್ಮ ಜನಗಳಲ್ಲಿ ಹೆಚ್ಚಿದರೆ ಮಾತ್ರ ಸ್ವತಂತ್ರ ಭಾರತವು ಸರಿಯಾದ ಹೆಜ್ಜೆ ಹಾಕಿ ಪ್ರಗತಿಪಥದಲ್ಲಿ ನಡೆಯಬಲ್ಲದು. ಅದ್ದರಿಂದ ಪರರಾಷ್ಟ್ರಗಳ ಆಗು ಹೋಗುಗಳನ್ನೂ ನಾವು ಅಭ್ಯಸಿಸಲೇಬೇಕು. ಈ ಸೌಕರ್ಯವನ್ನು ಶ್ರೀ ಹರಿದಾಸರಾಯರು ಕನ್ನಡಿಗರಿಗೆ ಒದಗಿಸಿದ್ದಾರೆ ಇದಕ್ಕಾಗಿ ಅವರನ್ನು ನಾವು ಅಭಿನಂದಿಸುತ್ತೇವೆ.

ಮುಗಿಲ ಮಲ್ಲಿಗೆ (ಕಾದಂಬರಿ)

ಲೇಖಕರು — ಕೃಷ್ಣಮೂರ್ತಿ ಪುರಾಣಿಕ. ಪ್ರಕಾಶಕರು, ಪ್ರತಿಭಾ ಗ್ರಂಥಮಾಲೆ ಧಾರವಾಡ. ಪುಟಗಳು ಕ್ರಾ ೨೬೪. ಬೆಲೆ ೩ ರೂ.

ಶ್ರೀ ಕೃಷ್ಣಮೂರ್ತಿ ಪುರಾಣಿಕರು ಈಗಾಗಲೇ ಎಷ್ಟೋ ಕಥೆಗಳನ್ನೂ ಕವನಗಳನ್ನೂ ಬರೆದು ಕನ್ನಡ ಸಾಹಿತ್ಯ ಲೋಕಕ್ಕೆ ಪರಿಚಿತರಾಗಿದ್ದಾರೆ. ಮುಗಿಲ ಮಲ್ಲಿಗೆಯು ಇವರ ಮೊದಲ ಕಾದಂಬರಿಯಾದರೂ ಗೆಲವುಗಂಡಿದೆ ಎಂದು ಹೇಳಬಹುದು. ನಮ್ಮ ಸಮಾಜದ ನಿಜ ಚಿತ್ರವನ್ನೂ ದಿನದ ಹೋರಾಟವನ್ನೂ ಪ್ರತಿಬಿಂಬಿಸುವ ಕತೆಯಿದು. ಮಾಲತಿ ಗೋವರ್ಧನರ ಪಾತ್ರ ಪೋಷಣವು ತಕ್ಕಮಟ್ಟಿಗೆ ಚನ್ನಾಗಿಯೇ ಆಗಿದೆ. ಗೋವಿಂದರಾಯರ ಅಂತಿಮ ಪಶ್ಚಾತ್ತಾಪ, ಮಾಲತಿ, ಗೋವರ್ಧನ, ಮಾಲತಿಯ ತಾಯಿ ಭಾಗಮ್ಮ ಇವರ ತೊಳಲಾಟ ಇವುಗಳು ಸ್ಪಷ್ಟವಾಗಿ ಮೂಡಿವೆ. ಹೃದಯ ದ್ರಾವಕ ಸನ್ನಿವೇಶಗಳನ್ನು ಓದುತ್ತ ಹೋದಂತೆ ಕೊನೆಯನ್ನು ಅರಿತುಕೊಳ್ಳಲು ಮನಸ್ಸು ಹಾತೊರೆಯುತ್ತದೆ. ಈ ಆತುರವು ಕಥಾ ಲೇಖನಕ್ಕೆ ಗೆಲವುಗೊಡುವ ಒಂದು ಮುಖ್ಯಾಂಶ. ಲೇಖಕರು ಕಾದಂಬರಿಯ ಬರೆಹದಲ್ಲಿ ಸಿದ್ಧಹಸ್ತರಾಗಬಹುದೆಂಬುದಕ್ಕೆ ಸಾಕಷ್ಟು ಪ್ರಮಾಣಗಳಿವೆ. ಕಥೆಯ ಕೊನೆ ಇನ್ನಷ್ಟು ಪೋಷಣೆ ಹೊಂದಿ ಪರಿಪಾಕಕ್ಕೆ ಬರಬೇಕಿತ್ತು. ಕಥೆಯ ಮುಖ್ಯ ಪಾತ್ರಗಳನ್ನು ಕಾರಣವಿಲ್ಲದೆ ಮಡು ನೀರಲ್ಲಿ ಕೈಬಿಟ್ಟಂತಾಗಿದೆ. ಈ ಲೇಖಕರ ಕೈಯಿಂದ ಇದಕ್ಕೂ ಮಿಗಿಲಾದ ಕಾದಂಬರಿಗಳು ಹುಟ್ಟಿಬರಲೆಂದು ಹಾರೈಸುತ್ತೇವೆ.

ಕದಂಬ

ಬರೆದವರು - ಶ್ರೀಮತಿ ಸರಸ್ವತೀಬಾಯಿ ರಾಜವಾಡೆ. ಪ್ರಕಾಶಕರು, ಕರ್ನಾಟಕ ಪ್ರಪಂಚ ಉಡುಪಿ. ಪುಟ ೧೩೩, ಬೆಲೆ ರೂ. ೧ ಆ ೪

‘ಕದಂಬ’ ಬಳ್ಳಿ ‘ತಪಸ್ವಿನಿ’ ‘ಅವಳ ಉದ್ಧಾರ’ ‘ಆ ಭಿಕ್ಷುಕಿ’ ‘ಶಕಟಭ್ರಾಂತ ಪಥಿಕ’ ‘ಅಳಿ’ ‘ಗಾಯಳಿ’ ಮುಂತಾದ ಉತ್ತಮವಾದ ಕಥೆಗಳನ್ನೊಳಗೊಂಡ ೧೨ ಕಥೆಗಳಿವೆ. ಕನ್ನಡದಲ್ಲಿ ಶ್ರೀಮತಿ ರಾಜವಾಡೆ ಉತ್ತಮ ಲೇಖಿಕೆಯರ ಸಾಲಿಗೆ ಸೇರಿದವರಾಗುದರಿಂದ ಈ ಕಥಾ ಸಂಗ್ರಹದಲ್ಲಿಯ ಹಲವಾರು ಕಥೆಗಳು ಇನ್ನೂ ಚೆನ್ನಾಗಿ ರಬೇಕಾಗಿತ್ತೆನ್ನಿಸುತ್ತದೆ. ಅವರೂ ಪರವಾಯಿಲ್ಲ. ಸರ್ವರೂ ಓದಿ ಆನಂದಿಸಬಹುದು. ಪುಸ್ತಕಕ್ಕೆ ಹಾರ್ದಿಕ ಸ್ವಾಗತ.

ಲತಾ (ಕಿರುಗತೆಗಳು)

ಲೇಖಕರು ಮತ್ತು ಪ್ರಕಾಶಕರು — ಡಿ. ಎಸ್. ಶಾಳ್ಯಗಾರ್ ೩೭, ಶೇಷಾದ್ರಿ ಪುರದ ಹೊಸ ಬಡಾವಣೆ, ಬೆಂಗಳೂರು ಸಿಟಿ, ಪುಟಗಳು, ೫೮, ಬೆಲೆ ೧೦ ಆಣೆ.

ಇದೊಂದು ಕಥಾ ಸಂಗ್ರಹ. ಸುಗುಣಾದೇವಿ ಸುಧಾರಿಸಿದ ಸುದತಿ. ಲತಾ, ಕಲಾವಿದೆ, ಕನಸು, ಸವಿ ನುಡಿಯ ಸಾಹಸ. ಜಯ ಎಂಬುದಾಗಿ ೬ ಕಥೆಗಳಿವೆ. ಲೇಖಕರು ಕಥೆಯನ್ನು ಹೇಳುವ ಹದವರಿತವರು. ಭಾಷೆ ಹದವರಿಸವೆ ಓಡುತ್ತದೆಯಾದರೂ ಅಲ್ಲಲ್ಲಿ ಪ್ರಾಸದ ಮೋಹಕ್ಕೆ ಸಿಲುಕಿ ಶೈಲಿ ಶಿಥಿಲವಾಗಿದೆ. ಪುಸ್ತಕವನ್ನು ಮುದ್ರಿಸುವಾಗ ತವಕಪಟ್ಟಂತೆ ಕಾಣುತ್ತದೆ. ಪುಸ್ತಕಕ್ಕೊಂದು ಪರಿವಿಡಿ, ಪುಟ ಪುಟಕ್ಕೂ ಕಥಾನಾಮ ಇವುಗಳು ಓದುಗರು ಅಪೇಕ್ಷಿಸುವ ಅಲ್ಪ ಸೌಕರ್ಯಗಳಾಗಿವೆ. ಮುಂದಿನ ಮುದ್ರಣದಲ್ಲಿ ಇವನ್ನು ಲೇಖಕರು ಒದಗಿಸುವರೆಂದು ಆಶಿಸುತ್ತೇವೆ.

ಕೋಲ್ಗಂಬ

ಅನುವಾದಕರು : ಶ್ರೀ ಹೊಸಮನಿ ಗುಡ್ಡಪ್ಪ, ವಿದ್ವಾನ್. ಪ್ರಕಾಶಕರು ಭಾಲಚಂದ್ರ ಘಾಣೇಕರ, ಸಮಾಜ ಪುಸ್ತಕಾಲಯ, ಧಾರವಾಡ. ಪುಟ ೭೨ ಬೆಲೆ ೧೪ ಆಣೆ.

ಇದು ‘ಮರಣದಂಡನೆ’ ಎಂಬ ವಿಕ್ಟರ್ ಹ್ಯೂಗೋರವರ ಪುಸ್ತಕದ ಅನುವಾದ. ವಿಕ್ಟರ್ ಹ್ಯೂಗೋರವರು ಜಗತ್ಪ್ರಸಿದ್ಧರಾದ ಫ್ರಾನ್ಸಿನ ಕಾದಂಬರಿಕಾರರು. ಅವರ ‘ಲೇ ಮಿಸರಬಲ್ಸ್’ ಓದದ ರಸಿಕ ಭಾಗ್ಯಹೀನನೆನ್ನಬೇಕು. ಅಂತಹ ಉತ್ತಮ ಕೃತಿಕಾರರ ಕಥೆಯೊಂದನ್ನು ಯಥಾಶಕ್ತಿಯಾಗಿ ಇಲ್ಲಿ ಅನುವಾದಿಸಲಾಗಿದೆ. ಓದಿದರೆ ಸ್ವಲ್ಪ ಬೇಸರವಾಗುವದಕ್ಕೆ ಮೂಲ ಲೇಖಕರು ಕಾರಣರೋ ಅನುವಾದಕರು ಕಾರಣರೋ ಎಂಬುದನ್ನು ಕುತೂಹಲಿಗಳು ವಿಮರ್ಶಿಸಲಿ.

ಪಂಜರದ ಹಕ್ಕಿ

ಅನುವಾದಕರು ಶ್ರೀ. ಮಲ್ಲಾರಿ ಪ್ರಕಾಶಕರು ಪ್ರತಿಭಾ ಗ್ರಂಥಮಾಲೆ, ಧಾರವಾಡ ಪುಟ ೭೨ ಬೆಲೆ ೧೪ ಆಣೆ.

ಇದೊಂದು ಕಥಾಸಂಕಲನ ಇದರಲ್ಲಿ ‘ಪಂಜರದ ಹಕ್ಕಿ’ ಎಂಬ ಕಥೆ ಮೊದಲನೆಯದು. ಅದರಲ್ಲಿ ಲಾವಣ್ಯಳ ಅನುಭವದ ಮೂಲಕ ಪುರುಷ ದ್ವೇಷಿಣಿಯಾಗಿ ಕಡೆಗೆ ಮನಸ್ಸಿದ್ದೂ ಮನಸ್ಸಿಲ್ಲದ ಮನಸ್ಸಿನಿಂದ ಮದುವೆಯಾಗಿ ಬಿಡುವ ಮೋಜು ಇದೆ. ೨ನೆಯ ‘ಇಂದು ಲೇಖ’ಯಲ್ಲಿ ನಿರಾಶೆ ಹೊಂದಿದ ಪ್ರಣಯಿಯೊಬ್ಬನ ದುರಂತ ಜೀವನ ದಚಿತ್ರವಿದೆ. ೩ನೆಯ ‘ಜೇಬುನ್ನೀಸಾ’ದಲ್ಲಿ ಜೇಬುನ್ನೀಸಳ ಹತಾಶ ಪ್ರಣಯವಿದೆ. ೪ನೆಯದು ಪ್ರಣಯಪರೀಕ್ಷೆ. ಇದರಲ್ಲಿ ಮುಗ್ಧನೊಬ್ಬನು ಜಪಾನಿಗೆ ಹೋಗಿ ಒಬ್ಬನ ಪ್ರೀತಿ ಪಾತ್ರಳನ್ನು ಪ್ರೀತಿಸಿ ಪೆಚ್ಚಾಗಿ ಹಿಂದಿರುಗಿದ ಒಂದು ಮೋಜಿನ ಪ್ರಣಯ ಕಥೆಯಿದೆ. ೫ನೆಯದಾದ ‘ಸುಕು’ವಿನಲ್ಲಿ ಗೋತ್ರ ಅಡ್ಡಬಂದ ಪ್ರಣಯಿಗಳ ವಿಷಾದಾರಂಭ ಮತ್ತು ಪವಿತ್ರ ಪರ್ಯಾಂತವಾದ ಕಥೆ ಚಿತ್ರಿಸಲ್ಪಟ್ಟಿದೆ. ಈ ಕಥಾ ಸಂಗ್ರಹದ ಮೂಲ ಲೇಖಕರು ಶ್ರೀ ಚಾರುವಂದ್ಯೋಪಾಧ್ಯಾಯರು. ಇವರು ಅತ್ಯುತ್ತಮ ಕತೆಗಾರರೆಂಬುದಕ್ಕೆ ಈ ಚಿಕ್ಕ ಸಂಕಲನವೇ ಸಾಕು. ರಸಿಕರಿಗಿದು ಅಪ್ಯಾಯಮಾನವಾಗದಿರದು.

ಗಾಂಧಿ ವಾದ ಮತ್ತು ಸಮತಾವಾದ

ಅನುವಾದಕರು: ಶ್ರೀಗಳಾದ ಕಾಂ. ಲಿಂಗರಾಜ ಮುದ್ದಣ್ಣವರ ಮತ್ತು ಕಾಂ. ಮಾರ್ಗದೇವಿ, ಜಳಸಲ್ಕಿ. ಪ್ರಕಾಶಕರು ಶ್ರೀ. ಲಿಂಗರಾಜ ಮುದ್ದಣ್ಣವರ. ಪುಟ ೩೨, ಬೆಲೆ ೬ ಆಣೆ.

ಈ ಅನುವಾದವು ಶ್ರೀ. ಕಾಂ. ದಾಸ... ರಾಯರು ದಿಲ್ಲಿಯಲ್ಲಿ ಹಿಂದು ಕಾಲೇಜಿನ... ಗಾಂಧಿ ವಾದ ಮತ್ತು ಸಮತಾವಾದಗಳ ... ಮಾಡಿದ ಭಾಷಣವನ್ನು ವಿವೇಚಿಸಿ ಸದ್ಯದ ... ಕೀಯ ಮತ್ತು ಸಾಮಾಜಿಕ ಕೆಲಸಗಾರರ ಅಭ್ಯಾಸ ದರ್ಪಣವಾಗಲೆಂದು ಬರೆದವರು ... ದ್ದಾರೆ. ಈ ಹೊತ್ತಿಗೆಯನ್ನು ೧೯೪೩ ರಲ್ಲಿ ... ತಿಂಗಳು ಜೈಲಿನಲ್ಲಿದ್ದ ಶ್ರೀಯುತ ವಿದುರ... ಬಸಪ್ಪ ಶೆಟ್ಟರ ಮದುವೆಯ ಕಾಲದಲ್ಲಿ ಪ್ರಕಟ... ಲಾಯಿತೆಂದು ಅವರ ಭಾವಚಿತ್ರ ಕೊಟ್ಟು ... ಕೆಳಗೆ ಹೇಳಲಾಗಿದೆ. ವಿಚಾರಪರರಿಗಿದೊಂದು ಉತ್ತಮ ಆಹಾರವೆನ್ನದಿರಲಾರೆವು.

ಆದರ್ಶ

ಸಂಪಾದಕರು ಮತ್ತು ಪ್ರಕಾಶಕರು ಶ್ರೀ ಜಿ. ವಿ. ರಂಗಸ್ವಾಮಿ, ಮೈಸೂರು ಪ್ರಿಂಟಿಂಗ್ ಪ್ರೆಸ್ ಕಿಂಗ್ಸ ಸರ್ಕಲ, ಮಾಟುಂಗ ಮುಂಬಯಿ ೧೯. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ೩ ರೂ. ೮ ಆ. ಬಿಡಿ ಸಂಚಿಕೆ ೪ ಆಣೆ.

ಇದು ಮುಂಬಯಿಯಿಂದ ಪ್ರಕಟವಾಗುವ ಮಾಸಪತ್ರಿಕೆ ನಮ್ಮ ಕೈಗೆ ಬಂದುದು ೧೯... ಸಂಪುಟದ ೨ನೇ ಸಂಚಿಕೆ. ಮುದ್ರಣ ಉತ್ತಮವಾಗಿದೆ ಅಲ್ಲಲ್ಲಿ ಚಿತ್ರಗಳುಂಟು. ಆಕರ್ಷಕ ಬಗೆಬಗೆಯ ಬಣ್ಣ ಬಳಸಲಾಗಿದೆ. ಸಾಹಿತ್ಯದ ವಿವಿಧ ಪ್ರಕಾರಗಳನ್ನು ಇದರಲ್ಲಿ ಕಾಣಬಹುದು. ಮೊದಲ ಪುಟದಲ್ಲಿರುವ “ಜೈ ಸ್ವತಂತ್ರ ಭಾರತ” ಎಂಬ ಕವನದಲ್ಲಿ ಪ್ರಸಾಂಗಿಕವಿರದಿದ್ದರೂ ಅದಕ್ಕೇಕೆ ಅಗ್ರಸ್ಥಾನ ಕೊಡಲಾಗಿದೆಯೊ ಆಶ್ಚರ್ಯ. ಮುಂಬಯಿಯಲ್ಲಿ ಇದೇ ಮೊದಲ ಕನ್ನಡ ಮಾಸಪತ್ರಿಕೆಯಾಗಿರುವದು ... ವೈಶಿಷ್ಟ್ಯ. ಇದನ್ನು ಹೃತ್ಪೂರ್ವಕ ಸ್ವಾಗತಿಸಿ ಗೆಲವುಗೋರುತ್ತೇವೆ.

Indian Horizon

ಇದು ಮದ್ರಾಸಿನಿಂದ ಹೊರಟ ಪತ್ರಿಕೆ ಕಳೆದ ಜನವರಿ ತಾ. ೧೪ ರಲ್ಲಿ ಪ್ರಕಟವಾಯಿತು. ಸಂಪಾದಕರು ಮತ್ತು ಪ್ರಕಾಶಕರು ಶ್ರೀ ಬಿ. ಸಿ. ವರ್ಗೀಸ್ ೪೭, ಮೋಯಿನ್ ರೋಡ್ ರಾಯಪುರಂ, ಮದ್ರಾಸು. ಪುಟ ೩೬, ಬೆಲೆ ಬಿಡಿ ಪ್ರತಿ ೪ ಆಣೆ.

ಈ ಪತ್ರಿಕೆ (Magazine) ಯಲ್ಲಿ ಮದ್ರಾಸ ಮತ್ತು ಭಾರತಕ್ಕೆ ಸಂಬಂಧಿಸಿದ ನಾನಾ ವಿಷಯಗಳಿವೆ. ಶ್ರೀ ಕಾಮರಾಜ ನಾಡರ ... ಚಯ, ಅಂತರಾಷ್ಟ್ರೀಯ ಕಮ್ಯುನಿಸ್ಟ ಸಂಘ ವಿರೋಧ, ಭಾರತದ ಪರರಾಷ್ಟ್ರ ಧೋರಣ, ಅಣುಬಾಂಬಿನ ಯುಗ, ಕಾಶ್ಮೀರದ ಪಕ್ಷ ಮುಂತಾದ ಹಲವಾರು ಪಾಂಡಿತ್ಯಪೂರ್ಣ ಉಪಯುಕ್ತವೂ ಆದ ಲೇಖನಗಳಿವೆ. ಅಲ್ಲಲ್ಲಿ ಅಗತ್ಯವಿರುವ ಚಿತ್ರಗಳನ್ನು ಕೊಡಲಾಗಿದೆ. ಈ ಹೊಸ ಪತ್ರಿಕೆಯನ್ನು ನಾವು ಆದರದಿಂದ ಬರಮಾಡಿಕೊಳ್ಳುತ್ತೇವೆ.

Message (vol. 1 No. 1)

Editors, S. A. Irshad and S. A. Shafeeq.
Tanzeem Publications,
Mangalore
Annual sub: Rs. 2/8
(Postage extra) Single Copy
As. 10

ಇದು ತ್ರೈಮಾಸಿಕ ಪತ್ರಿಕೆ. ಇದರಲ್ಲಿ ಇಂಗ್ಲಿಷು ಕನ್ನಡ ಎರಡೂ ಭಾಷೆ ಬಳಸಲಾಗಿದೆ. ... ಮಾನವ ಕುಟುಂಬದ ಕಲ್ಯಾಣವನ್ನೇ ಗುರಿಯಾಗಿಟ್ಟುಕೊಂಡು ಇದು ಹೊರಟಿದೆ. ಪತ್ರಿಕಾ ಪ್ರಪಂಚದಲ್ಲಿ ಹೊಸದಾಗಿ ಕಾಲಿಟ್ಟ ಇದನ್ನು ಎಲ್ಲರೂ ಆದರದಿಂದ ಬರಮಾಡಿಕೊಳ್ಳುವರೆಂದು ಹಾರೈಸಿ ನಾವೂ ಸ್ವಾಗತಿಸುತ್ತೇವೆ.

ಸಂಯುಕ್ತ ಪ್ರಾಂತದ ಪತ್ರಿಕಾರ ಸಂಘದವರು ಅಖಿಲ ಹಿಂದುಸ್ತಾನದ ತಳಹದಿಯ ಮೇಲೆ ಪತ್ರಿಕಾರರ ಸ್ಥಿತಿಗತಿಯ ಸುಧಾರಣೆಯ ಪ್ರಶ್ನೆಯನ್ನು ಚರ್ಚಿಸಲು ಆಗ್ರಾದಲ್ಲಿ ಅ. ಭಾ. ಪತ್ರಿಕಾರರ ಸಭೆಯನ್ನು ಕರೆದಿದ್ದಾರೆ. ಈ ಸಭೆಯು ಎಪ್ರಿಲ ೧೧—೧೨ಕ್ಕೆ ನೆರೆಯಲಿರುವದು. ಅದೇ ಕಾಲಕ್ಕೆ ಮೇಲಿನ ಸಂಘದ ೫ನೇ ವಾರ್ಷಿಕ ಅಧಿವೇಶನವು ಸೇರುವದು.

ಪಾಕಿಸ್ತಾನ ಗವರ್ನರ ಜನರಲ ಕಾಯದೆ ಆಜಮ ಜಿನ್ನಾ ಅವರು ತಾ ೧೫ ರಂದು ತಮ್ಮ ಭವನದಲ್ಲಿ ರೆಡ್ ಕ್ರಾಸ ಸಂಸ್ಥೆಯ ಉದ್ಘಾಟನ ಸಮಾರಂಭವನ್ನು ನೆರವೇರಿಸಿದರು. ಬ್ರಿಟಿಶ ರೆಡ್ ಕ್ರಾಸ ಸೊಸಾಯಟಿಯವರು ಪಾಕಿಸ್ತಾನ ರೆಡ್ ಕ್ರಾಸ ಸಂಸ್ಥೆಗೆ ೧ ಲಕ್ಷ ರೂಪಾಯಿ ಚಕ್ಕನ್ನು ಕೊಟ್ಟರು.

ಸರ್ವೋದಯ ಸಮಾಜ

ಮಹಾತ್ಮಾ ಗಾಂಧಿಯವರ ವಿಧಾಯಕ ಕಾರ್ಯಕ್ರಮದಲ್ಲಿ ಆಸ್ಥೆಯಿದ್ದ ಮತ್ತು ಅವರ ತತ್ವಪ್ರಣಾಲಿಯಂತೆ ನಡೆಯಬಯಸುವ ಕಾರ್ಯಕರ್ತರ ಸಭೆಯೊಂದು ಸೇವಾಗ್ರಾಮದಲ್ಲಿ ಸೇರಿತ್ತು. ವಿಧಾಯಕ ಕಾರ್ಯಕರ್ತರ ಭಾವೀ ಧೋರಣ ಮತ್ತು ಕಾರ್ಯಕ್ರಮದ ಬಗ್ಗೆ ಕೂಲಂಕಷ ಚರ್ಚೆಯಾಗಿ ಸರ್ವೋದಯ ಸಮಾಜವೆಂಬ ಸಂಸ್ಥೆಯನ್ನು ಸಂಸ್ಥಾಪಿಸಬೇಕೆಂದು ಗೊತ್ತಾಯಿತು. ಕಳೆದ ೨೭ ವರುಷ ಕಾಂಗ್ರೆಸ್ಸು ಅಹಿಂಸಾತ್ಮಕ ಹೋರಾಟ ಹೂಡಿ ಸ್ವಾತಂತ್ರ್ಯವನ್ನು ಸಂಪಾದಿಸಿತು ಆದರೆ ಆ ಸ್ವಾತಂತ್ರ್ಯ ಸಂಪಾದನೆಯ ನಂತರ ದೇಶದಲ್ಲಿ ಅಹಿಂಸೆಯುಳಿಯದೆ ಹಿಂಸೆ ತಾಂಡವನೃತ್ಯ ನಡೆಸಿತು. ಈಗಲೂ ಪೂರ್ಣ ಶಾಂತತೆ ಪ್ರಸ್ಥಾಪಿತವಾಗಿಲ್ಲ. ಈ ಪರಿಸ್ಥಿತಿಯಲ್ಲಿ ಅಹಿಂಸೆಯ ಬಗ್ಗೆ ಆಸ್ಥೆಯಿದ್ದವರು ಯಾವ ರೀತಿಯಿಂದ ತಮ್ಮ ತತ್ವದ ಪ್ರಚಾರ ಮಾಡಬೇಕು, ದೇಶದಲ್ಲಿ ಶಾಂತಿಯನ್ನು ಪ್ರಸ್ಥಾಪಿಸುವುದಕ್ಕಾಗಿ ಯಾವ ಬಗೆಯಿಂದ ಕಾರ್ಯ ಮಾಡಬೇಕು ಎಂಬುದೆ ತಿಳಿಯದಂತಾಗಿದೆಯೆಂದು ಹೇಳಿದರೆ ತಪ್ಪಾಗದು. ಮಹಾತ್ಮರ ವಿಧಾಯಕ ಕಾರ್ಯಕ್ರಮ- ಅದರಲ್ಲಿಯೂ ಅಹಿಂಸೆ- ಯಶಸ್ವಿಯಾಗಬೇಕಾದರೆ ಅದೇ ಧ್ಯೇಯವನ್ನಿಟ್ಟುಕೊಂಡು ಕೆಲಸಮಾಡುವವರು ಅವಶ್ಯ. ಕಾಂಗ್ರೆಸ್ಸು ಇಡೀ ರಾಷ್ಟ್ರದ ಪ್ರಾತಿನಿಧಿಕ ಸಂಸ್ಥೆಯಾದ್ದರಿಂದ ಎಲ್ಲಬಗೆಯ ವಿಚಾರದ ಜನರಿಗೂ ಅದರಲ್ಲಿ ಸ್ಥಾನವಿದ್ದುದರಿಂದ ಕೇವಲ ಕಾಂಗ್ರೆಸ ಸಂಸ್ಥೆಯಿಂದ ಈ ಕಾರ್ಯವಾಗದು. ಇದನ್ನೆಲ್ಲ ವಿಚಾರಿಸಿ ಹೊಸದೊಂದು ಸಂಸ್ಥೆಯನ್ನು ಸ್ಥಾಪಿಸಿದ್ದು ಉಚಿತವಾಯಿತು. ಸತ್ಯ ಮತ್ತು ಅಹಿಂಸೆಯ ತಳಹದಿಯನ್ನವಲಂಬಿಸಿದ, ಜಾತೀಯ ಭೇದವಿಲ್ಲದ ಆರ್ಥಿಕ ಶೋಷಣೆಗೆ ಆಸ್ಪದವಿಲ್ಲದ ವೈಯಕ್ತಿಕ ಮತ್ತು ಸಾಮುದಾಯಿಕ ಪ್ರಗತಿಗೆ ಅವಕಾಶವಿದ್ದ ಸಮಾಜವನ್ನು ರಚಿಸುವದೇ ಈ ಹೊಸ ಸಂಸ್ಥೆಯ ಧ್ಯೇಯವೆಂದು ಸಾರಲಾಗಿದೆ. ಮಹಾತ್ಮರ ತತ್ವದಲ್ಲಿ ವಿಶ್ವಾಸವಿದ್ದವರು ಅದನ್ನು ಕಾರ್ಯರೂಪದಲ್ಲಿ ತರಲು ಮನಸಾ ಪ್ರಯತ್ನಿಸುವವರು ಮಾತ್ರ ಈ ಸಮಾಜದಲ್ಲಿ ಸೇರುವದು ಅವಶ್ಯವಾಗಿದೆ. ಗಾಂಧೀಜಿಯ ಜಾತೀಯ ಐಕ್ಯ, ಖಾದಿ, ಗ್ರಾಮೋದ್ಯೋಗ, ಅಸ್ಪೃಶ್ಯತಾ ನಿವಾರಣೆ ಮೊದಲಾದ ೨೨ ವಿಧಾಯಕ ಕಾರ್ಯಕ್ರಮಗಳಲ್ಲಿ ಯಾವುದಾದರೊಂದು ಕಾರ್ಯಕ್ರಮವನ್ನಿಟ್ಟುಕೊಂಡು ಕೆಲಸ ಮಾಡುವವರು ಈ ಸಮಾಜದಲ್ಲಿ ಸೇರಬಹುದು. ಕೇವಲ ಸಮಾಜಸೇವೆಗಾಗಿ ಬದ್ಧಕಂಕಣರಾದ ಈ ಕಾರ್ಯಕರ್ತರಲ್ಲಿ ಅಧಿಕಾರ ಲಾಲಸೆ, ಅಹಂಮನ್ಯತೆ ಮೊದಲಾದ್ದು ಇರಬಾರದಿಷ್ಟೇ ಅಲ್ಲ, ಪ್ರಚಾರಪಡಿಸುತ್ತಿರುವ ತತ್ವಗಳಲ್ಲಿ ಸಂಪೂರ್ಣ ವಿಶ್ವಾಸವಿರಬೇಕು. ಸ್ವತಃ ಆ ತತ್ವಗಳಂತೆ ನಡೆಯಬೇಕಾದುದೂ ಅವಶ್ಯ. ಡಂಭಾಚಾರಿಗಳಿಂದ ಯಾವ ಪ್ರಯೋಜನವೂ ಆಗದು. ಇಂಥ ತತ್ವನಿಷ್ಠರೆ ಈ ಸಮಾಜದಲ್ಲಿ ಸೇರಿ ಗಾಂಧೀಜಿಯ ತತ್ವ ಭಾರತದಲ್ಲೆಲ್ಲ [illegible]ರವಾಗಿ ಕಾರ್ಯರೂಪದಲ್ಲಿಳಿದರೆ ಗಾಂಧೀಜಿಯ ಆತ್ಮ ಚಿರಶಾಂತಿಯನ್ನು ಹೊಂದುವದೆಂದು ಬೇರೆ ಹೇಳಬೇಕಿಲ್ಲ.

'ಜಲಉಷಾ' ಜಲಪ್ರವೇಶ

ಸಿಂಧ್ಯಾ ಹಡಗು ಕಂಪನಿಯವರು ತಯಾರಿಸಿದ 'ಜಲ ಉಷಾ' ಎಂಬ ಮೊದಲನೇ ಹಡಗಿನ ಜಲಪ್ರವೇಶ ಸಮಾರಂಭ ವಿಶಾಖಪಟ್ಟಣದಲ್ಲಿ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲರ ಹಸ್ತದಿಂದ ವಿಜೃಂಭಣೆಯಿಂದ ನಡೆಯಿತು. ಹಿಂದುಸ್ತಾನ ಹಿಂದೊಮ್ಮೆ ಜಲಪರ್ಯಾಣದಲ್ಲಿ ಹೆಸರುಪಡೆದು ಪರದೇಶಗಳ ಕೂಡ ವ್ಯಾಪಾರ ಮಾಡುತ್ತಿದ್ದರೂ ಬ್ರಿಟಿಶರಾಳಿಕೆಯಿಂದ ಅದರ ಆ ನೌಕಾಸಂಪತ್ತು ಕಳೆಗುಂದಿತು. ಪರದೇಶೀ ಹಡಗು ಕಂಪನಿಗಳೆ ಹೆಚ್ಚಾಗಿ ಅವುಗಳ ಮುಖಾಂತರವೆ ಹಿಂದುಸ್ತಾನದ ವ್ಯಾಪಾರ ನಡೆಯಿತು. ಆದರೀಗ ಹಿಂದುಸ್ತಾನ ಸ್ವಾತಂತ್ರ್ಯವನ್ನು ಪಡೆದಿರುವದರಿಂದ ಹಿಂದೀ ಹಡಗುಪಡೆಗೆ ಎಲ್ಲ ದೃಷ್ಟಿಯಿಂದ ಪ್ರೋತ್ಸಾಹ ಸಿಕ್ಕಲಿಕ್ಕೆ ಬೇಕು. ಹಿಂದುಸ್ತಾನದ ಮುಖ್ಯ ಮಂತ್ರಿಗಳು ಈ ಸಮಾರಂಭದಲ್ಲಿ ಆ ಬಗೆಯ ಆಶ್ವಾಸನವನ್ನೂ ಕೊಟ್ಟಿರುವರು. ಕಾಂಗ್ರೆಸ್ಸು ೧೯೧೯ ನೆಯ ಇಸ್ವಿಯಲ್ಲಿ ಮಹಾತ್ಮರ ನೇತೃತ್ವದಲ್ಲಿ ಸ್ವಾತಂತ್ರ್ಯ ಸಮರವನ್ನು ಪ್ರಾರಂಭಿಸಿದ ವರುಷದಿಂದಲೆ ಪ್ರಾರಂಭವಾದ ನೌಕಾ ಸ್ವಾತಂತ್ರ್ಯ ಚಳವಳಿ ಇಂದು ಯಶಸ್ವಿಯಾಗಿ ಈ ಪ್ರಥಮ ಹಿಂದೀ ನೌಕೆ ಜಲಯಾನವನ್ನು ಪ್ರಾರಂಭಿಸಿದ್ದು ಅತ್ಯಂತ ಸಂತೋಷದ ಸಂಗತಿ. ನಾಲ್ಕು ಸಾವಿರ ಮೈಲು ಕರಾವಳಿ ಪ್ರದೇಶವಿದ್ದ ಹಿಂದುಸ್ತಾನದ ನೌಕಾ ವ್ಯವಸಾಯ ಇಷ್ಟು ದಿನಗಳ ವರೆಗೆ ಪರಕೀಯರ ಕೈಯಲ್ಲಿದ್ದುದರಿಂದ ಹಿಂದುಸ್ತಾನದ ಸಂಪತ್ತೆಲ್ಲ ಬಳೆದುಕೊಳ್ಳಲಿಕ್ಕೆ ಅವಕಾಶ ದೊರೆತಿತ್ತು. ಈ ಪ್ರಥಮ ನೌಕೆ ಭಾವೀ ಪ್ರಚಂಡ ಹಡಗುಪಡೆಯ ಪೂರ್ವಸೀಠಿಕೆಯಾಗಲೆಂದು ಮುಖ್ಯ ಮಂತ್ರಿಗಳು ಆಶಿಸಿದ್ದು ಅತ್ಯಂತ ಮಹತ್ವದ್ದಾಗಿದೆ. ಈ ವ್ಯವಸಾಯದಲ್ಲಿ ಪ್ರಾಚೀನಕಾಲದಿಂದಲೂ ಕೀರ್ತಿವೆತ್ತ ಭಾರತವು ಬೇಗ ಮೊದಲಿನ ವೈಭವವನ್ನು ಪಡೆಯಲಿ.

ಸಂಪಾದಕೀಯ ಟೀಕೆಟಿಪ್ಪಣಿಗಳು

ಮುಸ್ಲಿಂಲೀಗು

ಜಾತೀಯ ಸಂಸ್ಥೆಗಳಿಂದ ದೇಶಗಳಲ್ಲಿ ಎಂಥ ಅನರ್ಥಗಳು ನಡೆದಿವೆ ಎಂಬುದು ಪ್ರತಿಯೊಬ್ಬ ಭಾರತೀಯನಿಗೆ ಗೊತ್ತಿದ್ದ ಸಂಗತಿ. ಯಾವುದೊಂದು ತತ್ವವನಿಟ್ಟುಕೊಂಡು ವಿಧಾಯಕ ಕಾರ್ಯ ಮಾಡುವ ಸಂಸ್ಥೆಗಳಿಂದ ದೇಶಕ್ಕೆ ಹಾನಿಯಾಗದು ಆದರೆ ಜಾತೀಯ ಧೋರಣವನ್ನಿಟ್ಟುಕೊಂಡು ವಿಧ್ವಂಸಕರೀತಿಯಿಂದ ಚಟುವಟಿಕೆ ನಡೆಸುವ ಸಂಸ್ಥೆಗಳು ಯಾವದೇ ದೇಶದಲ್ಲಿ ಪ್ರಬುದ್ಧಗೊಂಡರೆ ಆ ದೇಶವೆಂದೂ ಶಾಂತತೆಯಿಂದ ಬಾಳಲಾರದು. ಇಷ್ಟು ವರುಷಗಳವರೆಗೆ ಪರಕೀಯ ಅರಸರು ತಮ್ಮ ಪ್ರಸ್ಥವನ್ನು ಬೆಳಿಸಿಕೊಳ್ಳುವುದರ ಸಲುವಾಗಿ ಇಲ್ಲಿಯ ಜಾತೀಯ ಸಂಸ್ಥೆಗಳಅಭಿವೃದ್ಧಿಗೆ ಅವಕಾಶಕೊಟ್ಟದ್ದರಿಂದ ಇಂದು ಹಿಂದುಸ್ತಾನ ಒಡೆದು ಎರಡು ಭಾಗಗಳಾಗಿ ಹೋಯಿತು. ಇದರಿಂದ ಎಷ್ಟೊಂದು ಅನರ್ಥವಾಯಿತೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಆದರೀಗ ಸ್ವಾತಂತ್ರ್ಯ ಸಿಕ್ಕಿದ್ದರಿಂದ ಸ್ವತಂತ್ರ ಹಿಂದುಸ್ತಾನದಲ್ಲಿ ಜಾತೀಯ ಸಂಸ್ಥೆಗಳಿಗೆ ಅವಕಾಶವಿಲ್ಲ; ಇರತಕ್ಕದ್ದಲ್ಲ, ಅಂತೆಯೆ ಮುಸ್ಲಿಂಲೀಗು ಹಿಂದುಮಹಾಸಭೆ ಮೊದಲಾದ ಜಾತೀಯ ಸಂಸ್ಥೆಗಳನ್ನು ವಿಸರ್ಜಿಸಿ ಬಿಡುವದು ಕ್ರಮಪ್ರಾಪ್ತವಾಗಿದೆ. ಆಯಾ ಜಾತಿಯವರು ತಮ್ಮ ಸಮಾಜದ ಉನ್ನತಿಗಾಗಿ ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳಬಹುದು. ಆದರೆ ರಾಜಕೀಯ ಉದ್ದೇಶವನ್ನು ಅವೆಂದಿಗೂ ಇಟ್ಟುಕೊಳ್ಳಕೂಡದು. ಈ ದೃಷ್ಟಿಯಿಂದ ವಿಚಾರ ಮಾಡಿಯೆ ಮುಸ್ಲಿಂಲೀಗನ್ನು ವಿಸರ್ಜಿಸಿ ಬಿಡಬೇಕೆಂದು ಪ್ರತಿಪಾದಿಸಿ ಮದ್ರಾಸಿನಲ್ಲಿ ಕೂಡಿದ್ದ ಮುಸ್ಲಿಂಲೀಗಿನ ಕೌನ್ಸಿಲ ಸಭೆಯಲ್ಲಿ ಈ ಬಗೆಗೆ ವಿಚಾರವಾಗಿ ಲೀಗಿಗೆ ಜೀವದಾನ ಕೊಡಲಾಯಿತು. ಈ ಸಭೆಗೆ ಬಂದವರ ಸಂಖ್ಯೆಯನ್ನು ಮತ್ತು ಅದಕ್ಕಿದ್ದ ವಿರೋಧವನ್ನು ನೋಡಿದರೆ ಬಹುಸಂಖ್ಯಾಕ ಮುಸಲ್ಮಾನರ ಅಭಿಪ್ರಾಯ ಹೀಗಿರುವದಿಲ್ಲೆಂಬುದು ಸಿದ್ಧವಾಗುವದು. ಸದ್ಯದ ಪರಿಸ್ಥಿತಿಯಲ್ಲಿ ಲೀಗ ಸಂಸ್ಥೆಯನ್ನು ಹಿಂದುಸ್ತಾನದಲ್ಲಿ ಕಾಯಂ ಇಡುವದು ಸಮಂಜಸವಲ್ಲ ಎಂದು ಲೀಗ ಧುರೀಣರೂ ಅಭಿಪ್ರಾಯಪಡುತ್ತಿರುವರು. ಪಾಕಿಸ್ತಾನದಲ್ಲಿ ಕಾಂಗ್ರೆಸ್ಸು ಇರಬಹುದಾದರೆ ಹಿಂದುಸ್ತಾನದಲ್ಲಿ ಲೀಗಸಂಸ್ಥೆ ಏಕೆ ಇರಕೂಡದೆಂದು ಕೆಲವರು ಹೇಳುವದುಂಟು ಆದರೆ ಕಾಂಗ್ರೆಸ್ಸು ಶುದ್ಧ ರಾಷ್ಟ್ರೀಯ ಸಂಸ್ಥೆಯಾಗಿದ್ದು ಮುಸ್ಲಿಂಲೀಗು ಶುದ್ಧ ಜಾತೀಯ ಸಂಸ್ಥೆ ಆದುದರಿಂದ ಎರಡಕ್ಕೂ ತುಲನೆ ಕೂಡಲಾರದು. ಆದುದರಿಂದ ಹಿಂದುಸ್ತಾನದಲ್ಲಿಯ ಮುಸಲ್ಮಾನರು ಜಾತೀಯ ದ್ವೇಷಕ್ಕೆ ಅವಕಾಶ ಕೂಡುವಂಥ ಲೀಗಸಂಸ್ಥೆಯನ್ನು ಕೂಡಲೆ ವಿಸರ್ಜಿಸಿ ಅದರಿಂದಾದ ಅನರ್ಥದ ಪರಿಮಾರ್ಜನೆ ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇವೆ.

ಸಕಾಲಿಕ ಎಚ್ಚರಿಕೆ

ಆಹಾರ ಪದಾರ್ಥಗಳ ಧಾರಣೆ ಮಿತಿಮೀರಿ ಏರಹತ್ತಿದ್ದರಿಂದ ಜನರು ಹೌಹಾರಿ ಹೋಗಹತ್ತಿರುವರು. ದಿನವೂ ಧಾರಣೆಗಳು ಏರುತ್ತಿರುವ ಸುದ್ದಿಗಳೇ ಬರುತ್ತಿರುವವಲ್ಲದೆ ಇಳಿತಾಯದ ಸುದ್ದಿ ಯಾವ ಭಾಗದಿಂದಲೂ ಬರುವದಿಲ್ಲ. ಸುಗ್ಗಿಯ ಕಾಲದಲ್ಲಿಯೇ ಈ ಹಾಡಾದಬಳಿಕ, ಆಷಾಢದಲ್ಲೇನು? ಎಂಬ ಅಂಜಿಕೆ ಎಲ್ಲರನ್ನೂ ಬಾಧಿಸಹತ್ತಿದೆ. ಲಾಭಬಡಕರು ಮನಬಂದಂತೆ ಧಾರಣೆ ಏರಿಸಿ ಕಾಳು ಕೊಂಡು ಕೆಲವನ್ನು ಸಂಗ್ರಹಿಸಿಟ್ಟು ಕೆಲವನ್ನು ಹೊರಗೆ ಕಳಿಸಿದ್ದರಿಂದ ಇಷ್ಟೊಂದು ಹಾಹಾಕಾರವೆದ್ದಿದೆ. ಇದೇ ಬಗೆಯ ಪರಿಸ್ಥಿತಿ ನಡೆದದ್ದಾದರೆ ಬಂಗಾಲ ಬರಗಾಲದ ಪುನರಾವೃತ್ತಿಯ ಗಂಡಾಂತರವೂ ಇದೆ. ಇಂಥ ದುರಂತ ಸಂಭವಿಸದಂತೆ ನೋಡಿಕೊಳ್ಳುವದು ಸರಕಾರದ ಕರ್ತವ್ಯದಾಗಿದೆ. ಅಷ್ಟೇ ಅಲ್ಲ ವ್ಯಾಪಾರಸ್ಥರ ಮತ್ತು ರೈತರ ಕರ್ತವ್ಯವೂ ಆಗಿದೆ. ಮುಂಬಯಿ ಸರಕಾರದ ಆಹಾರ ಮಂತ್ರಿಗಳಾದ [illegible] ದಿನಕರರಾವ ದೇಸಾಯಿ ಇವರು ಈ ಸಂಬಂಧದಲ್ಲಿ ಹೇಳುತ್ತ ಲಾಭಬಡಕರಿಗೆ ಸಕಾಲಿಕ ಎಚ್ಚರಿಕೆ ಕೊಟ್ಟಿರುವರು. ಪರಿಸ್ಥಿತಿ ಕೆಟ್ಟಲ್ಲಿ ಸರಕಾರವು ಕೈಹಾಕಿ ಅವಶ್ಯ ಉಗ್ರ ಉಪಾಯಗಳನ್ನು ಕೈಕೊಳ್ಳುವದು; ಅವಶ್ಯವೆನಿಸಿದಾಗ ಎಲ್ಲ ಸಂಗ್ರಹದ ಜಪ್ತಿಮಾಡಿ ತನ್ನವಶಕ್ಕೆ ತೆಗೆದುಕೊಳ್ಳಬಹುದಲ್ಲದೆ ಹಿಂದಿನಂತೆ ಭದ್ರವಾದ ನಿಯಂತ್ರಣವನ್ನು ಹೇರಬಹುದು ಎಂದೂ ಎಚ್ಚರಿಕೆಯನ್ನು ಕೊಟ್ಟಿರುವರು. ನಿಯಂತ್ರಣವಿದ್ದಾಗ ತಮ್ಮ ವ್ಯಾಪಾರ ಹಾಳಾಯಿತು ಎಂದು ಮುಂತಾಗಿ ಕೂಗನ್ನೆಬ್ಬಿಸಿದ್ದ ವ್ಯಾಪಾರಸ್ಥರು ಈಗ ಜನತೆಯ ಪರಿಸ್ಥಿತಿಯನ್ನು ತಿಳಿದುಕೊಳ್ಳದೆ ಲಾಭಬಡಕತನದಿಂದ ಮಾಲು ಹೊರಗೆ ಕಳಿಸಿದರೆ ನಿಯಂತ್ರಣವನ್ನು ಅವರೇ ಬರಮಾಡಿಕೊಂಡಂತೆ ಸೈ. ಆಯಾ ರೈತರಾದರೂ ತಮ್ಮಲ್ಲಿಯ ಬೇಡಿಕೆಗಳನ್ನು ತಿಳಿದುಕೊಂಡು ಅಷ್ಟೇ ಕಾಳು ಆಯಾ ಗ್ರಾಮಗಳಲ್ಲಿಯೇ ಉಳಿಯುವಂತೆ ನೋಡಿಕೊಳ್ಳುವದು ಅವಶ್ಯವಾಗಿದೆ. ಹೀಗೆ ಪ್ರತಿಯೊಂದು ಹಳ್ಳಿಯೂ ಸ್ವಾವಲಂಬಿಯಾಗಲು ಪ್ರಯತ್ನಿಸಿದರೆ ಮತ್ತು ಕಾಳನ್ನು ಹೊರಗೆ ಹೋಗಗೊಡಲಾರೆವೆಂಬ ನಿರ್ಧಾರ ಕೈಕೊಂಡರೆ ಭಾವೀ ಗಂಡಾಂತರವು ತಪ್ಪುವದು. ಇನ್ನೂ ಪರಿಸ್ಥಿತಿಯೇನು ಕೈಮೀರಿ ಹೋಗಿಲ್ಲ ಆದುದರಿಂದ ಈಗಲೆ ಎಲ್ಲರೂ ತಮ್ಮ ಪಾಲಿನ ಕರ್ತವ್ಯವನ್ನು ಮಾಡಿ ಜನಸಾಮಾನ್ಯಕ್ಕೊದಗಬಹುದಾದ ಅನರ್ಥವನ್ನು ತಪ್ಪಿಸಬೇಕೆಂದು ಬಿನ್ನವಿಸಿಕೊಳ್ಳುತ್ತೇವೆ.

ನಿಜಾಮ ಸರಕಾರದ ಕರ್ತವ್ಯ

ನಿಜಾಮ ಹೈದ್ರಾಬಾದದಲ್ಲಿ ಮತ್ತು ಗಡಿಗಳಲ್ಲಿ ನಡೆಯಹತ್ತಿದ ದುರ್ಘಟನೆಗಳನ್ನು ನೋಡಿದರೆ ಯಾರಿಗಾದರೂ ಸಂತಾಪವುಂಟಾಗದಿರದು. ಹಿಂದುಸ್ತಾನ ಸ್ವರಾಜ್ಯವನ್ನು ಪಡೆದು ಶಾಂತರೀತಿಯಿಂದ ದೇಶದ ಸಾರ್ವಾಂಗಿಕ ಉನ್ನತಿಯನ್ನು ಪಡೆಯುವ ಕ್ರಮ ಕೈಕೊಳ್ಳುತ್ತಿರುವಾಗ ಹೈದ್ರಾಬಾದದಂಥ ದೊಡ್ಡ ಸಂಸ್ಥಾನದಲ್ಲಿ ಇಂತು ಅನರ್ಥಗಳು ಸಂಭವಿಸುತ್ತಿರುವದು ಇಡೀ ದಕ್ಷಿಣ ಭಾರತದ ಶಾಂತತೆಗೆ ಭಂಗತರುತ್ತಿವೆಯೆಂದು ಹೇಳಬಹುದು. ನಿಜಾಮ ಸರಕಾರವು ಹಿಂದೀ ಒಕ್ಕೂಟದಲ್ಲಿ ಸೇರಿ ಸಂಸ್ಥಾನದಲ್ಲಿ ಜೊತೆಗಾರ ರಾಜ್ಯವನ್ನು ಪ್ರಸ್ಥಾಪಿಸಿದ್ದಾದರೆ ಇಂದು ಅಲ್ಲಿ ನಡೆದ ದುರ್ಘಟನೆಗಳು ನಿಂತು ಜನರು ಸುಖಸೌಹಾರ್ದದಿಂದ ನಲಿದಾಡಬಹುದು, ಸಂಸ್ಥಾನವೂ ಪ್ರಗತಿ ಹೊಂದಬಹುದು. ಆದರೆ ನಿಜಾಮ ಸಾಹೇಬರು ಇತ್ತೆಹಾದ ಎಂಬ ಜಾತೀಯ ಸಂಸ್ಥೆಯ ಬಲೆಯಲ್ಲಿ ಸಿಕ್ಕುಬಿಟ್ಟದ್ದರಿಂದ ಮೇಲೆ ಹೇಳಿದಂತಹ ಕ್ರಮವನ್ನು ಕೈಕೊಳ್ಳುವದು ಅಶಕ್ಯವಾಗಿದೆ. ಘಟನಾ ಸಮಿತಿಯನ್ನು ಸ್ಥಾಪಿಸಲು ನಿಜಾಮರೇನೋ ಒಪ್ಪಿರುವರಂತೆ, ಆದರೆ ಈ ಘಟನಾ ಸಮಿತಿಯಲ್ಲಾದರೂ ಕೇವಲ ನೂರಕ್ಕೆ ೮ ರಷ್ಟು ಇರುವ ಮುಸಲ್ಮಾನರಿಗೆ ಸಮಪ್ರಾತಿನಿಧ್ಯವಿರಬೇಕಂತೆ ! ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಜನಸಂಖ್ಯೆಗನುಸಾರವಾಗಿ ಪ್ರಾತಿನಿಧ್ಯವಿರುವದುಂಟು ಆದರೆ ಮೊಗಲಾಯಿಯಲ್ಲಿ ಎಲ್ಲವೂ ವಿರುದ್ಧವೆ ! ಹೈದ್ರಾಬಾದ ಸಮಸ್ಯೆ ಬಿಡಬೇಕಾದರೆ ಅಲ್ಲಿ ಜೊತೆಗಾರ ಸರಕಾರ ಸ್ಥಾಪಿತವಾಗಬೇಕು ಮತ್ತು ಹಿಂದೀ ಒಕ್ಕೂಟ ಸರಕಾರದೊಡನೆ ಶಾಶ್ವತವಾದ ಒಪ್ಪಂದವಾಗಬೇಕು ಎಂದು ಹಿಂದುಸ್ತಾನದ ಹಿರಿಯೋಲಗದಲ್ಲಿ ಸಂಸ್ಥಾನ ಶಾಖೆಯ ಪರವಾಗಿ ಉತ್ತರಕೊಡುತ್ತ ಮಂತ್ರಿವರ್ಯ ಗಾಡಗೀಳರು ಹೇಳಿದರು. ಹಿಂದುಸ್ತಾನ ಸರಕಾರದಗೂಡ ಮಾಡಿಕೊಂಡ ರುಥಾಸ್ಥಿತಿ ಒಪ್ಪಂದವು ಕೂಡ ಪಾಲಿಸಲ್ಪಟ್ಟಿಲ್ಲ ಎಂದು ಮಂತ್ರಿವರ್ಯರು ಹೇಳಿ ಅಬಗ್ಗೆ ವಿಷಾದವನ್ನೂ ಪ್ರದರ್ಶಿಸಿದರು. ಇತ್ತೆಹಾದ ಮತ್ತು ಅದರ ಸ್ವಯಂಸೇವಕ ಸಂಘಟನೆಯಾದ ರಜಕಾರವು ನಡೆಸಿದ ಹಾವಳಿಯಿಂದ ಇಡೀ ದಕ್ಷಿಣ ಭಾರತದ ಶಾಂತಿಗೇ ಭಂಗಬಂದಿದೆ. ಇದನ್ನು ತಡೆಯಲು ನಿಜಾಮರು ತೀವ್ರ ಉಗ್ರ ಉಪಾಯಗಳನ್ನು ಕೈಕೊಳ್ಳಬೇಕು ಎಂದೂ ಸೂಚಿಸಿರುವರು. ಮಂತ್ರಿವರ್ಯರ ಈ ಸಲಹೆ ಸಮಂಜಸ ಮತ್ತು ಸಮಯೋಚಿತವಾಗಿದೆ. ಇದರಿಂದ ಸಂಸ್ಥಾನದ ಅಷ್ಟೆ ಅಲ್ಲ ಇಡೀ ದಕ್ಷಿಣ ಭಾರತದ ಸಮಸ್ಯೆಗಳು ಬಗೆಹರಿವವು. ನಿಜಾಮ ಸರಕಾರವು [illegible]ದರೂ ಇತ್ತ ಗಮನಿಸಿ ಸೂಕ್ತ ಮಾರ್ಗವನ್ನವಲಂಬಿಸುವದೆಂದು ನಂಬುತ್ತೇವೆ.

ರಾಷ್ಟ್ರರಕ್ಷಣೆ

ಹಿಂದುಸ್ತಾನ ಸರಕಾರವು ರಾಷ್ಟ್ರರಕ್ಷಣೆಯ ಸಮಸ್ಯೆಯತ್ತ ತೀವ್ರ ಗಮನಕೊಟ್ಟು ರಾಷ್ಟ್ರೀಯ ವಿದ್ಯಾರ್ಥಿ ಸೈನ್ಯ ಪಡೆಯನ್ನು ಸಂಸ್ಥಾಪಿಸಲು ನಿರ್ಧರಿಸಿದ್ದು ಅತ್ಯಂತ ಉಚಿತವಾಗಿದೆ. ಬ್ರಿಟಿಶರಾಳಿಕೆಯಲ್ಲಿ ಭಾರತೀಯರು ಪರಗುಂಡಿದವರಾಗಿ ಆತ್ಮರಕ್ಷಣೆಯ ಶಕ್ತಿಯನ್ನೆ ಕಳೆದುಕೊಂಡಿರುವರು. ಇಂಥ ಭಾರತೀಯರಲ್ಲಿ ಸಾಮರ್ಥ್ಯವನ್ನು ತುಂಬಿ ಆತ್ಮರಕ್ಷಣೆಯಲ್ಲಿ ಅವರನ್ನು ಸಮರ್ಥ ಮತ್ತು ಪರಿಣತರನ್ನಾಗಿ ಮಾಡುವದು ಅತ್ಯಂತ ಅವಶ್ಯಕ ಮತ್ತು ಇಷ್ಟವಾದ ಕೆಲಸವಾಗಿದೆ. ಸರಕಾರದವರು ಕುಂಜರು ಸಮಿತಿಯ ಸೂಚನೆಗಳನ್ವಯ ವಿದ್ಯಾರ್ಥಿಗಳಲ್ಲಿ ಹಿರಿ ಮತ್ತು ಕಿರಿ ಎಂಬ ಎರಡು ಭಾಗಗಳನ್ನು ಮಾಡಿ ಎಲ್ಲ ವಿದ್ಯಾರ್ಥಿಗಳಿಗೂ ಸೈನ್ಯ ಶಿಕ್ಷಣ ಕೊಡುವ ಸಲಹೆ ಕೊಟ್ಟಿದ್ದಾರೆ. ಬಾಲಕಿಯರಿಗೂ ಆತ್ಮರಕ್ಷಣೆಯ ಪಾಠಕಲಿಸಲು ಕುಂಜರು ಸಮಿತಿಯವರು ಸೂಚಿಸಿದ್ದು ಅತ್ಯಂತ ಉಚಿತವಾಗಿದೆ. ಇಂದು ಜಗತ್ತಿನಲ್ಲಿ ಅಬಲೆಯರ ಮೇಲೆ ಆಗಾಗ ಆಗುತ್ತಿರುವ ಅತ್ಯಾಚಾರ ಮೊದಲಾದವುಗಳನ್ನು ನೆನೆದರೆ ಸ್ತ್ರೀಯರಿಗೆ ಆತ್ಮರಕ್ಷಣೆಯ ಶಿಕ್ಷಣಕೊಡುವದು ಅತ್ಯಂತ ನ್ಯಾಯವೆನಿಸಹತ್ತಿದೆ. ಅವರಲ್ಲಿ ತಿಳುವು ಸಂಘಟನೆ ಆತ್ಮಾವಲಂಬನವೃತ್ತಿಯನ್ನು ಬೆಳಿಸಿ ಕಠಿಣ ಪ್ರಸಂಗದಲ್ಲಿ ಅವರನ್ನು ಆತ್ಮರಕ್ಷಣೆಗೆ ಸಮರ್ಥರನ್ನಾಗಿ ಮಾಡುವದು ಇಂದಿನ ಈ ದುರ್ದಿನಗಳಲ್ಲಿ ಸರಕಾರದ ಕರ್ತವ್ಯವಾಗಿದೆ. ಬ್ರಿಟಿಶರಾಳಿಕೆಯಲ್ಲಿಯೂ ವಿದ್ಯಾರ್ಥಿಗಳಿಗೆ ಯು. ಟಿ. ಸಿ. ಮುಖಾಂತರ ಸೈನಿಕ ಶಿಕ್ಷಣ ಕೊಡಲಾಗುತ್ತಿತ್ತು ಆದರೆ ಆ ಶಿಕ್ಷಣದಿಂದ ಅದೆಷ್ಟು ಸೈನಿಕರು ಸೈನ್ಯಾಧಿಕಾರಿಗಳು ತಯಾರಾದರೂ ತಿಳಿಯದು. ಸ್ವತಂತ್ರ ಹಿಂದುಸ್ತಾನ ಸರಕಾರ ಕೊಡಲು ಯೋಚಿಸಿದ ಈ ಶಿಕ್ಷಣವು ಪೂರ್ಣ ಸೈನಿಕ ಶಿಕ್ಷಣವಿದ್ದು ಅದು ವಿದ್ಯಾರ್ಥಿ ದೆಸೆಯಲ್ಲಿಯೆ ಪೂರ್ಣ ಕೊಡಲ್ಪಡುವಂತೆ ಯೋಜಿಸುವದು ಅವಶ್ಯವಾಗಿದೆ. ಅಹಿಂಸೆಯನ್ನು ಬೋಧಿಸುತ್ತಿರುವ ಹಿಂದುಸ್ತಾನವಿಂದು ವಿದ್ಯಾರ್ಥಿಗಳಿಗೂ ಸೈನ್ಯ ಶಿಕ್ಷಣ ಕೊಡಲೆಳಿಸಿ ಯುದ್ಧದ ದಾರಿಯನ್ನು ಹಿಡಿಯಿತೆಂದು ಮಾತ್ರ ಯಾರೂ ಅರ್ಥಮಾಡಿಕೊಳ್ಳಬಾರದು. ಹಿಂದುಸ್ತಾನ ಯಾವ ರಾಷ್ಟ್ರವನ್ನು ಆಕ್ರಮಿಸುವ ಧೋರಣವನ್ನು ತಾಳಿಲ್ಲ ವಿದ್ಯಾರ್ಥಿಗಳಲ್ಲಿ ಶಿಸ್ತು, ಸೇವಾಬುದ್ಧಿ, ನೈತಿಕಬಲ, ಧುರೀಣತ್ವ ಮೊದಲಾದವುಗಳು ಬೆಳೆದು ಅವರು ಆತ್ಮರಕ್ಷಣೆಗೆ ಶಕ್ತರಾಗುವದೆ ಇದರ ಉದ್ದೇಶವೆಂದು ಸಂರಕ್ಷಣ ಮಂತ್ರಿಗಳು ಸ್ಪಷ್ಟಪಡಿಸಿದ್ದಾರೆ. ಹಿಂದುಸ್ತಾನದಲ್ಲಿಯ ವಿದ್ಯಾರ್ಥಿಗಳು ಈ ಪಡೆಯಲ್ಲಿ ಸೇರಿ ಸೈನ್ಯ ಶಿಕ್ಷಣ ಪಡೆಯಬೇಕೆಂದು ಸೂಚಿಸುತ್ತೇವೆ.

ಪಾಕಿಸ್ತಾನದಲ್ಲಿ ಖಾದಿ

ಪಾಕಿಸ್ತಾನದಲ್ಲಿ ಬಟ್ಟೆಯ ಬರ ಹೆಚ್ಚಿದೆಯಾದ್ದರಿಂದ ಖಾದಿಗೆ ಶರಣು ಹೋಗಿ ಅದನ್ನು ನಿವಾರಿಸಿಕೊಳ್ಳಬೇಕೆಂಬ ವಿಚಾರವನ್ನು ಸರಕಾರ ನಡೆಸಿದೆಯೆಂದು ತಿಳಿಯಬರುತ್ತದೆ. ಮಹಾತ್ಮಾ ಗಾಂಧಿಯವರು ಖಾದಿಯ ಯೋಜನೆಯನ್ನು ಪ್ರಾರಂಭಿಸಿದಾಗ ಮುಸ್ಲಿಂಲೀಗಿನವರು ಮೊದಲಾದವರು ಅದೊಂದು ನಿಷ್ಪ್ರಯೋಜಕ ಪ್ರಯತ್ನವೆಂದು ಮುಂತಾಗಿ ತೆಗಳಿದ್ದುಂಟು. ಆದರೀಗ ಪರದೇಶಗಳಿಂದ ವಿಶೇಷ ಹಣಕೊಟ್ಟು ಜವಳಿಯನ್ನು ತರಿಸುವದಕ್ಕಿಂತ ಸ್ವದೇಶದಲ್ಲಿಯೆ ಕೈನೂಲು ಕೈಮಗ್ಗದ ಬಟ್ಟೆಗಳಿಗೆ ಪ್ರೋತ್ಸಾಹ ಕೊಟ್ಟರೆ ಹಣವೂ ದೇಶದಲ್ಲಿ ಉಳಿಯುವುದು ಬಡವರಿಗೆ ಪೂರಕ ಉದ್ಯೋಗವನ್ನು ಕಲ್ಪಿಸಿಕೊಟ್ಟಂತೆಯೂ ಆಗುವದು. ಪಾಕಿಸ್ತಾನದಲ್ಲಿ ಈಗ ೪ ಲಕ್ಷ ಕೈಮಗ್ಗಗಳು ನೂಲಿನ ಕೊರತೆಗಾಗಿ ನಿಂತುಹೋಗಿವೆ. ಈ ಮಗ್ಗಗಳಿಗೆ ವರ್ಷ ೧೦೦ ಲಕ್ಷ ಪೌಂಡು ನೂಲು ಬೇಕು; ಆದರೆ ಪಾಕಿಸ್ತಾನದಲ್ಲಿ ಕೇವಲ ೫ ಸಾವಿರ ಪೌಂಡು ನೂಲು ಉತ್ಪಾದಿಸಲಾಗುತ್ತದೆ. ಪಾಕಿಸ್ತಾನಕ್ಕೆ ಪ್ರತಿವರ್ಷ ೭೫ ಲಕ್ಷ ಪೌಂಡು ಹತ್ತಿ ಬೇಕಾಗುತ್ತಿದ್ದು ೩೧ ಸಾವಿರ ಪೌಂಡಿನಷ್ಟು ಹತ್ತಿ ಮಾತ್ರ ಅಲ್ಲಿ ಉತ್ಪಾದಿಸಲಾಗುತ್ತಿದೆ. ಈ ಕೊರತೆಯನ್ನು ನಿವಾರಿಸುವದಕ್ಕಾಗಿ ದೇಶದಲ್ಲೆಲ್ಲ ರಾಟಿಗಳನ್ನು ಜನಪ್ರಿಯ ಮಾಡುವದೊಂದೇ ಮಾರ್ಗವೆಂದು ಪಾಕಿಸ್ತಾನ ಸರಕಾರ ಭಾವಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಪ್ರತಿಯೊಂದು ಮನೆಯಲ್ಲಿ ರಾಟಿ ತಿರುಗಿಸಿ ಆ ನೂಲು ಕೈಮಗ್ಗಗಳಿಗೆ ದೊರೆತದ್ದಾದರೆ ಜವಳಿ ಪ್ರಶ್ನೆಯು ಸಹಜವಾಗಿ ಬಗೆಹರಿಯಬಹುದು. ಪಾಕಿಸ್ತಾನ ಸರಕಾರ ನಡೆಸಿದ ವಿಚಾರ ಕಾರ್ಯರೂಪದಲ್ಲಿ ಬಂದು ಅಲ್ಲಿನ ಬಟ್ಟೆಯ ಕೊರತೆ ಹಿಂಗುವದಲ್ಲದೆ ಗ್ರಾಮೋದ್ಯೋಗಗಳಿಗೂ ಪ್ರೋತ್ಸಾಹ ದೊರೆತು ಜನತೆಗೆ ಇದೊಂದು ಪೂರಕ ಉದ್ಯೋಗ ದೊರೆತಂತಾಗಲಿ. ಹಿಂದುಸ್ತಾನದಲ್ಲಾಗಲಿ ಪಾಕಿಸ್ತಾನದಲ್ಲಾಗಲಿ ಪರದೇಶಗಳಲ್ಲಿಯ ಸ್ವದೇಶದ ಗಿರಣಿಗಳನ್ನು ಹೆಚ್ಚಾಗಿ ಅವಲಂಬಿಸದೆ ಖಾದಿಗೇ ಪ್ರೋತ್ಸಾಹ ದೊರೆತರೆ ಅದರಿಂದಲೆ ಬಟ್ಟೆಯ ಕೊರತೆ ಹಿಂಗುವದು ಅತ್ಯವಶ್ಯ ಮತ್ತು ಇಷ್ಟವಾಗಿದೆ.

ಅಂತಾರಾಷ್ಟ್ರೀಯ

ರಶಿಯದ ವಿರುದ್ಧ ಅಮೇರಿಕದ ಯುದ್ಧ ಸಿದ್ಧತೆ!

೧೭ ಅವಸರದಿಂದ ಕರೆದ ಕಾಂಗ್ರೆಸಿನ ಸಂಯುಕ್ತ ಸಭೆಯಲ್ಲಿ ಅಧ್ಯಕ್ಷ ಟ್ರೂಮನ್ನರು ಶೀಘ್ರದಲ್ಲಿ ಅಮೇರಿಕದ ಹೊಸ ಧೋರಣೆಯನ್ನು ಸ್ಪಷ್ಟೀಕರಿಸುವರೆಂದೂ ಅಮೇರಿಕದಲ್ಲಿ ಯುದ್ಧ ಸಿದ್ಧತೆಗಾಗಿ ಕಡ್ಡಾಯ ಯೋಗ್ಯ ವ್ಯವಸ್ಥೆ ಮಾಡುವ ಘೋಷಣೆ ಮಾಡುವರೆಂದೂ ರಾಜಕೀಯ ವರ್ತುಗಳ ಅಭಿಪ್ರಾಯವಿದೆ.

ಕಾಂಗ್ರೆಸಿನ ಸಂಯುಕ್ತ ಸಭೆಯಲ್ಲಿ ಅಮೇರಿಕದ ಅಧ್ಯಕ್ಷರು ಇತಿಹಾಸ ಪ್ರಸಿದ್ಧ ಹೇಳಿಕೆ ಕೊಡುವರು ಖಾತ್ರಿ. ಈ ಸಂಯುಕ್ತ ಸಭೆಯನ್ನು ಟ್ರೂಮನ್ನರು ೧೭ ಅವಸರದಿಂದ ಕೂಡಿಸಿದ್ದು ನೋಡಿ ಅನೇಕ ಕಾಂಗ್ರೆಸ ಸದಸ್ಯರಿಗೂ ಆಶ್ಚರ್ಯವಾಗಿದೆ.

ಅಧ್ಯಕ್ಷ ಟ್ರೂಮನ್ನರು ಸಂಯುಕ್ತ ಸಭೆ ಕರೆದಿರುವದರಿಂದ ಅವರ ಘೋಷಣೆಯಲ್ಲಿ ಒತ್ತಾಯದ ಸೈನ್ಯ ಭರತಿ ಮಾಡುವ ಬಗ್ಗೆ ಕಾನೂನು ಮಾಡುವ ವಿಚಾರವಿರುವದೆಂದೂ ಸೈನ್ಯಶಾಖೆಯ ವೆಚ್ಚಕ್ಕಾಗಿ ಹೇರಳ ಹಣ ಮಂಜೂರ ಮಾಡಲು ಕೇಳಬಹುದೆಂದೂ ಆಶಿಸಲಾಗಿದೆ.

ಅಮೇರಿಕದ ಪತ್ರಿಕೆಗಳೂ ಮುಖಂಡರೂ ಕಳೆದ ಕೆಲವು ದಿನಗಳಿಂದ ಅಮೇರಿಕವು ಕೇವಲ ಮಾತಿನ ಬೆದರಿಕೆ ಹಾಕುವ ಧೋರಣೆ ಬಿಟ್ಟು ಪ್ರತ್ಯಕ್ಷ ಯುದ್ಧ ಸಿದ್ಧತೆಯ ಕ್ರಮ ಕೈಕೊಳ್ಳಬೇಕೆಂದು ಪ್ರಚಾರ ನಡೆಸಿದ್ದರಿಂದ ಅಧ್ಯಕ್ಷ ಟ್ರೂಮನ್ನರು ರಶಿಯಕ್ಕೆ ಕೊನೆಯ ಎಚ್ಚರಿಕೆ ಕೊಡಲಿರುವರೆಂದೂ ಫ್ರಾನ್ಸ, ಇಟಲಿ, ತುರ್ಕಸ್ತಾನ, ಗ್ರೀಸ, ಫಿನಲಂಡ, ಸ್ಕಾಂಡಿನೇವಿಯಗಳ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದರೆ ಅಮೇರಿಕವು ಯುದ್ಧ ಸಾರುವದೆಂದು ಘೋಷಿಸಬಹುದೆಂದೂ ಹೇಳಲಾಗುತ್ತಿದೆ.

ಪಶ್ಚಿಮ ಯುರೋಪಿನ ಒಕ್ಕೂಟಕ್ಕೆ ಅಂಕಿತ ಹಾಕಿದ ರಾಷ್ಟ್ರಗಳಿಗೆ ಅಮೇರಿಕವು ರಶಿಯದ ಗಂಡಾಂತರದಿಂದ ರಕ್ಷಿಸಲು ಸೈನ್ಯ ಸಹಾಯ ನೀಡುವ ಆಶ್ವಾಸನ ಕೊಡುವ ವಿಚಾರ ಅಧ್ಯಕ್ಷರು ಮಾಡಬೇಕಾಗಿದೆ. ಇಟಲಿಯ ಚುನಾವಣೆಯಲ್ಲಿ ರಶಿಯವು ಹಸ್ತಕ್ಷೇಪ ಮಾಡಿದ್ದಾದರೆ ಅಮೇರಿಕವು ರಶಿಯದೊಡನೆ ರಾಜಕೀಯ ಸಂಬಂಧ ಮುರಿದುಕೊಂಡು ರಶಿಯವನ್ನು ಶತ್ರು ವೈರಿ ರಾಷ್ಟ್ರವೆಂದು ಸಾರುವ ನಿರ್ಧಾರವನ್ನೂ ನಾಳಿನ ದಿನ ಟ್ರೂಮನ್ನರು ಜಾಹೀರುಪಡಿಸ ಬಹುದು.

ಯುರೋಪಿನಲ್ಲಿಯ ಪ್ರಜಾಪ್ರಭುತ್ವ ಒಪ್ಪಿದ ಯಾವದೇ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದರೆ ಅದರಿಂದ ಅಮೇರಿಕದ ಸಂರಕ್ಷಣೆಗೂ ಗಂಡಾಂತರ ಪ್ರಾಪ್ತವಾಗುವದೆಂಬ ಟ್ರೂಮನ್ನರ ಸಿದ್ಧಾಂತದಂತೆ ಯುರೋಪಿನ ರಾಷ್ಟ್ರಗಳ ರಕ್ಷಣೆಗಾಗಿ ಅಮೇರಿಕದಲ್ಲಿ ಕೂಡಲೇ ಸೈನ್ಯ ಸಂಗ್ರಹ, ಯುದ್ಧ ಕಾಲಕ್ಕೊಪ್ಪುವಂತೆ ಉದ್ಯೋಗಿಕ ಪುನರ್ಘಟನೆ, ಕರ ಮತ್ತು ಒತ್ತಾಯ ಕಾನೂನಿನ ಪುನರುಜ್ಜೀವನ, ಅಮೇರಿಕದಲ್ಲಿ ಗಂಭೀರ ಪರಿಸ್ಥಿತಿಯುಂಟಾಗಿದೆ ಎಂದು ಜಾಹೀರ ಮಾಡುವದು ಇವೇ ಮೊದಲಾದವುಗಳು ಅಧ್ಯಕ್ಷ ಟ್ರೂಮನ್ನರ ಘೋಷಣೆಯಲ್ಲಿರಬಹುದೆಂದು ರಾಜಕೀಯ ವರ್ಗಗಳ ನಿಕಟವರ್ತಿಗಳ ಅಭಿಪ್ರಾಯವಾಗಿದೆ.

೧೯೪೦ ರಲ್ಲಿ ಫ್ರಾನ್ಸಿನ ಪತನದ ನಂತರ ಅಧ್ಯಕ್ಷ ರೂಜವೆಲ್ಟರು ರಾಷ್ಟ್ರದಲ್ಲಿ ಗಂಭೀರ ಪರಿಸ್ಥಿತಿ ಯುಂಟಾಗಿದೆ ಎಂದು ಜಾಹೀರು ಮಾಡಿ ಯುದ್ಧ ಸಿದ್ಧತೆಗೆ ತೊಡಗಿದ್ದ ಪ್ರಸಂಗವೇ ಈಗ ಮರು ಬಂದಿದೆ ಎಂದೂ ಆಗ ಅಧ್ಯಕ್ಷ ರೂಜವೆಲ್ಟರು ಕೈಕೊಂಡ ಯುದ್ಧ ಸಿದ್ಧತೆಯ ಕ್ರಮಗಳನ್ನೇ ಅಧ್ಯಕ್ಷ ಟ್ರೂಮನ್ನರು ಈಗ ಕೈಕೊಳ್ಳಲಿರುವರೆಂದೂ ಹೇಳಲಾಗುತ್ತಿದೆ.

ಪಾಲಿಸ್ತಾನದ ಬಾಂಬಿನ ಪ್ರಕರಣದಲ್ಲಿ ಬ್ರಿ. ಪೋಲೀಸರು

ಅಪರಾಧಿಗಳನ್ನು ಗುರುತಿಸಲೆಂದು ಜೆರೂಸಲೇಮಿನಲ್ಲಿ ನಡೆಸಿದ ಪೋಲೀಸ ಪ್ರದರ್ಶನವೊಂದರಲ್ಲಿ ಬೆನ್ ಯೆಹೂದಿ ರಸ್ತೆಯಲ್ಲಿ ೩ ವಾರಗಳ ಹಿಂದೆ ಬಾಂಬಿಕ್ಕಿದ ಮೂವರು ಬ್ರಿ. ಪೋಲೀಸರನ್ನು ಯೆಹೂದಿ ಸಾಕ್ಷಿಗಳು ಗುರುತಿಸಲಾರದಾದರು.

ಉಕ್ತ ಪೋಲೀಸರನ್ನು ಅರಬ ಉಡುಪಿನಲ್ಲಿ ಶಸ್ತ್ರ ಗಾಡಿಯೊಂದರಲ್ಲಿದ್ದುದನ್ನು ಕಂಡು ಜೆರೂಸಲೇಮಿಗೆ ಉತ್ತರದಲ್ಲಿರುವ ಕಾಲಂದಿಯ ಎಂಬಲ್ಲಿ ಹಿಡಿಯಲಾಗಿತ್ತು. ಅರಬ ಯೆಹೂದಿಗಳ ಕಾದಾಟದ ಕಾಲದಲ್ಲಿ ಫೆಬ್ರುವರಿ ೨ ರಲ್ಲಿ ಒಬ್ಬ ಬ್ರಿ. ಪೋಲೀಸನು ಶಸ್ತ್ರ ಗಾಡಿಯೊಂದರಲ್ಲಿ ಕುಳಿತು ಹಿಂದಿಂದ ಅನೇಕ ಬಾಂಬುಗಳ ಲಾರಿಗಳನ್ನು ಒಯ್ಯುತ್ತಿರುವುದನ್ನು ಕಂಡುದಾಗಿ ೬ ಜನ ಯೆಹೂದಿಗಳು ಹೇಳಿದ್ದೇ ಈ ಪರೀಕ್ಷೆ ಪ್ರಯೋಗಕ್ಕೆ ಕಾರಣವಾಯಿತು.

೩ ನೆಯ ಸಂಗತಿಯೆಂದರೆ ಮೊನ್ನೆ ಮಾರ್ಚ ೧೪ ರಲ್ಲಿ ಹಗನ್ನ ಮಿಲಿಟರಿ ದಳದವರು ಗಾಜ ಪ್ರದೇಶದಲ್ಲಿಯ ಅರಬ ಗ್ರಾಮಗಳ ಮೇಲೆ ಸಶಸ್ತ್ರರಾಗಿ ದಾಳಿ ಮಾಡಿದರೆಂಬ ಸುದ್ದಿ ಬಂದಿದೆ. ಹಳ್ಳಿಯೊಂದನ್ನು ಯುಕ್ತೀಶ್ವರಳಿಗೆ ಸ್ವಾಧೀನಪಡಿಸಿದರೆಂದು ತಿಳಿಯುತ್ತದೆ. ಆ ಕಾಲದಲ್ಲಿ ಅವರಲ್ಲಿ ೭ ಜನ ಸತ್ತರಂತೆ, ೩ ಜನ ಗಾಯಗೊಂಡರಂತೆ.

ಫಲುಂಜಿ ಹಳ್ಳಿಯಲ್ಲಿ ಒಂದು ಯೆಹೂದಿ ಸಶಸ್ತ್ರ ದಲ ಅರಬರ ಪ್ರತಿಭಟನೆಯನ್ನು ಮುಂದಿಸಿ ಗುಂಡುಗಳ ವಿನಿಮಯ ಮಾಡಿ ಸೋತು ಹಳ್ಳಿ ಸೈನ್ಯಕ್ಕೆ ಸೇರಿತೆಂದೂ ಸುದ್ದಿಯಿದೆ.

ಪಾಲಿಸ್ತಾನದ ಘಟನೆಯನ್ನು ವರ್ಣಿಸಿದರೆ ಪುಸ್ತಕವೇ ಆದೀತು. ಬರೆದು ಬರೆದು ಬೇಸರ ಬರಬಹುದು. ಅನೇಕ ದಿನಗಳಿಂದ ಇದೇ ರೀತಿಯಾಗಿ ಕಲಹ, ಘರ್ಷಣ, ಕೊಲೆ, ಸುಲಿಗೆಗಳು ನಡೆಯುತ್ತಲೇ ಇವೆ. ಮೇಲೆ ಹೇಳಿದಂತೆ ಬ್ರಿ. ಪೋಲೀಸರಿಗೂ ಒಂದು ಕೈ ನೋಡುವ ಎನಿಸಿದ್ದರೆ ಅಸ್ವಾಭಾವಿಕವಲ್ಲ. 'ಹತ್ತು ಜನರ ಗೊಂದಲದಲ್ಲಿ ಗದ್ದಲ ಮಾಡಿದವನ್ನು ಮಾಫಿ' ಎಂದುಕೊಂಡು ಕೆಲವರೂ 'ಬೆಂದ ಮನೆಯಿಂದ ಹಿರಿದದ್ದೇ ಲಾಭ' ಎಂದುಕೊಂಡು ಕೆಲವರೂ ತಮ್ಮ ಕರ್ತವ್ಯ ದೃಷ್ಟಿಯನ್ನು ಕ್ಷಣಕಾಲ ಮರೆತರೆ ಅದೊಂದು ದೊಡ್ಡ ಆಶ್ಚರ್ಯವಲ್ಲ. ಈಗ ಪಾಲಿಸ್ತಾನ ವಿಭಜನೆಯಲ್ಲಿ ಉಭಯ ಪಕ್ಷದವರಲ್ಲಿ ಒಮ್ಮತ ಉಂಟಾಗದುದರಿಂದ ಅಮೇರಿಕ ಮತ್ತು ಇತರ ಕೆಲವು ರಾಷ್ಟ್ರಗಳು ಭದ್ರತಾ ಮಂಡಲದಲ್ಲಿ ವಿಭಜನೆಯ ಯೋಜನೆಯಲ್ಲಿ ತಿದ್ದುಪಡಿ ಮಾಡುವ ಸಲಹೆ ತಂದರೆಂದೂ ಅದನ್ನು ರಶಿಯವು ಉಗ್ರವಾಗಿ ಪ್ರತಿಭಟಿಸಿತೆಂದೂ ವಾರ್ತೆ.

ಇಷ್ಟಲ್ಲದೆ ಇತ್ತ ಏಳೂ ಅರಬ ರಾಷ್ಟ್ರಗಳು ಪಾಲಿಸ್ತಾನದಲ್ಲಿಯ ತಮ್ಮ ಮುಂದಿನ ಕಾರ್ಯವನ್ನು ನಿರ್ಧರಿಸಲು ಮಹತ್ವದ ನಿರ್ಣಯಕ್ಕೆ ಬರಲಿವೆಯೆಂದೂ ಹೇಳಲಾಗುತ್ತದೆ. ಇದರ ಮೇಲೆ ಅರಬ ಸೈನ್ಯಪಡೆಯನ್ನು ಸೇರಲು ಇಟಲಿ ಯುಗೋಸ್ಲೇವಿಯಗಳಿಂದ ಜನರು ಲೆಬನಾನಿನ ರಾಜಧಾನಿಯಾದ ಬೈರೂಟಿಗೆ ಬರುತ್ತಿದ್ದಾರೆಂದೂ ತಿಳಿಯುತ್ತದೆ.

ಸಂಯುಕ್ತ ರಾಷ್ಟ್ರ ಸಂಘದ ಮುಂದೆ ಸಾಕ್ಷಿ ಹೇಳುತ್ತ ಯೆಹೂದಿ, ಸಂಸ್ಥೆಯು, "ಪರ ಸರಕಾರಗಳು ಕೈ ಹಾಕದೆ ಇದ್ದಿದ್ದರೆ ಪಾಲಿಸ್ತಾನದ ಪರಿಸ್ಥಿತಿ ಇಷ್ಟು ಪ್ರಕ್ಷುಬ್ಧವಾಗುತ್ತಿದ್ದಿಲ್ಲ" ಎಂದಿದೆ; ಅಲ್ಲದೆ, ಅದಕ್ಕೆ ೫-೬ ಸಾವಿರ ಸಿರಿಯನ್ ಮತ್ತು ಇರಾಕೀ ಜನರು ದಂಡೆತ್ತಿ ಬಂದಿರುವುದನ್ನು ಉದಾಹರಿಸಿದೆ.

ಬ್ರಿ. ಸೇನಾಪತಿ ಸರ್ ಜಾನ್ ಕ್ರೋಕರರು ಹೈಫಾಕ್ಕೆ ಬಂದಿದ್ದು ಪಾಲಿಸ್ತಾನದಿಂದ ಬ್ರಿಟಿಶರನ್ನು ಸಾಗಿಸುವ ವ್ಯವಸ್ಥೆ ಮಾಡಲಿರುವುದಾಗಿ ಗೊತ್ತಾಗುತ್ತದೆ. 'Mischief thou art a foot. Take thou what course thou wilt—ಕುಚೋದ್ಯವೇ! ನೀನಾಗಲೆ ಮುಂದೆ ಹೆಜ್ಜೆಯಿಟ್ಟಿರುವೆ. ಆದುದರಿಂದ ನಿನಗೆ ಇಷ್ಟ ಬಂದ ಹಾದಿಯನ್ನು ಹಿಡಿದು ನಡೆಯಬಹುದು— ಎಂದು ಈ ಪರಿಸ್ಥಿತಿಯಲ್ಲಿ ಯಾರಾದರೂ ಹೇಳಿದರೆ ತಪ್ಪಾಗಲಾರದೆಂದು ನಮ್ಮ ದೃಢಾಭಿಪ್ರಾಯ.

ಮಂಚೂರಿಯದಲ್ಲಿ ಕಮ್ಯೂನಿಸ್ಟರ ಕೈಮೇಲಾಯಿತೆ?

ಮಾರ್ಚ ೧೪ ರ ವರದಿಯ ಪ್ರಕಾರ ಸರಕಾರೀ ದಲಗಳು ಪೂರ್ವ ಹೋನಾನಿನ ಲೋಯಂಗ್ ನಗರದ ಬೀದಿಗಳಲ್ಲಿ ಕಮ್ಯುನಿಸ್ಟರೊಡನೆ ಹಸ್ತಾಹಸ್ತಿ ಯುದ್ಧ ನಡೆಸಿತೆಂದು ತಿಳಿಯುತ್ತದೆ.

ಶಾಂಟುಂಗ್ ಪ್ರಾಂತದಲ್ಲಿ ಚೌತ್ಸಆನ್ ನಗರದ ರಕ್ಷಕ ದಲವನ್ನು ೨೦ ಸಾವಿರ ಕಮ್ಯುನಿಸ್ಟರು ಮುತ್ತಿ ದಿಕ್ಕಪಾಲು ಮಾಡಿ ನಗರವನ್ನು ವಶಪಡಿಸಿಕೊಂಡರು. ಅದೇ ಕಾಲದಲ್ಲಿ ಅವರು ಹವಾಂತ್ಸೈ, ಕ್ವೈವಾನ್ ಎಂಬ ಪಟ್ಟಣಗಳ ಮೇಲೂ ದಾಳಿ ನಡೆಸಿದರು.

ಮಂಚೂರಿಯದಲ್ಲಿ ಕಾರಿನ್, ಸಿರೋಫೆಂಗ್ ಮನ್ ಮುಂತಾದ ಪ್ರಾಣಸ್ಥಲಗಳು ಸರಕಾರೀ ದಲಗಳ ಕೈಬಿಟ್ಟು ಹೋದುದಾಗಿ ತಿಳಿಯುತ್ತದೆ. ಇದರಿಂದ ಚಂಗ್‌ಚುನ್ ನಗರದ ಮೇಲೆ ದೊಡ್ಡ ಪ್ರಮಾಣದಿಂದ ದಾಳಿ ಮಾಡಲು ಕಮ್ಯುನಿಸ್ಟರಿಗೆ ಅವಕಾಶ ದೊರೆತಂತಾಗಿದೆ.

ಇತ್ತೀಚಿನ ಸುದ್ದಿಯ ಪ್ರಕಾರ ಸೆಪಿಂಕೈ ಎಂಬ ನಗರವನ್ನು ಹಿಡಿದು ವಿಜಯವನ್ನು ಪೂರ್ಣಗೊಳಿಸುವುದಕ್ಕಾಗಿ ಕಮ್ಯೂನಿಸ್ಟ ಸೇನಾಪತಿಯು ಟ್ಯಾಂಕುಗಳನ್ನು ಬಳಸುತ್ತಿರುವುದಲ್ಲದೆ ಜಪಾನೀ ಯುದ್ಧ ಕೈದಿಗಳನ್ನೂ ಕೊರಿಯದ ಕಮ್ಯುನಿಸ್ಟರನ್ನೂ ಯುದ್ಧರಂಗಕ್ಕೆ ಧುಮುಕಿಸಿದ್ದಾನೆಂದು ಹೇಳಲಾಗಿದೆ.

ಕಮ್ಯುನಿಸ್ಟರು ಎಲ್ಲ ಕಡೆಗೂ ವಿಜಯಿಗಳಾಗುತ್ತಿದ್ದರೂ ಅವರ ಸಾವು ನೋವುಗಳು ಅಪಾರವಾಗಿವೆಯೆಂದು ಒಪ್ಪಿಕೊಳ್ಳಲಾಗಿದೆ. ಸದ್ಯ: ದಕ್ಷಿಣಕ್ಕೆ ನುಗ್ಗಿ ಬರದಂತೆ ಸರಕಾರೀ ದಲವನ್ನು ತಡೆಹಿಡಿಯಲಾಗಿದೆಯಲ್ಲದೆ ಕಮ್ಯುನಿಸ್ಟರು ಚಂಗ್‌ಚುನ್ನಿನ ಮೇಲೆ ಮತ್ತೆ ಮುತ್ತಿಗೆ ಹಾಕಬರಲಿಲ್ಲ.

ವಾಯುವ್ಯದ ಅನ್ಹೈ ಪ್ರಾಂತದಲ್ಲಿ ಒಕ್ಕಣ್ಣ ಶುಕ್ರಾಚಾರ್ಯ ನೆನಿಸಿದ ಕಮ್ಯೂನಿಸ್ಟ ಸೇನಾಪತಿ ಲ್ಯೂಪೋಚಿರಿಗನು ಪೆಂಗ್‌ಪು ಎಂಬ ರೇಲ್ವೆ ನಗರದ ಮೇಲೆ ಹರಿಹಾಯುತ್ತಿರುವುದಾಗಿ ವರದಿ ಬಂದಿದೆ.

ಇಷ್ಟಾದರೂ ಸರಕಾರವು ಇನ್ನೂ ಹೆಚ್ಚಿನ ಶಸ್ತ್ರಾಸ್ತ್ರಗಳನ್ನೂ ತರಬೇತು ಮಾಡಲು ಸೈನಿಕರನ್ನೂ ಕಳುಹುವುದೆಂದು ಮಂಚೂರಿಯದಿಂದ ನ್ಯಾನ್‌ಕಿಂಗಿಗೆ ಬಂದ ಸರಕಾರೀ ಸಮಿತಿ ಹೇಳಿಕೆ ಕೊಟ್ಟಿದೆ.

ಇದಲ್ಲದೆ ಮೊನ್ನೆ ಮೊನ್ನೆ ಜನರನ್ನು ಮುಕ್ಡೆನ್ನಿನಿಂದ ಪಾರು ಮಾಡುತ್ತಿದ್ದ ಅಮೇರಿಕನ್ ವಿಮಾನಗಳತ್ತ ರಶಿಯದ ಬಂದೂಕುಗಳಿಂದ ಗುಂಡು ಹಾರಿಸಲಾಯಿತೆಂದು ಅಮೇರಿಕ ಮಾಡಿದ ಆರೋಪವನ್ನು ರಶಿಯ ನಿರಾಕರಿಸಿದ ಸುದ್ದಿಯಿದೆ. ಆದುದರಿಂದ ಚೀನೀಯ ವರದಿಯಲ್ಲಿ ಜಯಾಪಜಯಗಳು ಸ್ಥಳೀಯ ಪಕ್ಷಗಳ ಕದನದ ಮೇಲೆ ಮಾತ್ರ ಅವಲಂಬಿಸಿರದೆ ಅವುಗಳ ಬೆಂಬಲಿಗರಾದ ಅಮೇರಿಕ ಮತ್ತು ರಶಿಯಗಳ ಸೈನ್ಯಬಲ ಬುದ್ಧಿಬಲಗಳ ಮೇಲೂ ಅವಲಂಬಿಸಿದೆ ಎಂದರೆ ಬಹಳ ತಪ್ಪಾಗಲಾರದಲ್ಲವೆ? ಮತ್ತು ೩ ನೆಯ ಮಹಾಯುದ್ಧದ ಕಿಡಿಯೇಳುವುದಾದರೆ ಅದು ಚೀನದಲ್ಲಿ ಅಥವಾ ಪಾಲಿಸ್ತಾನದಲ್ಲಿ ಎಂದು ಭವಿಷ್ಯ ಹೇಳಿದರೆ ನಂಬಲಿಕ್ಕೆ ತಕ್ಕಮಟ್ಟಿಗೆ ಯೋಗ್ಯ ಕಾರಣವಿದೆಯೆನ್ನಬಹುದೆಂದು ನಮ್ಮ ಮತ.

ಬಿಡುವು

ವಾಡಿಕೆಯಂತೆ ಹೋಳೀಹಬ್ಬದ ನಿಮಿತ್ತ ೨೯-೩-೪೮ ನೇ ತಾರೀಕಿನ ಸಂಚಿಕೆ ಹೊರಡುವುದಿಲ್ಲ.

ವ್ಯವಸ್ಥಾಪಕ,
ಕರ್ಮವೀರ

ವಿದೇಶದಲ್ಲಿ ಕಾಶ್ಮೀರ


ಕಾಶ್ಮೀರದ ತಂಟೆಯನ್ನು ಬಗೆಹರಿಸಲು ಹೊಸ ಪಂಥದಲ್ಲಿ ಪ್ರಯತ್ನ ನಡೆಯುತ್ತಿದೆಯೆಂದು ವಿಶ್ವಸನೀಯವಾಗಿ ತಿಳಿಯುತ್ತದೆ.

ಭದ್ರತಾಮಂಡಲದ ಅಧ್ಯಕ್ಷರಾದ ಡಾ. ಸಿಯಾಂಗರು ತಮ್ಮ ಮಾತುಕತೆಗಳನ್ನು ಮುಂದುವರಿಸುತ್ತಿದ್ದಾರೆ. ಇವರು ಪ್ರತ್ಯೇಕವಾಗಿ ಒಬ್ಬೊಬ್ಬರನ್ನು ಕಾಣುತ್ತಿರುವುದರಿಂದ ಉಭಯ ಪಕ್ಷಗಳಿಗೂ ತಂತಮ್ಮ ಸರಕಾರಗಳೊಡನೆ ಪ್ರತಿಯೊಂದು ಸಲವೂ ವಿಚಾರ ವಿನಿಮಯ ಮಾಡಲು ಅವಕಾಶ ಸಿಕ್ಕಿದೆ. ಉಭಯ ಪಕ್ಷಗೆ ಳು ತಳೆಯುತ್ತಿರುವ ಧೋರಣೆ ಪ್ರೋತ್ಸಾಹಜನಕವಿದೆಯೆಂದು ಸದಸ್ಯರ ಅಭಿಪ್ರಾಯ.

ಕಾಶ್ಮೀರ ಸಮಸ್ಯೆಯು ಭದ್ರತಾ ಮಂಡಲದೆದುರು ಬಂದು ೨॥ ತಿಂಗಳಾದರೂ ಇನ್ನೂ ಕಾಶ್ಮೀರ ಕದನವನ್ನು ನಿಲ್ಲಿಸಲು ಅದು ಯಾವ ಪ್ರಯತ್ನವನ್ನೂ ಮಾಡಿಲ್ಲ. ಭದ್ರತಾ ಮಂಡಲವು ತನ್ನ ಕರ್ತವ್ಯವನ್ನು ಸರಿಯಾಗಿ ಪಾಲಿಸಲಿಲ್ಲವೆಂದು ಭಾರತಪ್ರತಿನಿಧಿ ಮಂಡಲದ ಧುರೀಣರಾದ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರು ತಾ. ೧೬ ರಲ್ಲಿ ನ್ಯೂಯಾರ್ಕ ಬಾನುಲಿಯಲ್ಲಿ ಮಾತನಾಡುತ್ತ ಹೇಳಿದರು.

ಸಂ. ರಾ. ಸಂಘದಲ್ಲಿ ಸ್ವಾರ್ಥ ಸಾಧಕರಿದ್ದಾರೆ; ಅದು ರಾಜಕೀಯ ರಂಗದಲ್ಲಿ ಪ್ರಗತಿ ಹೊಂದಿಲ್ಲ ಎಂದೂ ಕಾಶ್ಮೀರದ ದಾಳಿಗಾರರಿಗೆ ಪಾಕಿಸ್ತಾನ ನೆರವಿತ್ತಿದೆಯೆಂದೂ ಶ್ರೀ ಅಯ್ಯಂಗಾರರು ಘಂಟಾಘೋಷವಾಗಿ ಸಾರಿದರು.

ವಿದೇಶ ಸರಕಾರಗಳ ಪ್ರತಿನಿಧಿಗಳು ತಾ. ೧೯ ರಲ್ಲಿ ಸಭೆ ಸೇರಿ ಕಾಶ್ಮೀರದ ಪ್ರಶ್ನೆಯ ಚರ್ಚೆಯನ್ನು ಹಿಂದಕ್ಕೆ ತಳ್ಳಿ ಪ್ರಕ್ಷುಬ್ಧವಾಗುತ್ತಿರುವ ಪಾಲಿಸ್ತಾನದ ಪ್ರಶ್ನೆಯನ್ನು ಮೊದಲು ತೆಗೆದುಕೊಳ್ಳಲು ತಂತಮ್ಮ ಸರಕಾರಗಳ ಗಮನ ಸೆಳೆಯಲು ನಿರ್ಧರಿಸಿದರು.



ಜಗತ್ತಿನ ಬೇಡಿಕೆಗಳನ್ನು ಪೂರೈಸುವದರ ಸಲುವಾಗಿ ಸರ್ವ ಸುರಕ್ಷಿತವಾದ ಹೊಸ ವಿಧದ ರೇಡಿಯೊ ಜೋಡಣೆಗಳನ್ನು ಬ್ರಿಟನ್ನು ಲಕ್ಷಗಟ್ಟಲೆಯಲ್ಲಿ ತಯಾರಿಸುತ್ತಿರುವ ಚಿತ್ರ

ಇಂಗ್ಲಂಡಿನಲ್ಲಿ ಒಕ್ಕಲುತನ ಮತ್ತು ಸಾಮಾನ್ಯಜೀವನ

ಇಂಗ್ಲಂಡಿನ ಸಾಮಾನ್ಯ ಮನುಷ್ಯನಿಗಿಂದಿಗೆ ತನ್ನ ನಾಲಿಗೆ ಸೋಲ ಬಲ್ಲ ವಿಧದ ದಿಕ್ಕುಗಳುಂಟು ಬಾಗಿದೆಯೆಂಬುದು ಗೊತ್ತು. ವಿಲಾಸ ಸಾಮಗ್ರಿಗಳು ಕೆಲ ವರ್ಷಗಳ ವರೆಗೆ ದುರ್ಲಭವಾಗಬಹುದೆಂದು ಅವನು ಅರಿತಿದ್ದಾನೆ. ಅನ್ನಕ್ಕೆ ಅವನಿಗೆ ಕೊರತೆಯಿಲ್ಲ. ಮೀನು, ಮಾಂಸ, ಕ್ಯಾಡೇಟ್ ಬಟಾಟೆಗಳು ಅವಶ್ಯವಾಗಿ ಅವನಿಗೆ ಸಿಗುತ್ತವೆ. ಅದರೆ ಉಡಲು ಮಾತ್ರ ಒಳ್ಳೆಯ ಬಟ್ಟೆಗಳಿಲ್ಲ! ಹಳೆ ಬಟ್ಟೆಗಳನ್ನೇ ಅವನು ಧರಿಸುತ್ತಾನೆ. ಆಗೀಗ ಅವನಿಗೆ ಅಮೇರಿಕದಿಂದ ಮಕ್ಕಳಿಗಾಗಿ ಬರುವ ಬಟ್ಟೆಗಳನ್ನು ಕಂಡರೆ ತುಂಬ ಸಂತೋಷ.

ನಾನು ಆಯಾತ ಮಾಡುವ ಸಾಮಗ್ರಿಗಳಿಗಿಂತ ೩ ನೆಯ ಒಂದಂಶದಷ್ಟು ಹೆಚ್ಚು ಸಾಮಗ್ರಿಗಳನ್ನು ಇಂಗ್ಲಂಡು ತರಿಸಿಕೊಳ್ಳುವುದು. ಆದಾಯಕ್ಕಿಂತ ಅದು ದಿನೇ ದಿನೇ ಹೆಚ್ಚು ಹೆಚ್ಚು ಸಾಲದಲ್ಲಿ ಬೀಳುತ್ತಿದೆ. ಇದೇ ಅದರ ಕಷ್ಟ.

ಈ ಸಾಲದ ಹೊರೆಯಿಂದ ಬದುಕಿಕೊಳ್ಳಲು ಇಂಗ್ಲಂಡು ಇಷ್ಟು ವಿಧದ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಮೊದಲನೆಯದಾಗಿ ಗಿರಣಿ ಕಾರಖಾನೆಗಳ ತಯಾರಿಕೆಯನ್ನು ಹೆಚ್ಚಿಸಲು ಪ್ರಾರಂಭಿಸಿದೆ! ಅದರಿಂದ ನಿರ್ಯಾತವಾಗಲು ಹೆಚ್ಚು ಪದಾರ್ಥಗಳೊದಗಿ ತನ್ನೊಳಗಿನ ಅಭಾವವನ್ನು ವೃದ್ಧಿಪಡಿಸಿಕೊಳ್ಳಲಾಗುವುದು. ಈ ದಾರಿಯಲ್ಲಿ ನಡೆಯಲೆಂದು ಕಲ್ಲಿದ್ದಲಿನ ಉತ್ಪಾದನವನ್ನು ಮೊದಲು ಹೆಚ್ಚು ಮಾಡಲು ತಕ್ಕ ಕ್ರಮವನ್ನು ತೆಗೆದುಕೊಳ್ಳಲಾಗಿದೆ. ಎರಡನೆಯದಾಗಿ ಆಹಾರದ ಬೆಳೆಯನ್ನು ಹೆಚ್ಚಿಸುವುದು. ಇದರಿಂದ ಹೊರನಾಡುಗಳಿಂದ ತರಿಸಿಕೊಳ್ಳಬೇಕಾದ ಆಹಾರ ಧಾನ್ಯಗಳ ಪರಿಮಾಣವನ್ನು ಕಡಿಮೆಮಾಡಲು ಅನುಕೂಲವಾಗುವುದು. ಅದಕ್ಕಾಗಿ ಖರ್ಚುಮಾಡಬೇಕಾಗಿದ್ದ ಅನುಮೂಲ್ಯ ಡಾಲರುಗಳನ್ನು ಇತರ ಕಾರ್ಯಗಳಿಗಾಗಿ ಬಳಸಲು ಅನುಕೂಲವಾಗುತ್ತದೆ. ಹೀಗೆ ಉತ್ಪಾದನ ವೃದ್ಧಿ ಮತ್ತು ಆಯಾತದ ಕಡಿತಗಳಿಂದ ಇಂಗ್ಲಂಡು ತನ್ನ ಆಯಾತ ನಿರ್ಯಾತಗಳ ನಡುವಿನ ಅಂತರವನ್ನು ಮುಚ್ಚಲು ಹವಣಿಸಿದೆ.

ಜೀಳು ಗದ್ದೆಗಳ ಸಾಗುವಳಿ

ಯುದ್ಧಕ್ಕೆ ಮುಂಚೆ ಇಂಗ್ಲಂಡಿನ ಒಟ್ಟು ಜನಸಂಖ್ಯೆಯಲ್ಲಿ ೬ ನೆಯ ಒಂದರಷ್ಟು ಜನರು ಕೇವಲ ಆಹಾರ ಧಾನ್ಯಗಳ ಬೆಳೆಯಲ್ಲಿ ತೊಡಗಿ ಒಟ್ಟು ನಾಡಿಗೆ ಬೇಕಾದ ಆಹಾರ ಪರಿಮಾಣದಲ್ಲಿ ೩ ನೆಯ ಒಂದಂಶದಷ್ಟನ್ನು ಬೆಳೆಯುತ್ತಿದ್ದರು. ಆ ಕಾಲದಲ್ಲಿ ಸಾವಿರಾರು ಎಕರೆ ಭೂಮಿಗಳು ಕೃಷಿಹೀನವಾಗಿದ್ದವು. ಕೆಲವಂತೂ ಹಲವಾರು ವರ್ಷಗಳಿಂದ ಹಾಳುಬಿದ್ದಿದ್ದವು. ಭೂಮಿಯ ಬಹುಭಾಗವು ಸಣ್ಣ ಸಣ್ಣ ತುಣುಕುಗಳಾಗಿ ಬೇಲಿ, ಹಾಗಾರ, ಪರಿಖಾ ಇತ್ಯಾದಿಗಳಿಂದ ವಿಭಜಿಸಲ್ಪಟ್ಟಿದೆ.

ಅನೇಕ ಜಮೀನುದಾರರಿಗೆ ಭೂಮಿಯು ಬೇಟೆಗೆ ಮಾತ್ರವಲ್ಲದೆ ಇನ್ನಾವುದಕ್ಕೂ ಉಪಯುಕ್ತವಾಗಿದ್ದಿಲ್ಲ. ಯುದ್ಧದ ಒತ್ತಾಯದಿಂದ ಸರಕಾರವು ಜೀಳು ಗದ್ದೆಗಳನ್ನು ಸಾಗುವಳಿ ಮಾಡಬೇಕೆಂದು ವಿಧಿಸಿತು.

ಇಂಗ್ಲಂಡಿನ ಕೃಷಿ ಪದ್ಧತಿಯೂ ದಿನೇ ದಿನೇ ಬದಲಾಗುತ್ತಿದೆ. ಕೆಲವು ಪ್ರದೇಶಗಳಲ್ಲಿ ಯಂತ್ರೋಪಯೋಗ ನಡೆದಿದೆ. ಅದು ದೊಡ್ಡ ದೊಡ್ಡ ಹೊಲಗಳಲ್ಲಿ ಮಾತ್ರ. ಬಹುಭಾಗಗಳಲ್ಲಿ ಈಗ ಅರ್ಧಶತಮಾನದ ಹಿಂದಿದ್ದ ಸಲಕರಣೆಗಳಿಂದಲೇ ಒಕ್ಕಲುತನದ ಉದ್ದಿಮೆ ನಡೆಯುತ್ತಿದೆ. ಸಾಮಾನ್ಯ ಗದ್ದೆಯೆಂದರೆ ಸುಮಾರು ೪೦ ರಿಂದ ೬೦ ಎಕರೆಗಳಿದ್ದು ಅದರ ಸಾಗುವಳಿಗೆ ಎಲ್ಲೋ ಅಲ್ಪ ಪ್ರಮಾಣದ ವಿದ್ಯುತ್ತು, ಹವೆ ಮುಂತಾದ ಶಕ್ತಿಗಳನ್ನು ಬಳಸಲಾಗುತ್ತಿದೆ. ಯಂತ್ರೋಪಯೋಗ ಸಾಧಿಸಬೇಕಾದುದನ್ನೆಲ್ಲ ಸಾಧಿಸಿದೆಯೆನ್ನಬಹುದು. ಹೊಲವನ್ನು ಒಂದು ವರ್ಷದ ಕರಾರಿನ ಮೇಲೆ ಗೇಣಿಗೆ ಹಿಡಿಯುವುದು ರೂಢಿಯಲ್ಲಿದೆ. ಗೇಣಿಯನ್ನು ರೊಕ್ಕ ಸಲ್ಲಿಸಲಾಗುತ್ತದೆ. ಗೇಣಿಯ ದರ ಎಕರೆಗೆ ೧.೨೦ ಡಾಲರಿಂದ ೫ ಡಾಲರುಗಳ ವರೆಗಿದೆ. ಒಂದು ಎಕರೆ ಭೂಮಿಯ ಬೆಲೆ ಹಿಂದೆ ೨೫ ರಿಂದ ೫೦ ಡಾಲರುಗಳ ವರೆಗಿದ್ದರೆ ಈಗ ೫೦ ರಿಂದ ೮೦ ಡಾಲರುಗಳ ವರೆಗೆ ಏರಿಸಿದ್ದಾರೆ. ಶ್ರೀ ಪ್ಯಾಟರ್ ಸನ್ ಎಂಬವರು ಕಡಮೆ ಜಮೀನನ್ನು ಅತ್ಯುತ್ತಮ ಮಾದರಿಯಲ್ಲಿ ಸಾಗುವಳಿ ಮಾಡಿ ಉಳಿದವರಿಗೊಂದು ಆದರ್ಶವನ್ನೇ ಕಲ್ಪಿಸಿಕೊಟ್ಟಿದ್ದಾರೆಂದು ಶ್ರೀ ಫ್ರ. ಎಂ. ಹಾರ್ಡಿನ್ಸರು ಬರೆಯುತ್ತಾರೆ.

ದನಕರುಗಳ ಸಾಕಣೆ

ದನಕರುಗಳನ್ನು ಸಾಕುವದರಲ್ಲೂ ಒಂದು ಹೊಸ ನಿಯಮಬದ್ಧ ವ್ಯವಸ್ಥೆಯಿದೆ. ಹಾಲು ಕೊಡುವ ದನಗಳನ್ನು ೩೫ ರಂತೆ ಗುಂಪುಗಳನ್ನಾಗಿ ವಿಂಗಡಿಸಿ ಒಂದೊಂದಕ್ಕೆ ಒಬ್ಬೊಬ್ಬ ದನಗಾಹಿಯನ್ನು ನೇಮಿಸಲಾಗಿದೆ. ಅವನಿಗೆ ಒಬ್ಬ ಆಳು ಕೈಕೆಳಗಿರುತ್ತಾನೆ (?). ಅವನು ವಾರದಲ್ಲಿ ೬ ದಿನ ಕೆಲಸ ಮಾಡುತ್ತಾನೆ. ಅವನ ಸಂಬಳ ವಾರಕ್ಕೆ ೨೦ ಡಾಲರುಗಳು. ದಿನಕ್ಕೆ ಅವನು ಸಾವಿರದಿಂದ ಸಾವಿರದಿನ್ನೂರು ಪೌಂಡುಗಳಷ್ಟು ಹಾಲನ್ನು ಒದಗಿಸುತ್ತಾನೆ.

೪ ರಿಂದ ೮ ದನಗಳನ್ನು ಒಂದೆಡೆ ಕಟ್ಟಿ ಯಂತ್ರಗಳನ್ನು ಹಚ್ಚಿ ಹಾಲನ್ನು ಕರೆಸುತ್ತಾರೆ. ಕರೆವಾಗ ಅವಕ್ಕೆ ಮೇವನ್ನು ಕೊಡಲಾಗುತ್ತದೆ. ಕೊಟ್ಟಿಗೆಗಿಟ್ಟಿಗೆ ಒಂದೂ ಅವಕ್ಕಿಲ್ಲ. ಚಳಿಯೇ ಅವಕ್ಕೆ ಒಳ್ಳೆಯದೆಂದು ಶ್ರೀ ಪ್ಯಾಟರ್ ಸನ್ನರೆಸ್ನವರಂತೆ!

ಒಣಹುಲ್ಲನ್ನು ಶೇಖರಿಸದಿದ್ದರೂ ಹಸಿ ಹುಲ್ಲನ್ನು ಹೊಂಡದಲ್ಲಿ ಕೂಡಿಸಿಡುವದು ರೂಢಿ. ಈ ಹುಲ್ಲಿನ ಸಂಗ್ರಹ ಕಾರ್ಯದಲ್ಲಿ ಯಂತ್ರೋಪಕರಣಗಳನ್ನು ಬಳಸಲಾಗುತ್ತದೆ.

ಧಾರಣೆಗಳ ಪೂರ್ವಸೂಚನೆ

ಇತ್ತೀಚೆಗೆ ಆಹಾರೋತ್ಪಾದನೆಯನ್ನು ೧/೪ ಹೆಚ್ಚಿಸುವದರ ಸಲುವಾಗಿ ಬ್ರಿ. ಪಾರ್ಲಿಮೆಂಟು ಹೊಸದೊಂದು ಕಾಯದೆಯನ್ನು ಪಾಸು ಮಾಡಿದೆ. ಅದರನ್ವಯ ಧಾನ್ಯಗಳ ಬೆಲೆಯನ್ನು ೧೮ ತಿಂಗಳ ಮೊದಲೇ ಜಾಹೀರು ಪಡಿಸಲಾಗುವದು. ಮತ್ತು ದನಕರುಗಳ ಧಾರಣೆಯನ್ನು ೩ ವರ್ಷಗಳ ಮೊದಲೇ ನಿರ್ದೇಶಿಸಲಾಗುವುದು; ಇದರ ಮೇಲೆ ಅವುಗಳ ಪ್ರಥಮಾವಧಿ ಮೂಲ್ಯವನ್ನು ಇನ್ನೂ ಎರಡು ವರ್ಷಗಳ ಮೊದಲೇ ನಿರ್ಣಯಿಸಿ ಪ್ರಕಟಿಸಲಾಗುವುದು. ಇಲ್ಲಿಯವರೆಗೆ ಒಕ್ಕಲಿಗನ ಉಪವೃತ್ತಿಯ ಉತ್ಪಾದನೆಗಳಿಗೆ ಇಲ್ಲಿಯ ವರೆಗೆ ಇಂಥಹ ವ್ಯವಸ್ಥೆ ಇದ್ದಿದ್ದಿಲ್ಲ.

ಸರಕಾರದ ಸಹಾಯ

ಸರಕಾರವು ಒಕ್ಕಲುತನದಲ್ಲಿ ಸಹಾಯ ನೀಡಲು ಹಳ್ಳಿ ಹಳ್ಳಿಗಳಲ್ಲಿ ಸಲಹೆಗಾರರನ್ನು ನಿಯಮಿಸಿದೆ. ಅವರು ಹಳ್ಳಿಗಳ ಒಕ್ಕಲುತನದ ಸಂಘಗಳ ಕಾರ್ಯದರ್ಶಿಗಳಾಗಿ ಕೆಲಸ ಮಾಡುವುದೂ ರೂಢಿಯಲ್ಲಿದೆ. ಈ ಸಂಘಗಳು ಬೆಳೆಯತಕ್ಕ ಧಾನ್ಯಗಳನ್ನು ನಿರ್ಧರಿಸುತ್ತವೆ; ಮತ್ತು ಆ ಪ್ರಕಾರ ರೈತರಿಗೆ ಬೀಜವನ್ನು ಹಂಚುತ್ತವೆ. ಈ ಸಂಘಕ್ಕೆ ಅನರ್ಹ ಒಕ್ಕಲಿಗರ ಗದ್ದೆಯನ್ನು ಬಿಡಿಸುವ ಅಧಿಕಾರವಿದೆ. ಆ ಅನರ್ಹರು ಒಡೆಯರಿರಲಿ, ಗೇಣಿದಾರರಿರಲಿ; ಅವರು ಆದರ ಅಧಿಕಾರವನ್ನು ತಡೆಯಲಾರರು. ಈ ಸಂಘಗಳು ತಮ್ಮ ನಿಶ್ಚಯದಂತೆ ರೈತರ ಅರ್ಜಿಬಂದಲ್ಲಿ ಒಡೆಯರಿಗೆ ಗೇಣಿ ಕಡಿಮೆ ಮಾಡಲು ಆಜ್ಞೆ ವಿಧಿಸಬಹುದು. ಒಬ್ಬ ರೈತನಿಗೆ ತನ್ನ ಹೊಲದಲ್ಲಿ ಚಿರಕಾಲ ನಿಲ್ಲುವ ಕೆಲವು ಸುಧಾರಣೆಗಳನ್ನು ಮಾಡಬೇಕೆಂದಿದ್ದು ಅದಕ್ಕೆ ಜಮೀನುದಾರನೊಪ್ಪದಿದ್ದಲ್ಲಿ ಅವನ ಅರ್ಜಿಯು ಮನ್ನಣೆಯಾದರೆ ಈ ಸಂಘವು ಅಂತಹ ಸುಧಾರಣೆಯನ್ನು ಮಾಡಲು ಆ ರೈತನಿಗೆ ಅಪ್ಪಣೆ ಕೊಡಬಹುದು. ಆ ರೈತನು ಜಮೀನನ್ನು ಬಿಟ್ಟದ್ದೇ ಆದರೆ ಆತನು ಬಳಸದೆ ಇದ್ದ ಸುಧಾರಣೆಗಳ ಖರ್ಚನ್ನು ಒಡೆಯನು ತುಂಬಿಕೊಡತಕ್ಕದ್ದು.

ಬೆಲೆ ಮತ್ತು ಆದಾಯಗಳನ್ನು ಖಾತ್ರಿ ಮಾಡಿ ಕೊಟ್ಟಿರುವಾಗ ಅನರ್ಹ ರೈತರ ಜಮೀನನ್ನು ಕಸಿದುಕೊಳ್ಳುವ ಹಕ್ಕು ತಮಗಿದೆಯೆಂದು ಸರಕಾರೀ ಅಧಿಕಾರಿಗಳೆನ್ನುತ್ತಾರೆ.

ಹಾಲಿನ ಸಂಗ್ರಹಕ್ಕೂ ಇಂಗ್ಲೆಂಡಿನಲ್ಲಿ ವಿಶೇಷ ವ್ಯವಸ್ಥೆಯನ್ನು ಮಾಡಲಾಗಿದೆ; ಪ್ರತಿದಿನ ಹಾಲು ಕರೆವ ಹೊತ್ತಿನಲ್ಲಿ ಒಂದು ಮೋಟಾರು ಆಯಾ ಕ್ಷೇತ್ರದೆಡೆಗೆ ಹಾಯ್ದು ಅಲ್ಲಲ್ಲಿಯ ಹಾಲನ್ನು ತುಂಬಿಕೊಂಡು ಹೋಗುತ್ತದೆ. ಸರಕಾರವು ಇಷ್ಟಕ್ಕೆ ಹಾಲನ್ನು ಮಾರಬೇಕೆಂದು ಬೆಲೆಯನ್ನು ನಿರ್ಧರಿಸಿ ವಿಧಿಸಿದೆ. ಇದೇ ಪ್ರಕಾರ ಅದರ ಸಂಗ್ರಹ, ವಿತರಣ ಇತ್ಯಾದಿಗಳನ್ನೂ ಸರಕಾರವು ನಿಯಂತ್ರಿಸಿದೆ. ಒಂದು ಬೀದಿಗೊಂದು ವಿತರಣದ ಕಾರನ್ನು ಇಡಲಾಗಿದೆ. ಅದು ಚಿಲ್ಲರೆ ಹಾಲನ್ನು ಮನೆ ಮನೆಗೂ ಮಾರಲು ಒಯ್ಯುತ್ತದೆ.

ಸೀದಾ ಸಾಮಗ್ರಿಗಳು

ಒಬ್ಬ ಸಾಮಾನ್ಯ ಮನುಷ್ಯನಿಗೆ ವಾರಕ್ಕೆ ಸೀದಾ ಪದ್ಧತಿಯಂತೆ ಅಲ್ಲಿ ಈ ಕೆಳಗಿನಂತೆ ಆಹಾರ ಪದಾರ್ಥಗಳು ಸಿಗುತ್ತವೆ:

	ಪದಾರ್ಥಗಳು	ಪರಿಮಾಣ
೧	ಚಹಾ	೨ ಔನ್ಸು
೨	ಸಕ್ಕರೆ	೧೦ ಔನ್ಸು
೩	ಬೆಣ್ಣೆ	೨ ಔನ್ಸು
೪	ಗಿಣ್ಣು	೨ ಔನ್ಸು
೫	ಚರಬಿ	೪ ಔನ್ಸು
೬	ಒಣಗಿಸಿದ ಹಂದಿ ಮಾಂಸ	೨ ಔನ್ಸು
೭	ಹಂದಿಯ ಪೆಟ್ಟ	೧ ಔನ್ಸು
೮	ಕಾಳು ಬೆರೆಸಿದ ಗೋಮಾಂಸ	೨ ಔನ್ಸು
೯	ಬೇಯಿಸಿದ ಮಾಂಸ	½ ಪೌಂಡು
೧೦	ರೊಟ್ಟಿ	೩ ಪೌಂಡುಕಾಳಿನ ಹಿಟ್ಟಿನದು
೧೧	ಹಾಲು (ಸಿಕ್ಕಿದರೆ)	೩ ಪೈಂಟ್ (೧೫ ಸೇ.)
೧೨	ಮೊಟ್ಟೆ	೧ (೧೫ದಿನಕ್ಕೊಮ್ಮೆ)
೧೩	ಕಪ್ಪಿನ ಹಾಲು	೬ ಅಂಕ (ಯುನಿಟ್)
೧೪	ಹಣ್ಣು	೨೦ ಅಂಕ (ಯುನಿಟ್)

ಮಕ್ಕಳಿಗೆ ಮತ್ತು ಕಷ್ಟದ ಕೆಲಸ ಮಾಡುವವರಿಗೆ ವಿಶೇಷ ಸೀದಾ ಕೊಡುವ ವ್ಯವಸ್ಥೆಯಿದೆ.

ಯುದ್ಧಕ್ಕೆ ಮೊದಲು ಮತ್ತು ಯುದ್ಧಾನಂತರ ಆಹಾರ ವಿತರಣ ಪ್ರಮಾಣ ನೂರಕ್ಕೆಷ್ಟೆಂಬುದನ್ನು ಕೆಳಗೆ ಕೊಟ್ಟಿದೆ:

ದಿನಸುಗಳು	೧೯೪೦ ನೆಯ ವರ್ಷ	೧೯೪೭ ನೆಯ ವರ್ಷ
ಬೆಣ್ಣೆ ಹಿಟ್ಟು ಉಳಿದ ಹಾಲು ಹೈನ	೧೦೦	೧೩೯
ಮಾಂಸ	೯೦	೮೫
ಮೀನು, ಕೋಳಿ	೬೯	೧೦೯
ಮೊಟ್ಟೆ	೯೨	೮೬
ಎಣ್ಣೆ ಮತ್ತು ಕೊಬ್ಬು	೯೨	೬೪
ಸಕ್ಕರೆ ಮತ್ತು ಶರಬತ್ತು	೭೧	೭೪
ಬಟಾಟೆ	೯೮	೧೬೬
ಚಪ್ಪರ ಬದನೆ ಮತ್ತು ಲಿಂಬೆ	೬೯	೪೪
ಮಿಕ್ಕ ಹಣ್ಣು	೮೦	೮೨
ಸೊಪ್ಪು	೧೦೪	೧೦೭
ಮಿಕ್ಕ ಕಾಯಿಪಲ್ಲೆ	೬೪	೧೦೯
ಕಾಳು	೧೦೮	೧೧೦
ಮದ್ಯಾದಿ ಪೇಯ	೧೦೭	೧೧೦

ಮೇಲಿನ ಸಂಗತಿಗಳಿಂದ ಇಂಗ್ಲಂಡು ಹೇಗೆ ಸದ್ಯದ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ತನ್ನ ಆರ್ಥಿಕ ಮತ್ತು ಆಹಾರ ಪರಿಸ್ಥಿತಿಯನ್ನು ವ್ಯವಸ್ಥಿತಗೊಳಿಸಲು ತಕ್ಕ ಕ್ರಮ ತೆಗೆದು ಕೊಂಡು ಜಯಶಾಲಿಯಾಗಿದೆ ಎಂಬುದನ್ನು ಕಾಣಬಹುದು. ಇದರಿಂದ ಭಾರತವು ಎಷ್ಟೋ ವಿಧದಿಂದ ಪಾಠಕಲಿತು ಕೊಳ್ಳಬಹುದಾಗಿದೆ! ತನ್ನ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಆಹಾರಾದಿ ಪದಾರ್ಥಗಳನ್ನೂ ಇತರ ನಿರ್ಯಾತಯೋಗ್ಯ ಪದಾರ್ಥಗಳನ್ನೂ ಹೆಚ್ಚು ಹೆಚ್ಚಾಗಿ ಉತ್ಪಾದಿಸಲು ಸದ್ಯದ ಪರಿಶ್ರಾಂತ ಪರಿಸ್ಥಿತಿಯಲ್ಲಿ ಯಾವ ಯಾವ ಕ್ರಮಗಳನ್ನು ಬೇಗ ಕಾಲೋಚಿತವಾಗಿ ತೆಗೆದು ಕೊಳ್ಳಬೇಕೆಂಬುದನ್ನು ತುಲನಾತ್ಮಕ ದೃಷ್ಟಿಯಿಂದ ನೋಡಲು ಮೇಲಿನ ವಿವರಣ ಸಹಕಾರಿಯಾಗಬಹುದಾಗಿದೆ. ನಮ್ಮ ರಾಷ್ಟ್ರೀಯ ಉತ್ಪಾದನ, ಆಯಾತ, ನಿರ್ಯಾತ, ವೈಯಕ್ತಿಕ ಜೀವನಮಟ್ಟ ಸಾಮಾನ್ಯನಿಗೆ ಸಿಗುವ ಆಹಾರಾದಿ ಪದಾರ್ಥಗಳ ಪರಿಮಾಣ ಮತ್ತು ಗುಣ ಇವುಗಳನ್ನು ಇಂಗ್ಲಂಡಿನವುಗಳೊಡನೆ ಹೋಲಿಸಿದರೆ ನಾವು ಎಷ್ಟು ಅಸ್ತವ್ಯಸ್ತ ಮತ್ತು ಮಂದಗತಿಯಿಂದ ಸಾಗಿರುವೆವೆಂಬುದು ಸ್ಪಷ್ಟವಾಗುತ್ತದೆ. ಜನ ಪ್ರತಿನಿಧಿಗಳು ಅಧಿಕಾರಸ್ಥರೂ ಇತ್ತ ತಲೆ ಹಾಕುವರೆ? ಕೊರತೆಯನ್ನು ನೀಗಿಸಲು ಪ್ರಯತ್ನಿಸುವರೆ? —'ಅರ್ಜುನ'

ತಾ. ೧೫ ರಂದು ಪಶ್ಚಿಮ ಪಂಜಾಬದ ಶಾಸನ ಸಭೆಯಲ್ಲಿ ಮುಂಗಡ ಪತ್ರಿಕೆಯಲ್ಲಿ ಕಾಣಿಸಿದ ಕರಭಾರದ ಬಗ್ಗೆ ಚರ್ಚೆನಡೆದಾಗ ಜಮೀನುದಾರಿ ಪದ್ಧತಿಯನ್ನು ಆದಷ್ಟು ಬೇಗ ನಿರ್ಮೂಲನ ಮಾಡಲು ಮಸೂದೆ ಮಂಡಿಸಲಾಗುವದೆಂದು ಕಂದಾಯ ಮಂತ್ರಿಗಳು ತಿಳಿಸಿದರು.

ಮೀನಶಾಸ್ತ್ರದಲ್ಲಿ ಹೊಸ ಶೋಧ

ಮೀನಿನ ವ್ಯವಸಾಯದಲ್ಲಿ ಸುಧಾರಣೆ ಮಾಡುವ ದಿಶೆಯಲ್ಲಿ ಇತ್ತೀಚೆಗೆ ಇಂಗ್ಲೆಂಡ್ ಹಾಗೂ ಸ್ಕಾಟ್ಲೆಂಡುಗಳಲ್ಲಿ ವಿವಿಧ ಪ್ರಯೋಗಗಳನ್ನು ಮಾಡಲಾಗಿದೆ. ಚಿಕ್ಕ ಮೀನುಗಳನ್ನು ಹೊಸ ಸ್ಥಳದಲ್ಲಿ ಪರಿವರ್ತಿಸಲಾಗಿದೆ ಮತ್ತು ಕೃತ್ರಿಮ ಪೆಟ್ಟಿಗೆ ಯಂತ್ರದಿಂದ, ಕೃತ್ರಿಮ ಕೊಳ್ಳಿಗಳಲ್ಲಿ ಕೃತಕಗೊಬ್ಬರವನ್ನು ಚೆಲ್ಲಿ ಅದರಿಂದ ಹೊಸ ವಿಧದ ಹಾಗೆ ಬೆಳವಣಿಗೆಮಾಡಿದ್ದು ಅದನ್ನು ತಿಂದು ಮೀನುಗಳು ಬಹುಬೇಗ ಮತ್ತು ದೊಡ್ಡದಾಗಿ ಬೆಳೆಯುತ್ತವೆ ಎಂದು ಶೋಧಕರು ಬರೆಯುತ್ತಾರೆ.

ವೈಜ್ಞಾನಿಕ ದೃಷ್ಟಿಯಿಂದ ಇದು ಬಹಳ ಕುತೂಹಲ ಜನಕವಾಗಿದೆ. ಮಾನವನು ಮನಸ್ಸು ಬಂದಂತೆ ನಿಸರ್ಗದಿಂದ ಉಪಯೋಗಿಸಿಕೊಳ್ಳಬಾರದು. ಅವಳ ಉಪಕಾರವನ್ನು ಪಡೆಯುತ್ತಲೇ ಹೋಗಬೇಕಾದರೆ ಅವನು ಅವಳಿಗೆ ಅದಕ್ಕೆ ಪ್ರತಿಯಾಗಿ ಏನನ್ನಾದರೂ ಕೊಡಲೇಬೇಕು.

ವೇಲ್ಸಿನಲ್ಲಿ ತೀರ ಹೊಸ ಮಾದರಿಯ ಪ್ರಯೋಗವೊಂದನ್ನು ನಡೆಸಲಾಗುತ್ತಿದೆಯೆಂದು ಸುದ್ದಿ. ಅಲ್ಲಿಯ ಒಂದು ನದಿಗೆ ಒಡ್ಡು ಹಾಕಿ ೧೫ ಕೊಳಗಳನ್ನು ರಚಿಸಿ ಅದರಲ್ಲಿ ಟ್ರೌಟ್ ಮತ್ತು ಸಾಲ್ಮನ್ ಎಂಬೆರಡು ಬಗೆಯ ಮೀನುಗಳನ್ನು ಸಾಕಲು ವ್ಯವಸ್ಥೆ ಮಾಡಲಾಗಿದೆ.

ತೆಗೆದಲ್ಲಿ ಮತ್ತೆ ಮೀನಿನ ಬಿತ್ತಿಗೆ

ಒಂದುಕಡೆಯಲ್ಲಿರುವ ಮೀನುಗಳನ್ನು ಹಿಡಿದ ನಂತರ ಅಲ್ಲಿ ಮತ್ತೆ ಮೀನನ್ನು ಬೆಳೆಸುವಲ್ಲಿ "ಟ್ರೌಟ್" ಜಾತಿಯ ಮೀನು ಬಹಳ ಉಪಯುಕ್ತವಾಗಿದೆಯೆಂದು ತಿಳಿದುಬರುತ್ತದೆ. ಆದೇ ಸಾಲ್ಮನ್ ಆದರೆ ಒಂದು ಸಲ ತಮ್ಮ ನಾಶವಾದ ಸ್ಥಳದಲ್ಲಿ ಉಳಿದ ಬೀಜದ ಮೊಟ್ಟೆಯಿಂದ ಆ ಎಡೆಗೆ ಕಾಲಿಡದು; ಅಲ್ಲಿಂದ ಪರದಾರಿಯಾಗಿ ಪಲಾಯನವಾಗಿ ಬಿಡುವದು. ಇದನ್ನು ಕಂಡು ಶ್ರೀ ಅರ್ನೆ ಜೋಶಕರು ಸಾಲ್ಮನ್ನಿನ ಬಾಲಕ್ಕೆ ಲೋಹದ ಚಕ್ರವೊಂದನ್ನು ಗುರುತಿಗಾಗಿ ಕಟ್ಟಿ ಅದಿರುವ ವಿಶಿಷ್ಟ ನದಿಯಲ್ಲೇ ಆ ಜಾತಿಯನ್ನು ಒಯ್ದು ಹಾಕಿ ಬೆಳೆಸುವ ಕರಾಮತ್ತಿನ ವಿಧಾನವನ್ನು ಕಂಡುಹಿಡಿದಿದ್ದಾರೆ. ಅವರು "ಫಿಶ್ ಒಫೀಲ" ಎಂಬ ಔಷಧ ಹಾಕಿ ಸ್ವಾಭಾವಿಕ ಸಾಲ್ಮನ್ನಿಗಿಂತ ದೊಡ್ಡ ಗಾತ್ರದ ಮೀನುಗಳನ್ನು ಬೆಳೆಸಿ ಸಂಗ್ರಹಿಸಿದ್ದಾರೆ.

ಮೀನಿನ ವ್ಯವಸಾಯದಲ್ಲಿ ಚಿಕ್ಕ ಮೀನುಗಳಿಗೆ ಆಹಾರ ಹಾಕುವದೇ ಅತ್ಯಂತ ಕಠಿಣವಾದ ಕೆಲಸ. ಆ ವಿಷಯದಲ್ಲೂ ಶೋಧಕರ ಶೋಧ ನಡೆಯುತ್ತಲೇ ಇದೆ. ಎರಡನೆಯದೆಂದರೆ ಅವು ಸಮುದ್ರಕ್ಕೆ ಹೋದವರೆ ತಿರುಗಿಬರುವದನ್ನೂ ಖಾತ್ರಿ ಮಾಡಿಕೊಳ್ಳುವ ಬಗೆ. ಈ ಎರಡರಲ್ಲಿ ಶೋಧ ಪೂರ್ತಿಯಾದರೆ ಇದರಿಂದ ಇಡಿ ಜಗತ್ತೇ ಲಾಭ ಹೊಂದಬಹುದು.

ಭೂಮಧ್ಯದಲ್ಲಿ ಮತ್ತು ಸಮುದ್ರದಲ್ಲಿ ಮೀನನ್ನು ಸಾಕುವ ಅನೇಕ ಯೋಜನೆಗಳನ್ನು ರಚಿಸುತ್ತಿರುವ ಈ ಕಾಲದಲ್ಲಿ ಭಾರತಕ್ಕೆ ಮೇಲಿನ ಶೋಧದಿಂದ ಬಹಳ ಪ್ರಯೋಜನವುಂಟು. ಕರ್ನಾಟಕದ ಪಡುವಣದಲ್ಲಿ ಈ ಉದ್ಯಮ ಪ್ರಾಚೀನದಿಂದ ನಡೆದುಬಂದಿದ್ದರೂ ಅದು ವೈಜ್ಞಾನಿಕ ಪ್ರಯೋಗ ಬುದ್ಧಿಯ ಅಭಾವದಿಂದ ಎಷ್ಟರ ಮಟ್ಟಿಗೂ ಪ್ರಗತಿಹೊಂದಿಲ್ಲ. ಮಂಗಳೂರು, ಕಾರವಾರ, ಮುಂತಾದ ಸ್ಥಳಗಳಲ್ಲಿ ದೊಡ್ಡ ದೊಡ್ಡ ಸಂಶೋಧನಾಲಯಗಳು ಸ್ಥಾಪಿಸಲ್ಪಡಬೇಕಲ್ಲದೆ, ತೀರವಾಸಿಗಳಲ್ಲಿ ಮುಂದುವರಿದ ಮೀನಿನ ವ್ಯವಸಾಯದಿಂದ ಅವರಿಗೆ ಅವರ ಈಗಿನ ತಿಳುವಳಿಕೆ ಮೀರಿದ ಲಾಭವಿದೆಯೆಂಬುದನ್ನು ತಿಳುಹಬೇಕಾಗಿದೆ. ಈ ಪ್ರಯತ್ನದ ಮೂಲಕ ನಾಡಿಗೆ ಅಗತ್ಯವಾದ ಮೀನಿನ ಪೂರೈಕೆಯನ್ನಷ್ಟೇ ಅಲ್ಲ, ನಿರ್ಯಾತಕ್ಕೆ ಒದಗುವಷ್ಟು ಮೀನಿನ ಉತ್ಪಾದನೆಯನ್ನು ಹೆಚ್ಚಿಸುವದು ಸರಕಾರದ ಕರ್ತವ್ಯವಲ್ಲವೆ?

ಹಿಂದುಸ್ತಾನದ ಹಿರಿಯೋಲಗ

ಹಿಂದುಸ್ಥಾನದ ಹಿರಿಯೋಲಗದಲ್ಲಿ ೨೨ ೧೦ ರಂದು ವ್ಯಾಪಾರ ಧೋರಣದ ಚರ್ಚೆ ನಡೆಯಿತು. ಆಗ ಹಲವರು ಕಡಿತದ ಸೂಚನೆ ಮುಂದ್ರಿಸಿದರು. ಅವರಲ್ಲಿ ಶ್ರೀ ರಂಗರಾವ ದಿವಾಕರರು ಕರಾವಳಿ ತಟದ ಸಾರಿಗೆ ಮತ್ತು ವಿಮಾ ಯೋಜನೆಯ ಬಗ್ಗೆ ಕಡಿತದ ಸೂಚನೆ ತಂದರು. ಆಗ ಶ್ರೀ ದಿವಾಕರರು ಮಾತನಾಡುತ್ತ, ಹಿಂದುಸ್ತಾನದ ಕರಾವಳಿ ಸಾರಿಗೆಯನ್ನು ಈ ವರೆಗೆ ಅಲಕ್ಷಿಸಲಾಗಿದ್ದು ಅಲ್ಲಿಯ ವ್ಯಾಪಾರಕ್ಕೆ ಹಾನಿಯಾಗಿದೆಂದೂ ಸರಕಾರವು ಈ ಬಗ್ಗೆ ಉದಾರ ಯೋಜನೆ ಬೇಕೆಂದೂ ಹೇಳಿದರು. ಕೆಲವು ವರ್ಷ ಹಡಗಗಳನ್ನು ಕಟ್ಟುವದು ಸಾಧ್ಯವಿಲ್ಲದ್ದರಿಂದ ಕರಾವಳಿ ಸಾರಿಗೆ ಸಣ್ಣ ದೋಣಿಗಳನ್ನೇ ಅವಲಂಬಿಸಬೇಕಾಗಿದೆ. ಅದ್ದರಿಂದ ಅದಕ್ಕೆ ಉತ್ತೇಜನ ದೊರೆಯಬೇಕು. ಮತ್ತು ಈ ಸಾರಿಗೆಗಳಲ್ಲಿ ವಿಮಾ ಮೊದಲಿನ ವಿಮೆ ಇಳಿಸುವದು ಅಗತ್ಯವಿದೆ ಎಂದು ಮೊದಲಾಗಿ ಹೇಳಿದರು.

ವಾಣಿಜ್ಯ ಮಂತ್ರಿಗಳಾದ ಶ್ರೀ ಭಾಭಾ ಅವರು ಸಮರ್ಪಕ ಉತ್ತರ ಕೊಟ್ಟ ನಂತರ ನಾಲ್ಕೂ ಕಡಿತದ ಸೂಚನೆಗಳು ಹಿಂತೆಗೆದು ಕೊಳ್ಳಲ್ಪಟ್ಟವು.

ಬಳಿಕ ಸಾರ್ವಜನಿಕ ಆರೋಗ್ಯ ಖಾತೆಯ ಬೇಡಿಕೆಯ ಬಗ್ಗೆ ಚರ್ಚೆ ನಡೆದು ಮೂರು ಕಡಿತದ ಸೂಚನೆ ಮುಂದಿಡಲ್ಪಟ್ಟವು. ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತಕೌರರು ಉತ್ತರಿಸುತ್ತ, ಮದ್ರಾಸದ ಕಿಂಗ ಇನ್‌ಸ್ಟಿಟ್ಯೂಟ ಮತ್ತು ಮುಂಬಯಿಯ ಹ್ಯಾಫಕಿನ್ ಇನ್‌ಸ್ಟಿಟ್ಯೂಟನ್ನು ಪಡೆದುಕೊಳ್ಳುವ ಬಗ್ಗೆ ಪ್ರಾಂತಿಕ ಸರಕಾರಗಳೊಡನೆ ಮಾತುಕತೆ ನಡೆದಿದೆಯೆಂದೂ ದಿಲ್ಲಿಯ ಲೇಡಿ ಹಾರ್ಡಿಂಜ ಕಾಲೇಜನ್ನು ಪಡೆದುಕೊಳ್ಳುವ ವಿಚಾರವೂ ನಡೆದಿದೆಯೆಂದೂ ಸಭೆಗೆ ತಿಳಿಸಿದರು. ಇವರ ಉತ್ತರ ಕೇಳಿದ ನಂತರ ಮೂರೂ ಕಡಿತದ ಸೂಚನೆಗಳು ಹಿಂತೆಗೆದುಕೊಳ್ಳಲ್ಪಟ್ಟವು.

ತಾ ೧೧ ರಂದು ಓಲಗವು ಲೋಕೋಪಯೋಗಿ ಖಾತೆಯ ನೀರಾವರಿ ಧೋರಣದ ವಿವಿಧಾಂಗಗಳನ್ನು ಚರ್ಚಿಸಿತು. ಜಲಸಂಪತ್ತು ಭೂಸಂಪತ್ತು ವಾಸ ಇವುಗಳಿಗೆ ಸಂಬಂಧಿಸಿದ ಧೋರಣದ ಬಗ್ಗೆ ೩ ಕಡಿತದ ಸೂಚನೆ ಮುಂದೆಬಂದವು. ಚರ್ಚೆಗೆ ಉತ್ತರ ಕೊಡುತ್ತ ಲೋಕೋಪಯೋಗಿ ಖಾತೆಯ ಮಂತ್ರಿಗಳಾದ ಶ್ರೀ ಗಾಡಗೀಳರು ಹೀಗೆ ಹೇಳಿದರು.

ನೆರೆ ಹಾವಳಿಯನ್ನು ತಡೆಯುವ ಹಾಗೂ ಅಣೆಕಟ್ಟುಗಳನ್ನು ಕಟ್ಟುವ ವಿಷಯದಲ್ಲಿ ಒಂದು ಸಮಿತಿಯನ್ನು ಸ್ಥಾಪಿಸಲಾಗಿದೆ. ಇದರ ಸಹಾಯಕ್ಕೆ ದೇಶ ವಿದೇಶ ಎಂಜಿನಿಯರ ತಜ್ಞ ಸಮಿತಿಯೊಂದನ್ನು ನಿರ್ಮಿಸಿದೆ. ಅಯಾ ನದಿಗಳ ಪಾತ್ರ ಪರಿಚಯವಿದ್ದ ನುರಿತ ಎಂಜಿನಿಯರರ ಅಗತ್ಯವಿದ್ದು ನಿವೃತ್ತರಾದವರನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳುವ ವಿಚಾರ ನಡೆದಿದೆ.

ಈ ಸಭೆಯು ಸರಕಾರದಿಂದ ಮುಂದಿನ ೨೦ ವರ್ಷಗಳಲ್ಲಿ ಪ್ರತಿ ಪ್ರಾಂತದಲ್ಲಿ ಕನಿಷ್ಠ ಎರಡು ನದಿಗಳಿಗೆ ಅಣೆಕಟ್ಟು ಕಟ್ಟಲಾಗುವದೆಂದು ಹೇಳಬಯಸುತ್ತೇನೆ.

ಇನ್ನು ಮನೆಯುಳ್ಳವರಿಗೆ ವಸತಿ ಸೌಕರ್ಯ ಕಲ್ಪಿಸಿಕೊಡುವದು ಸರಕಾರದ ಹೊಣೆಯಲ್ಲ. ಮಧ್ಯದ ಸರಕಾರಿ ಖಾತೆಯ ನೌಕರರಿಗೆ ಮಾತ್ರ ಸೌಕರ್ಯ ಒದಗಿಸಬೇಕೆಂದು ಸರಕಾರದ ವಿಚಾರವಿದೆ. ಸಾರ್ವಜನಿಕರಿಗೆ ವಾಸಾನುಕೂಲ ಮಾಡಿಕೊಡುವದು ಪ್ರಾಂತಿಕ ಸರಕಾರದ ಕೆಲಸ.

ಭೂಸಂಪತ್ತಿನ ವಿಷಯವಾಗಿ ಸರಕಾರವು ಬೇಗ ತನ್ನ ಧೋರಣ ಸಾರುವದು. ಹೊಸ ಘಟನೆಯ ಪ್ರಕಾರ ಭೂಸಂಪತ್ತಿನ ವಿಷಯ ಕೇಂದ್ರಕ್ಕೆ ಸಂಬಂಧಿಸಿದ್ದರೆ ಕೆಲಸವಾಗದು. ದೇಶದ ಭೂಸಂಪತ್ತನ್ನು ಗೊತ್ತುಹಚ್ಚಲು ರಶಿಯಾದಲ್ಲಿ ೧೦ ಸಾವಿರ ಭೂಗರ್ಭ ಶಾಸ್ತ್ರಜ್ಞರು ದುಡಿಯುತ್ತಿದ್ದಾರೆ. ಈ ಮಾನದಿಂದ ಹಿಂದುಸ್ತಾನಕ್ಕೆ ೧೫ ಸಾವಿರ ತಜ್ಞರಾದರೂ ಬೇಕು ಎಂದು ಮೊದಲಾಗಿ ಉತ್ತರಿಸಲು ಎಲ್ಲ ಕಡಿತದ ಸೂಚನೆಗಳೂ ಹಿಂತೆಗೆದುಕೊಳ್ಳಲ್ಪಟ್ಟವು.

[illegible] ಬೇಡಿಕೆ ವಿಷಯ ಚರ್ಚೆಗೆ ಬಂದಿತು. ಶ್ರೀ ರಂಗರಾವ ದಿವಾಕರರು ಮೂಲ ಶಿಕ್ಷಣವನ್ನು ಚರ್ಚಿಸಲು ಒಂದು ಕಡಿತದ ಸೂಚನೆ ಮಂಡಿಸಿದರು. ಇದರಂತೆ ಡಾ. ದೇಶಮುಖರು ಶಿಕ್ಷಣದ ಪ್ರಶ್ನೆಯ ಬಗ್ಗೆ, ಶ್ರೀಮತಿ ದುರ್ಗಾಬಾಯಿಯವರು ವಿಶ್ವವಿದ್ಯಾಲಯಗಳಿಗೆ ಸಹಾಯ ಸಲ್ಲಿಸುವ ಬಗ್ಗೆ ಮತ್ತು ಬನಾರಸ ಹಿಂದು ವಿಶ್ವವಿದ್ಯಾಲಯ ಹಾಗೂ ಅಲ್ಲಿಗಡದ ಮುಸ್ಲಿಂ ವಿದ್ಯಾಲಯಗಳ ಹೆಸರು ಬದಲಿಸಬೇಕೆಂಬ ಬಗ್ಗೆ, ಶ್ರೀಮತಿ ದುರ್ಗಾಬಾಯಿಯವರು ಜಾತೀಯತೆಯ ತಳಹದಿಯ ಮೇಲೆ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುತ್ತಿರುವ ಬಗ್ಗೆ, ಶ್ರೀ ಫ್ರಾಂಕ ಅಂತೋನಿಯವರು ಸರಕಾರವು ಭಾಷೆಯ ವಿಷಯದಲ್ಲಿ ನಿಶ್ಚಿತ ಧೋರಣ ತಳೆಯಬೇಕೆಂಬ ಬಗ್ಗೆ ಕಡಿತದ ಸೂಚನೆ ತಂದರು. ಶಿಕ್ಷಣ ಮಂತ್ರಿಗಳಾದ ಮೌಲಾನಾ ಅಜಾದರು ಸಮರ್ಪಕ ಉತ್ತರ ಕೊಟ್ಟ ಮೇಲೆ ಕಡಿತದ ಸೂಚನೆಗಳು ಹಿಂತೆಗೆದು ಕೊಳ್ಳಲ್ಪಟ್ಟವು. ಶಿಕ್ಷಣ ಮಂತ್ರಿಗಳು ಕೊಟ್ಟ ಉತ್ತರದ ಸಾರ ಹೀಗೆ.

ಪ್ರಾಥಮಿಕ ಶಿಕ್ಷಣದ ಬಗ್ಗೆ ಅ. ಭಾ. ಶಿಕ್ಷಣ ಪರಿಷತ್ತಿನ ಪಂಚವಾರ್ಷಿಕ ಯೋಜನೆಯನ್ನು ಸರಕಾರ ಮನ್ನಿಸಿದ್ದು ಅದನ್ನು ೧೦ ವರ್ಷಗಳೊಳಗೆ ಕಾರ್ಯರೂಪಕ್ಕಿಳಿಸಬೇಕೆಂದು ನಿರ್ಣಯವಾಗಿದೆ. ಈ ಯೋಜನೆಗೆ ೨೪ ಕೋಟಿ ರೂ. ಗಳ ವೆಚ್ಚ ಬರಲಿದೆ.

ಇನ್ನು ಮೇಲೆ ಭಾರತದ ಶಿಕ್ಷಣ ಸಂಸ್ಥೆಗಳನ್ನು ವಿಸ್ತರಿಸುವ ಬಗ್ಗೆ ಹೆಚ್ಚು ಲಕ್ಷ್ಯಕೊಡಲಾಗುವದು ಅಗತ್ಯ ಕಂಡರೆ ಸರಕಾರೀ ವೆಚ್ಚದಿಂದ ವಿದೇಶಕ್ಕೆ ಶಿಕ್ಷಣಕ್ಕಾಗಿ ಯೋಗ್ಯರನ್ನು ಕಳುಹಿಸಲಾಗುವದು.

ಲಖನೌದಲ್ಲಿದ್ದ ಹಿಂದುಸ್ಥಾನಿ ಸಂಗೀತ ಕಾಲೇಜಿನ ಪುನವ್ಯ೯ವಸ್ಥೆಯ ಬಗ್ಗೆ ಮತ್ತು ದಕ್ಷಿಣ ಭಾರತದಲ್ಲಿ ಕರ್ನಾಟಕ ಸಂಗೀತದ ಹೊಸ ಕೇಂದ್ರ ಕಾಲೇಜನ್ನು ತೆರೆಯುವ ಬಗ್ಗೆ ಈ ಸಲ ಏರ್ಪಾಡು ಮಾಡಲಾಗಿದೆ.

ಶಾರೀರಿಕ ಶಿಕ್ಷಣ ಮತ್ತು ಗೃಹಶಾಸ್ತ್ರದ ಬಗ್ಗೆ ಟ್ರೇನಿಂಗ ಕಾಲೇಜುಗಳನ್ನು ಸ್ಥಾಪಿಸಲಾಗುವದು.

ರವೀಂದ್ರನಾಥರ ವಿಶ್ವಭಾರತಿಯಲ್ಲಿ ಈಗಾಗಲೇ ಲಲಿತಕಲೆ, ಸಂಗೀತ, ಮೂಲ ಶಿಕ್ಷಣ ಇವುಗಳ ಶಿಕ್ಷಣದ ವ್ಯವಸ್ಥೆ ಇದ್ದು ಸರಕಾರವು ಈ ಶಿಕ್ಷಣದ ವಿಸ್ತರಣದ ಬಗ್ಗೆ ತಕ್ಕ ಏರ್ಪಾಟು ಮಾಡುವದು.

ಬೆಂಗಳೂರಿನ ಟಾಟಾ ವಿಜ್ಞಾನ ಸಂಸ್ಥೆಯ ಸಹಾಯ ಧನವನ್ನು ಹೆಚ್ಚಿಸಲಾಗಿದೆ.

ಭಾರತದ ವೇದಾಂತದ ಇತಿಹಾಸವನ್ನು ಬರೆಯಲು ಡಾ. ರಾಧಾಕೃಷ್ಣನ್ನರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನೇಮಿಸಲಾಗಿದೆ. ಭಾರತದ ಉಜ್ವಲವಾದ ರಾಷ್ಟ್ರೀಯ ಇತಿಹಾಸವನ್ನು ಯುಕ್ತ ರೀತಿಯಲ್ಲಿ ಬರೆಯಿಸಲೆಂದು ಮತ್ತೊಂದು ಸಮಿತಿಯನ್ನು ರಚಿಸಲಾಗುವದು.

ಶಿಕ್ಷಣ ಸಂಸ್ಥೆಗಳಲ್ಲಿ ವಿಶೇಷತಃ ಮದ್ರಾಸದಲ್ಲಿ ಜಾತೀಯತೆಗನುಸರಿಸಿ ಪ್ರವೇಶ ಕೊಡಲಾಗುತ್ತದೆಂದು ದೂರಿದ್ದರಲ್ಲಿ ಅರ್ಥವಿದೆ. ಈ ಬಗ್ಗೆ ನಾನು ಮದ್ರಾಸ ಸರಕಾರದೊಡನೆ ಪತ್ರವ್ಯವಹಾರ ನಡೆಸುವೆ. ಜಾತಿಮತಗಳಿಗೆ ಪ್ರಾಧಾನ್ಯ ಕೊಡುವದು ಸರ್ವಥಾ ತಪ್ಪು ಆದರೆ ಹರಿಜನರಿಗೆ ಮಾತ್ರ ವಿಶೇಷ ಸೌಕರ್ಯವಿರಬೇಕೆಂಬುದು ಸ್ಪಷ್ಟವಿದೆ.

ಇನ್ನು ಭಾಷೆಯ ಬಗ್ಗೆ ಶಿಕ್ಷಣ ಖಾತೆಯ ಹಾಗೂ ಶೈಕ್ಷಣಿಕ ಪರಿಷತ್ತಿನ ಸ್ಥಾಯಿಸಮಿತಿಯವರು ೫ ವರ್ಷಗಳೊಳಗೆ ಇಂಗ್ಲೀಷಿನ ಉಚ್ಚಾಟನವಾಗಬೇಕೆಂದೂ ರಾಷ್ಟ್ರೀಯ ಭಾಷೆ ಬಳಕೆಗೆ ಬರತಕ್ಕದ್ದೆಂದೂ ನಿರ್ಣಯಿಸಿದ್ದಾರೆ. ಈ ನಿರ್ಣಯಕ್ಕನುಸರಿಸಿ ಸರಕಾರವು ನಡೆದುಕೊಳ್ಳುವದು. ಯುಕ್ತಪ್ರಾಂತದ ಸರಕಾರವು ಹಿಂದಿಯಲ್ಲಿ ತನ್ನ ಗೇಜೆಟ್ ಹೊರಡಿಸಲು ನಿರ್ಧರಿಸಿತು. ಆದರೆ ಅಲ್ಲಿಯ ಮುಖ್ಯ ಪ್ರಧಾನರಿಗೆ ನಾನು ಪತ್ರ ಬರೆದು ಹಿಂದಿಯ ಜೊತೆಗೆ ಇಂಗ್ಲಿಷನ್ನು ಬಳಸಲು ಸೂಚಿಸಿದೆ. ಅದಕ್ಕವರು ಒಪ್ಪಿರುವರು.

ತಾ. ೧೧ ನೇ ದಿನ ನಡೆದ ಪ್ರಶ್ನೋತ್ತರಗಳ ಕಾಲಕ್ಕೆ ಮುಖ್ಯ ಮಂತ್ರಿ ಪಂ. ನೆಹರು ಅವರು ಹೀಗೆ ಹೇಳಿದರು.

ಅಸ್ಸಾಮದಲ್ಲಿಯ ಪಾಕಾರಿಯಾ ಕಾಯ್ದಿಟ್ಟ ಅರಣ್ಯ ಭಾಗದಲ್ಲಿದ್ದ ಬಿ. ಓ. ಸಿ. ಎಣ್ಣೆ ಕಂಪನಿಯ ಪ್ರಯೋಗ ಖಾತೆಯ ಕಾಯಲು ಕಳುಹಿಸಲ್ಪಟ್ಟ ಸೈನಿಕರ ತಂಡ ಪಡೆಯನ್ನು ಪೂರ್ವ ಪಾಕಿಸ್ತಾನ ಸರಕಾರದ ಸೈನ್ಯವು ಹೊಡೆದು ಹಾಕಿದ್ದರಿಂದ ಅದು ಹಿಂತಿರುಗಿ ಬರಬೇಕಾಯಿತು. ಪೂರ್ವ ಪಾಕಿಸ್ತಾನ ಸರಕಾರವು ಮೊದಲು ಕಾಯ್ದಿಟ್ಟ ಅರಣ್ಯದ ಕೆಲವು ಭಾಗದ ಮೇಲೆ ತನ್ನ ಹಕ್ಕು ಪ್ರಸ್ತಾಪಿಸಿ ಆಮೇಲೆ ಜಾನೇವರಿಯ ಕೊನೆಗೆ ಇಡೀ ಅರಣ್ಯವೇ ತನ್ನದೆಂದು ಸಾಧಿಸತೊಡಗಿತು. ಈ ಅರಣ್ಯವನ್ನೆಲ್ಲ ಪೂರ್ವ ಪಾಕಿಸ್ತಾನ ಸರಕಾರ ಆಕ್ರಮಿಸಿದೆಯೆಂಬುದು ಸುಳ್ಳು.

ದಿಕ್ಕಿಲ್ಲದ ನಿರಾಶ್ರಿತರನ್ನು ಸರಕಾರದ ನಿರಾಶ್ರಿತ ಶಿಬಿರಗಳಲ್ಲಿ ಇಡಲಾಗಿದೆ. ಅವರಿಗೆ ಪುಕ್ಕಟೆಯಾಗಿ ಆಹಾರ ಧಾನ್ಯ ಮತ್ತು ಬಟ್ಟೆ ಪೂರೈಸಲಾಗುತ್ತಿದೆ. ಕೆಲವರಿಗೆ ಕಟ್ಟಡದ ಸರಕು ಸಾಮಗ್ರಿಗಳನ್ನು ಸೋವಿ ಬೆಲೆಗೆ ಕೊಡಲಾಗುತ್ತಿದೆ.

ಶ್ರೀ. ಗಿಯಾನಿ ಗುರುಮುಖ ಸಿಂಗರ ಪ್ರಶ್ನೆಗೆ ಉತ್ತರ ಕೊಡುತ್ತ ಮುಖ್ಯ ಮಂತ್ರಿಗಳು ಅಲಿಬೇಗ ಮುಸಲ್ಮಾನೇತರ ನಿರಾಶ್ರಿತರ ಶಿಬಿರದಲ್ಲಿ ವಿಶೇಷ ಪ್ರಾಣ ಹಾನಿಯಾಗಿದೆಯೆಂದೂ ಚಳಿಗಾಲಗಳಿಂದ ರಕ್ಷಣೆಯಿಲ್ಲದ್ದಕ್ಕೆ ಬಹುತರ ಜನರು ಸತ್ತರೆಂದೂ ಹೇಳಿದರು ಅಲ್ಲಿ ೨ ಸಾವಿರ ನಿರಾಶ್ರಿತರಿದ್ದರಾಗಿ ತಿಳಿಯುತ್ತದೆ. ಅವರಿಗೆ ವಸತಿ ಸೌಕರ್ಯ ನೆಟ್ಟಗಿದ್ದಿಲ್ಲ. ಯೋಗ್ಯ ಪ್ರಮಾಣದಲ್ಲಿ ಆಹಾರವು ದೊರೆಯಲಿಲ್ಲ. ಹಾಸಿಗೆ ಹೊದಿಕೆ ಸಿಗಲಿಲ್ಲ. ಪಾಕಿಸ್ತಾನ ಮಾರ್ಗವಾಗಿ ಹಿಂದುಸ್ತಾನಕ್ಕೆ ಇವರನ್ನು ಸ್ಥಾನಾಂತರಿಸುವ ಬಗ್ಗೆ ಶಕ್ಯವಿದ್ದ ಎಲ್ಲ ಪ್ರಯತ್ನ ನಡೆದಿದೆ.

ತಾ. ೧೨ ರಂದು ಹೈದರಾಬಾದ ಸರಕಾರವು ನಡೆಸಿದ ಸ್ವೈರಾಚಾರದ ಚರ್ಚೆ ನಡೆಯಿತು. ಗಡಿಪ್ರದೇಶದಲ್ಲಿ ನಿಜಾಮ ಪೋಲೀಸರೂ ಇತ್ತೆಹಾದದವರೂ ನಡೆಸಿದ ದಾಳಿ ಅತ್ಯಾಚಾರ ಲೂಟಿ ಇವುಗಳ ಬಗ್ಗೆಯೂ ಇವನ್ನು ದಮನಿಸಲು ಹಿಂದುಸ್ತಾನ ಸರಕಾರವು ಯಾವ ಉಪಾಯ ಕೈಕೊಂಡಿರುವದು ಎಂಬ ವಿಷಯವೂ ಶ್ರೀ. ಲಾಲಾ ದೇಶಬಂಧು ದಾಸ, ಶ್ರೀ. ಅರುಣ ಚಂದ್ರ ಗುಹಾ, ಶ್ರೀ. ಜಸಪತರಾಯ ಕಾಪುರ, ಶ್ರೀ. ಎನ್. ಜಿ. ರಂಗಾ, ಶ್ರೀ. ತಾಜಮುಲ್ ಹುಸೇನ, ಶ್ರೀ. ಸೇಠ ಗೋವಿಂದದಾಸ ಮೊದಲಾದವರು ಅನೇಕ ಪ್ರಶ್ನೆ ಕೇಳಿದರು. ಅವರೆಲ್ಲರಿಗೂ ಉತ್ತರಿಸುತ್ತ ಭಾರತದ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲರು ಹೇಳಿದುದರ ಸಾರಾಂಶ ಹೀಗಿದೆ.

ಹೈದರಾಬಾದದ ಅನಾಹುತವನ್ನೆಲ್ಲ ಸರಕಾರವು ಅಂತ್ಯಂತ ದಕ್ಷತೆಯಿಂದಲೇ ನಿರೀಕ್ಷಿಸುತ್ತದೆ. ನೆರೆಯ ಪ್ರಾಂತದ ಮೇಲೆ ನಿಜಾಮರ ಜನರು ಅನೇಕ ದಾಳಿ ಮಾಡಿದ್ದು ತಿಳಿದಿದೆಯಾದರೂ ದಾಳಿಗಳ ಸಂಖ್ಯೆ ಪ್ರಾಣ ಹಾನಿ ವಿತ್ತಹಾನಿ ಎಷ್ಟಾಗಿದೆ. ನಿಶ್ಚಿತ ತಿಳಿದಿಲ್ಲ ಗಡಿಯ ರಕ್ಷಣೆಯ ಬಗ್ಗೆ ನಿಜಾಮರೊಡನೆ ಸಂಧಾನ ನಡೆದಿದೆ. ಎಷ್ಟೋ ಘಟನೆಗಳ ಬಗ್ಗೆ ನಿಜಾಮರಿಂದ ಪರಿಹಾರವನ್ನು ಬೇಡಲಾಗಿದೆ. ಎಲ್ಲ ಸಂಸ್ಥಾನಗಳ ಬಗ್ಗೆ ತಳೆದ ಧೋರಣವನ್ನೇ ಹೈದರಾಬಾದದ ಬಗ್ಗೆಯೂ ತಳೆದಿದ್ದೇವೆ. ವಿಚಾರ ವಿನಿಮಯಗಳೂ ಮಹತ್ವದ ನಿರ್ಣಯಗಳೂ ಆದಷ್ಟು ಶಾಂತರೀತಿಯಿಂದಲೇ ನಡೆಯಬೇಕೆಂದೂ ಎಲ್ಲ ವಿವಾದಾಸ್ಪದ ಪ್ರಶ್ನೆಗಳನ್ನು ಪ್ರಜರೇ ಬಿಡಿಸಬೇಕೆಂದೂ ನನ್ನ ಇಚ್ಛೆ ಆದರೆ ಇತ್ತೇಹಾದುಲ್ ಮುಸಲ್ಮೀನದವರ ಭಾಷಣ ಮತ್ತು ಚಟುವಟಿಕೆಗಳು ಭಯಂಕರ ಪರಿಸ್ಥಿತಿಗೆ ಕಾರಣವಾಗುವದೆಂಬುದು ನಿಃಸಂಶಯ ಎಂದು ಮೊದಲಾಗಿ ಹೇಳಿದರು.

ನಿರಾಶ್ರಿತರ ಖಾತೆಯ ಆರ್ಥಿಕ ಬೇಡಿಕೆಯ ವಿರುದ್ಧ ಮಂಡಿಸಲ್ಪಟ್ಟ ಕಡಿತದ ಸೂಚನೆಯ ಚರ್ಚೆಗೆ ಉತ್ತರ ಕೊಡುತ್ತ ನಿರಾಶ್ರಿತರ ಖಾತೆಯ ಮಂತ್ರಿ ಶ್ರೀ. ಕೆ. ಸಿ. ನಿಯೋಗಿಯವರು ಪಾಕಿಸ್ತಾನದೊಡನೆ ವ್ಯವಹರಿಸಲು ಬಹಳ ಸಹನ ಶಕ್ತಿ ಬೇಕು, ಕೊನೆಗೆ ನಮಗೆ ಗೆಲವು ಕಟ್ಟಿಟ್ಟದ್ದು ದೇಶವು ಅಭಿವೃದ್ಧಿಯಾದ ಹೊರತು ನಿರಾಶ್ರಿತರು ಪಾಕಿಸ್ತಾನದಲ್ಲಿ ಬಿಟ್ಟು ಬಂದ ಸೊತ್ತುಗಳ ಪ್ರಶ್ನೆ ಬಗೆಹರಿದ ಹೊರತು ನಿರಾಶ್ರಿತರ ಸಮಸ್ಯೆ ಪೂರ್ಣ ಬಿಡಲಾರದು.

ಮುಸಲ್ಮಾನರು ಇಲ್ಲಿ ಬಿಟ್ಟು ಹೋದ ಭೂಮಿಗಿಂತ ಮುಸಲ್ಮಾನೇತರರು ಪಾಕಿಸ್ತಾನದಲ್ಲಿ ಬಿಟ್ಟು ಬಂದ ಭೂಮಿ ಉತ್ತಮವಾದುದು.

ಪಟ್ಟಣಗಳಿಂದ ಬಂದ ನಿರಾಶ್ರಿತರ ಸಲುವಾಗಿ ಹೊಸ ಪಟ್ಟಣಗಳನ್ನು ಕಟ್ಟುವ ಮತ್ತು ಬಂದರಗಳನ್ನು ಅಭಿವೃದ್ಧಿಗೊಳಿಸುವ ಯೋಜನೆಗಳ ನಿರಾಶ್ರಿತರ ಉಪಜೀವನದ ಸಮಸ್ಯೆಯನ್ನು ಸರಕಾರವು ಬಿಡಿಸಲು ವಿಚಾರಗಳನ್ನೂ ಯೋಜನೆಗಳನ್ನೂ ಕೈಕೊಳ್ಳುವದು. ಇದಕ್ಕೂ ಬೇಗ ಇದಕ್ಕೂ ಹೆಚ್ಚು ಕೆಲಸ ಬೇಕೆಂದು ನೀವು ಬಯಸಿದರೆ ಮಂತ್ರಿಯ ಬದಲು ಒಬ್ಬ ಜಾದೂಗಾರನನ್ನು ನೇಮಿಸಬೇಕು ಎಂದು ಮೊದಲಾಗಿ ಹೇಳಿದರು. ಉತ್ತರದ ನಂತರ ಕಡಿತದ ಸೂಚನೆಗಳೆಲ್ಲ ಹಿಂತೆಗೆದುಕೊಳ್ಳಲ್ಪಟ್ಟವು.

ಹಿಂದೀ ವಿಮಾನ ಸಾರಿಗೆಗಳ ರಾಷ್ಟ್ರೀಕರಣದ ಬಗ್ಗೆಯೂ ಚರ್ಚೆ ನಡೆಯಿತು ಈ ಬಗ್ಗೆ ಶ್ರೀ. ಕಿದ್ವಾಯಿಯವರು, ಹಿಂದುಸ್ತಾನದಲ್ಲಿಯ ವಿಮಾನ ಸಾರಿಗೆಯಿಂದ ಪ್ರಾರಂಭದಿಂದಲೇ ಲಾಭವಿದೆ. ಆದರೆ ಪರರಾಷ್ಟ್ರಗಳಿಗೆ ಸಾರಿಗೆ ಪ್ರಾರಂಭಿಸಿದರೆ ಸ್ವಲ್ಪ ಹಾನಿ ಸಂಭವಿಸ ಬಹುದೆಂದು ಹೇಳಿದರಲ್ಲದೆ ರಾಷ್ಟ್ರೀಕರಣದ ಬಗ್ಗೆ ಇನ್ನೂ ಯಾವ ನಿರ್ಧಾರವೂ ಆಗಿಲ್ಲವೆಂದು ನುಡಿದರು.

ತಾ ೧೪ ರಂದು ಹಿಂದುಸ್ತಾನದ ಸಂರಕ್ಷಣ ಮಂತ್ರಿಗಳಾದ ಸರದಾರ ಬಲದೇವ ಸಿಂಗರು ರಾಷ್ಟ್ರೀಯ ವಿದ್ಯಾರ್ಥಿ ಸೈನ್ಯಪಡೆಯ ನಿರ್ಮಾಣದ ಬಗ್ಗೆ ಈ ಹೆಸರಿನ ಸಮಿತಿಯು ಸೂಚಿಸಿದ ಸಲಹೆಗಳನ್ನು ಸ್ವೀಕರಿಸಿದ್ದಾಗಿ ತಿಳಿಸಿದರು ವಿದ್ಯಾರ್ಥಿದಳದಲ್ಲಿ ಹಿರಿ, ಮತ್ತು ಕಿರಿ, ಕನ್ಯಾ ಎಂದು ೩ ಭಾಗ ಮಾಡಲಾಗಿದೆ. ಹಿರಿದರಲ್ಲಿ ೩೨೪೦ ತುಕಡಿಗಳಿವೆ ಕಿರಿದರಲ್ಲಿ ೧ ಲಕ್ಷ ೩೫ ಸಾವಿರ ತುಕಡಿಗಳಿವೆ ಈ ಬಗ್ಗೆ ಮಂತ್ರಿಗಳು ಮಾತನಾಡುತ್ತ, ದೇಶದ ತರುಣರಿಗೆ ಸೈನ್ಯ ಶಿಕ್ಷಣ ಕೊಡಬೇಕೆಂಬುದಾಗಿ ಸಾರ್ವತ್ರಿಕ ಬೇಡಿಕೆಯುತ್ತ ಸರಕಾರವು ಅದನ್ನು ಪೂರೈಸಲು ನಿರ್ಧರಿಸಿದೆಯೆಂದು ಸಾರಿದರು.

ಸಂರಕ್ಷಣ ಖಾತೆಯ ಬೇಡಿಕೆಯ ಚರ್ಚೆಯ ಕಾಲಕ್ಕೆ ಕಾಶ್ಮೀರದ ಮತ್ತು ಕರ್ನಾಟಕದ ಶ್ರೀ ಮುನವಳ್ಳಿಯವರಿಂದ ಹೈದರಾಬಾದ ಗಡಿ ಜಿಲ್ಲೆಗಳ ದುರ್ಘಟನೆಗಳ ವಿಷಯಗಳು ಎತ್ತಲ್ಪಟ್ಟವು ಅವನ್ನು ತಡೆಯಲು ಯೋಗ್ಯಕ್ರಮ ಕೈಕೊಳ್ಳಲು ಕೇಳಲಾಯಿತು. ಕಾಶ್ಮೀರದ ದಾಳಿಗಾರರನ್ನು ಓಡಿಸಲು ಇನ್ನು ೩—೪ ತಿಂಗಳು ಹಿಡಿಯ ಬಹುದೆಂದು ಮಂತ್ರಿಗಳು ಹೇಳಿದರು ಸೈನ್ಯ ಖಾತೆಯ ವೆಚ್ಚದ ಬಗ್ಗೆ ಮಾತನಾಡುತ್ತ ಹೀಗೆ ಹೇಳಿದರು.

೧೯೩೯ ರಿಂದ ನಮ್ಮ ಸೈನ್ಯ ಎರಡರಷ್ಟು ಬೆಳೆದಿದೆ. ಆಗ ೫೦ ಕೋಟಿ ರೂ ವೆಚ್ಚಬೇಕಾದರೆ ಈಗ ಸೈನ್ಯ ಖಾತೆಗೆ ೧೪೭ ಕೋಟಿ ರೂ. ಗಳಾದರೂ ಬೇಕು ೧೯೩೯ ರಲ್ಲಿ ನೌಕಾ ಪಡೆಯಲ್ಲಿ ೮ ಹಡಗಗಳು ೨೨೧೨ ಅಧಿಕಾರಿಗಳೂ ಇದ್ದರೆ ಈಗ ೩೪ ಹಡಗಗಳು ೧೧೮೫೦ ಅಧಿಕಾರಿ ಕಾರಿಗಳೂ ಇದ್ದಾರೆ. ಆಗ ವೈಮಾನಿಕದಲ ೩೫೦ ಇತ್ತು ಇಂದು ೮೭೦೦ ಇವೆ ಎಂದು ಮೊದಲಾಗಿ ಹೇಳಿ ಸಂರಕ್ಷಣದ ವೆಚ್ಚಕ್ಕೆ ಹಿಂದು ಮುಂದು ನೋಡಬಾರದೆಂದರು.

ಪಂ. ಕುಂಜುರವರನ್ನು ಬಿಟ್ಟು ಉಳಿದವರೆಲ್ಲ ತಮ್ಮ ಕಡಿತದ ಸೂಚನೆ ಹಿಂತೆಗೆದುಕೊಂಡರು ಕುಂಜುರುರವರ ಕಡಿತದ ಸೂಚನೆಯು ಮತಕ್ಕೆ ಹಾಕಲು ನಿರಾಕೃತವಾಯಿತು.

ನಂತರ ಸಾರಿಗೆ ಖಾತೆಯ ಬೇಡಿಕೆ ಚರ್ಚೆಗೆ ಬಂದಿತು ಸಾರಿಗೆ ಮಂತ್ರಿ ಡಾ. ಮಥಾಯಿಯವರು ಚರ್ಚೆಗೆ ಉತ್ತರ ಕೊಡುತ್ತ, ಕೇಂದ್ರ ಸರಕಾರವು ಕಾಠೇವಾಡ ಕರಾವಳಿಯಲ್ಲಿ ಮತ್ತು ಮಾರ್ಮಗೋವಾ ಕೊಚ್ಚಿಗಳ ನಡುವೆ ದೊಡ್ಡ

—೯ನೆಯ ಪುಟಕ್ಕೆ

ರಚನಾತ್ಮಕ ಕಾರ್ಯಕರ್ತರ ಹೊಸ ಸಂಘಟನೆ

ಸೇವಾ ಗ್ರಾಮದಲ್ಲಿ ಕೂಡಿದ ರಚನಾತ್ಮಕ ಕಾರ್ಯಕರ್ತರ ಪರಿಷತ್ತಿನಲ್ಲಿ ಸತ್ಯಾಹಿಂಸೆಗಳ ಅಡಿಗಲ್ಲಿನ ಮೇಲೆ ನಿಂತ 'ಸರ್ವೋದಯ ಸಮಾಜ' ವೆಂಬ ಹೊಸದೊಂದು ಸಂಘಟನೆಯನ್ನು ಸ್ಥಾಪಿಸುವ ನಿರ್ಧಾರವನ್ನೊಳಗೊಂಡ ಠರಾವನ್ನು ಪಾಸು ಮಾಡಲಾಯಿತೆಂದು ತಿಳಿದು ಬರುತ್ತದೆ. ವರ್ಗರಹಿತ, ವರ್ಣಭೇದರಹಿತ ಎನಿಸುವ ಸಮಾಜವನ್ನು ರಚಿಸುವುದೇ ಉಕ್ತ ಸಂಘಟನೆಯ ಧ್ಯೇಯವೆಂದು ಸಾರಲಾಗಿದೆ. ಈ ಸಂಘಟನೆಯು ವರ್ಷಂಪ್ರತಿ ಕುಂಭಮೇಲ ಮೊದಲಾದ ಜಾತ್ರೆಗಳಂತೆ ಜನವರಿ ೩೦ ರಲ್ಲಿ—ಅಂದರೆ ಮಹಾತ್ಮರನ್ನು ಕೊಲೆಗೈದ ದಿನ ಸೇರಬೇಕೆಂದು ನಿರ್ಣಯಿಸಲಾಗಿದೆ.

ಮೇಲೆ ಹೇಳಿದ ಸಮಾಜವು ಗಾಂಧಿಯವರ ಜೀವನ ಸರ್ವಸ್ವವೆನಿಸಿದ ಧ್ಯೇಯಗಳ ಆಚರಣೆಯನ್ನು ಪ್ರಚುರಪಡಿಸಲೋಸುಗ ಸ್ಥಾಪಿತವಾಗಿದೆ. ಅದರ ಕಾರ್ಯಕ್ರಮದ ಪಟ್ಟಿಯಲ್ಲಿ ೧೨ ಮುದ್ದೆಗಳಿವೆ. ಅವಾವುವೆಂದರೆ:—

(೧) ಖಾದಿಗಾಗಿ ದುಡಿಯುವುದು.

(೨) ಹಿಂದು—ಮುಸ್ಲಿಂ ಐಕ್ಯ ಸಾಧನ.

(೩) ಅಸ್ಪೃಶ್ಯತಾ ನಿವಾರಣ ಪ್ರಯತ್ನ.

(೪) ಮೂಕ ಕೋಟಿಯ ಉದ್ಧಾರ ಕಾರ್ಯ.

(೫) ಗ್ರಾಮೋದ್ಯೋಗಗಳ ಪುನರುಜ್ಜೀವನ.

(೬) ಒಕ್ಕಲುತನದ ಸುಧಾರಣೆ.

(೭) ಜಾತೀಯತೆಯ ನಿರ್ಮೂಲನ.

(೮) ಪ್ರಾಂತೀಯತೆಯ ಉಚ್ಚಾಟನೆ.

(೯) ವಿಶ್ವಭ್ರಾತೃತ್ವದ ಪ್ರಚಾರ.

(೧೦) ರಾಷ್ಟ್ರದ ಆರ್ಥಿಕ ಮಟ್ಟವನ್ನು ಏರಿಸುವುದು.

(೧೧) ಸಮಾಜಸೇವೆ.

(೧೨) ಸಾಮಾನ್ಯ ಜನಕ್ಕೆ ವಿದ್ಯಾದಾನ ಮಾಡುವುದು ಇತ್ಯಾದಿ.

ಸೂಚನೆಯನ್ನು ಸಭೆಯ ಮುಂದಿರಿಸುತ್ತ ಶ್ರೀ. ಶಂಕರರಾವ ದೇವರವರು ಅದರ ಅರ್ಥವನ್ನು ವಿವರಿಸಿ, ಅಂಥ ಕಾರ್ಯವನ್ನು ಮಾಡಬೇಕಾಗಿರುವುದರ ಅಗತ್ಯವನ್ನು ಮನಮೆಚ್ಚುವಂತೆ ಹೇಳಿ, ಗಾಂಧಿಯವರ ನೆನಹನ್ನು ಚಿರಕಾಲ ಉಳಿಯುವಂತೆ ಮಾಡುವುದರ ಅವಶ್ಯಕತೆಯನ್ನು ವಿಶದಪಡಿಸಿದರು. ಅಂಥ ಕಾರ್ಯದಲ್ಲಿ ಆಸಕ್ತರಾದವರು ಕಾರ್ಯಾಲಯಕ್ಕೆ ತಮ್ಮ ಹೆಸರನ್ನು ತಿಳಿಸಬೇಕೆಂದೂ ಹಾಗೆ ತಿಳಿಸಿದರೆ ಅವರ ಹೆಸರುಗಳನ್ನು ದಫ್ತರದಲ್ಲಿ ದಾಖಲು ಮಾಡಲಾಗುವುದೆಂದೂ ಸಾರಲಾಯಿತು. ಡಾ. ರಾಜೇಂದ್ರ ಪ್ರಸಾದರು ಮತ್ತು ಕಿಶೋರೀಲಾಲ ಮಶ್ರೂವಾಲರು 'ಸಮಿತಿ' ಎಂಬ ಕಾರ್ಯಸಮಿತಿಯನ್ನು ನಿಯಮಿಸಿ, ಕೆಲಸ ಪ್ರಾರಂಭಿಸಲು ಯುಕ್ತ ನಿರ್ದೇಶಗಳನ್ನು ಕೊಡುವರೆಂದು ಹೇಳಲಾಗಿದೆ.

ಮೊದಲು ಅಂಥಹ ಸಂಘಟನೆಯ ವಿರುದ್ಧವಿದ್ದ ಆಚಾರ್ಯ ವಿನೋಬ ಭಾವೆಯವರು ಧ್ಯೇಯವನ್ನು ಕೊಲ್ಲುವ ನಿಯಮಾವಳಿಯ ಜಡಜೀಢ ಜಾಲ ಅಲ್ಲಿಲ್ಲವೆಂಬುದನ್ನು ಕಂಡು ಕಡೆಯಲ್ಲಿ ಉಕ್ತ ಸಂಘಟನೆಗೆ ಬೆಂಬಲ ಕೊಡುವುದಾಗಿ ಹೇಳಿದರು.

ಓರಿಸ್ಸದ ಮುಖ್ಯ ಮಂತ್ರಿ ಹರೇಕೃಷ್ಣ ಮೆಹ್ತಾಬ್, ಆಚಾರ್ಯ ಕೃಪಲಾನಿ ಮತ್ತು ಸಂತ ತುಕಾಡೋಜಿ ಈ ಮೂವರೂ ಸೂಚನೆಗೆ ಬೆಂಬಲವಿತ್ತರು.

ಸಮಾಜದ ಸದಸ್ಯರು ಚುನಾವಣೆ, ರಾಜಕೀಯ ಚಟುವಟಿಕೆ, ಇಲ್ಲವೆ ಸರಕಾರೀ ಅಧಿಕೃತ ಮುಂತಾದವುಗಳಲ್ಲಿ ಭಾಗವಹಿಸಬಹುದೇ, ಬಾರದೇ ಎಂಬ ಬಗ್ಗೆ ಸಭೆಯಲ್ಲಿ ಚರ್ಚೆ ನಡೆದು ಅಂಥ ಯಾವ ನಿರ್ಬಂಧವೂ ಅವರಿಗಿರಕೂಡದೆಂದೂ ಅವರವರ ಇಷ್ಟಾನುಸಾರ ಅವರವರು ಕಾರ್ಯ ಸಾಗಿಸಲಿ ಎಂದೂ ನಿರ್ಣಯವಾಯಿತು.

ಎರಡು ಗಂಟೆಗಳಿಗಿಂತಲೂ ಹೆಚ್ಚು ಕಾಲದ ವರೆಗೆ ತಿದ್ದುಪಡಿಯನ್ನು ಸೂಚಿಸ ಬಂದವರು ತಮ್ಮ ಮಾತುಗಾಳಿಗವನ್ನು ನಡೆಸಿದರೂ ತಿದ್ದುಪಡಿಗಳೆಲ್ಲ ಬಹುವಾಗಿ ಬಿದ್ದುಹೋದವು.

ಸದಸ್ಯೆಯರಾದ ಶ್ರೀಮತಿ ಸರಳಾಬೆನ್ (ಗುಜರಾಥ್) ಮತ್ತು ಶ್ರೀಮತಿ ಸುಶೀಲಾ ಪೈಗಳು (ಮುಂಬಯಿ) ಮಹಿಳೆಯರಿಗೆ ಮಹನೀಯರೊಡನೆ ಸಮಾನ ಸ್ಥಾನವಿರಬೇಕೆಂದೂ ಅವರ ಸ್ಥಾನವನ್ನು ಉನ್ನತಗೊಳಿಸಬೇಕೆಂದೂ ಮಹಿಳೆಯರ ಪರವಾಗಿ ವಕಾಲತ್ತು ವಹಿಸಿದರು. ಇದಕ್ಕೆ ಪ್ರತಿಯಾಗಿ ಶ್ರೀಮತಿ ಆಶಾದೇವಿಯವರು ಈ ಗಂಡುಬೀರಿತನಕ್ಕೆ 'ಥೂಥೀ' ಎಂದುದಲ್ಲದೆ, ತಾಯ್ತನವು ದೇವತ್ವಕ್ಕೆ ಮಾತ್ರ ಕಿಂಚಿದೂನವಿದೆಯೆಂದು ಹೇಳಿ, ಹಾಗೆ ಕಲಹ ಮಾಡಿ ದ್ವೇಷಾಸೂಯೆಗಳನ್ನು ಹುಟ್ಟಿಸಕೂಡದೆಂದು ಬಲವಾಗಿ ಉತ್ತರ ಕೊಟ್ಟರು.

ಕಾಕಾ ಕಾಲೇಲಕರರು ಹಿಂದೀ—ಹಿಂದುಸ್ತಾನೀ ಸಮಸ್ಯೆಯನ್ನೆತ್ತಿ ಹಿಂದುಸ್ತಾನಿಯು ಅದಷ್ಟು ಮಟ್ಟಿಗೆ ಉರ್ದು ಮತ್ತು ಸಂಸ್ಕೃತ ಶಬ್ದಗಳನ್ನು ಜೀರ್ಣಿಸಿಕೊಳ್ಳಬೇಕೆಂದು ಸೂಚಿದರು.

ಪರಿಷತ್ತು ೫ ರಚನಾತ್ಮಕ ಕಾರ್ಯ ಸಂಸ್ಥೆಗಳಾದ ಅಖಿಲ ಭಾರತ ಗ್ರಾಮೋದ್ಯೋಗ ಸಂಘ, ಅ. ಭಾ ಚರಕ ಸಂಘ, ಗೋಸೇವಾ ಸಂಘ ಮತ್ತು ನಯೀತಾಲೀಮು ಸಂಘ ಇವುಗಳನ್ನು ಒಂದುಗೂಡಿಸುವ ತತ್ವವನ್ನು ಅಂಗೀಕರಿಸಿತಲ್ಲದೆ, ಅದನ್ನು ಸಾಧಿಸಲು ತಕ್ಕ ಕ್ರಮವನ್ನು ಕೈಗೊಳ್ಳಲು ಪ್ರೊ. ಜೆ. ಸಿ. ಕುಮಾರಪ್ಪನವರಿಗೆ ಅಧಿಕಾರವನ್ನು ಕೊಟ್ಟಿತು.

ಶನಿವಾರ ಸಭೆ

ಸಭಾ ಮಂಟಪದಲ್ಲಿ ಅಧ್ಯಕ್ಷ ಪೀಠದ ಹಿಂದೆ ಗಾಂಧಿಯವರ ಶರೀರ ಪರಿಮಾಣದ ತೈಲಚಿತ್ರವನ್ನು ತೂಗುಹಾಕಲಾಗಿತ್ತು. ವಾತಾವರಣ ಬಹಳ ಮೌನಮುದ್ರಿತವಾಗಿತ್ತು. ಅಂತಹ ವೇಳೆಯಲ್ಲಿ ಪರಿಷತ್ತು ಕಾರ್ಯವನ್ನು ಮಧ್ಯಾಹ್ನದ ನಂತರ ಆರಂಭಿಸಿತು.

ಗಾಂಧೀ ಸೇವಾ ಸಂಘದ ಅಧ್ಯಕ್ಷರಾದ ಶ್ರೀ. ಅಪ್ಪಾಸಾಹೇಬರು ತಮ್ಮ ಸ್ವಾಗತ ಭಾಷಣದಲ್ಲಿ, ಕೇವಲ ಭಾರತವಲ್ಲಲ್ಲದೆ ಇಡಿ ಪ್ರಪಂಚದಲ್ಲಿ ಗಾಂಧಿ ತತ್ವವನ್ನು ಪ್ರಚುರ ಪಡಿಸುವ ತ್ವರಿತದ ಅವಶ್ಯಕತೆಯನ್ನು ಒತ್ತಿ ಹೇಳಿದರು. ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು—"ಸದ್ಯದ ರಚನಾತ್ಮಕ ಸಂಘಟನೆಗಳನ್ನು ಸಮಸ್ಥಾನದಲ್ಲಿ ಒಂದುಕ್ಕೊಂಡು ಹೊರಡಿಸಿ ನಾವು ಶಕ್ತಿ ಸಂಚಯ ಮಾಡಿಕೊಳ್ಳಬೇಕಲ್ಲದೆ ಹೊಸದೊಂದು ಸಂಸ್ಥೆಯನ್ನು ಕಟ್ಟಲು ಹೋಗಬಾರದು. ನಾವು ನಮ್ಮ ಗೌರವ ಪ್ರತಿಷ್ಠೆಗಳನ್ನು ಹೆಚ್ಚಿಸಿಕೊಳ್ಳಬೇಕು. ಅವೀಗ ಅಧೋಮುಖವಾಗಿವೆ; ಅವುಗಳನ್ನು ಉನ್ಮುಖ ಮಾಡಬೇಕಾದರೆ ನಾವು ಗಾಂಧಿ ತತ್ವವನ್ನು ಆಚರಣೆಯಲ್ಲಿ ತರಬೇಕು" ಎಂದರು.

ಭಾರತದಲ್ಲಿ ಗಾಂಧಿತತ್ವ ಮತ್ತು ಹಿಂದು ರಾಷ್ಟ್ರತತ್ವಗಳೆರಡೂ ಜೊತೆಜೊತೆಗೇ ಬದುಕುವುದು ಸಾಧ್ಯವೇನೆಂದು ಆಚಾರ್ಯ ವಿನೋಬ ಭಾವೆಯವರು ಕೇಳಿದರು. ಒಂದು ಸಂಘವನ್ನು ಕಟ್ಟಿಕೊಳ್ಳುವುದರ ಬದಲು ಕೆಲಸಗಾರರು ಜಾತ್ರೆಯೊಂದರಲ್ಲಿ ಸೇರುವಂತೆ ವರ್ಷಕ್ಕೊಮ್ಮೆ ಸೇರಿ ತಂತಮ್ಮ ಅನುಭವಗಳನ್ನು ಪರಸ್ಪರರಲ್ಲಿ ಹೇಳಿಕೊಂಡು ಮುಂದಿನ ವರ್ಷದ ಕಾರ್ಯಕ್ರಮವನ್ನು ರಚಿಸಿ ಕಾರ್ಯಪ್ರವೃತ್ತರಾಗುವುದು ಶ್ರೇಯಸ್ಕರ ಎಂಬ ಸಲಹೆಯನ್ನು ಭಾವೆಯವರು ಸಭೆಯ ಮುಂದಿಟ್ಟರು. ಬಾಪುವಿನ ಸಮಾಜ ಸೇವೆಯ ಸಂದೇಶವನ್ನು ನಾಡಿನಲ್ಲಿ ಹರಡಲು ಅದೊಂದು ಉತ್ತಮ ಮಾರ್ಗವೆಂದು ಅವರು ಅಭಿಪ್ರಾಯಪಟ್ಟರು.

ಸೇವಾಗ್ರಾಮದ ಅಹಿಂಸಾತ್ಮಕ ವಾತಾವರಣದಲ್ಲಿ ಪೋಲೀಸರು ಗಸ್ತಿ ತಿರುಗುತ್ತಿರುವುದನ್ನು ಕಂಡು ಅದು ಆಶ್ಚರ್ಯಕರವೂ ಅವಮಾನಕರವೂ ಆಗಿದೆಯೆಂದು ಪಂ. ನೆಹರುಗಳು ಉದ್ಗರಿಸಿದರು. "ನಾನು ನಿಮಗೆ ದಾರಿದೋರಲಾರೆ. ಆದರೆ ನಾವು ಭಾರತದನ್ನೂ ಅದರ ಸ್ವಾತಂತ್ರ್ಯವನ್ನೂ ರಕ್ಷಿಸಿಕೊಳ್ಳಲೇಬೇಕು; ನಾವು ಗಾಂಧಿಯವರ ಉದಾತ್ತ ತತ್ವಗಳನ್ನು ಅನುಸರಿಸಬೇಕು; ಅಲ್ಲದಿದ್ದರೆ ನಾವು ನಮ್ಮನಮ್ಮಲ್ಲೇ ಯುದ್ಧ ಮಾಡಿ ವಿನಾಶಹೊಂದುವೆವು. ನವಖಾಲಿಯಲ್ಲಿ ಪ್ರಯೋಗಿಸಲಾದ ಗಾಂಧಿ ಪದ್ಧತಿಯಿಂದ ಮಾತ್ರ ನಾವು ಜಾತೀಯತೆಯ ವಿಷವನ್ನು ನಿರ್ಮೂಲಗೊಳಿಸಬಲ್ಲೆವು. ಇದನ್ನು ಬರಿದೆ ಪೋಲೀಸು ಇಲ್ಲವೆ ಮಿಲಿಟರಿ ಬಲದ ಪ್ರಯೋಗದಿಂದ ಸಾಧಿಸಲಾಗದು. ಈ ಹೊಣೆಯನ್ನು ಸಾರ್ವಜನಿಕರು ಹೊತ್ತು ಬಾಪುವಿನ ನೀತಿಯನ್ನು ಬೋಧಿಸುತ್ತಲೂ ಆಚರಿಸುತ್ತಲೂ ಸಾಧಿಸಬೇಕು."— ಎಂದು ಅವರು ಹೇಳಿದರು.

ಪರಿಷತ್ತಿನಲ್ಲಿ ಮಾತಾಡುತ್ತ, ಮೌಲಾನಾ ಆಜಾದರು, ಜಾತೀಯತೆಯ ರೋಗದ ಪರಿಹಾರಕ್ಕೆ ಗಾಂಧಿಯವರು ಸಮರ್ಥಿಸಿದಂಥ ಮೌಲಿಕ ಚಿಕಿತ್ಸೆಯನ್ನೇ ಮಾಡಬೇಕು ಎಂದು ಅಭಿಪ್ರಾಯಪಟ್ಟರು.

ಹಿಂದುಸ್ತಾನದ ಹಿರಿಯೋಲಗ

(೮ ನೆಯ ಪುಟದಿಂದ)

ಬಂದರ ರಚಿಸುವದಾಗಿ ಹೇಳಿದರು ಬೇಡಿಕೆ ಸ್ವೀಕೃತವಾಯಿತು.

ತಾ ೧೫ ರಿಂದ ಹಿಂದುಸ್ತಾನ ಸರಕಾರದ ಗೃಹ ಸಂಸ್ಥಾನ ಮತ್ತು ಸುದ್ದಿ ಶಾಖೆಗಳ ಬೇಡಿಕೆಗಳನ್ನು ಕುರಿತು ಚರ್ಚೆ ನಡೆಯಿತು. ಗೃಹ ಮಂತ್ರಿಗಳಾದ ಸರದಾರ ವಲ್ಲಭಭಾಯಿಪಟೇಲರು ಅಸ್ವಾಸ್ಥ್ಯದ ಮೂಲಕ ಸಭೆಗೆ ಬಂದಿರಲಿಲ್ಲ. ಅವರ ಪರವಾಗಿ ಶ್ರೀ. ಎನ್. ವಿ. ಗಾಡಗೀಳರು ಚರ್ಚೆಗೆ ಉತ್ತರ ಕೊಟ್ಟರು.

ಶ್ರೀ ಕಾಜಮುಲ ಹುಸೇನರು ನಿಜಾಮರ ಬಗ್ಗೆ ಮಾತನಾಡುತ್ತ ಅವರೊಡನೆ ನಡೆಸಿದ ಮಾತುಕತೆಗಳನ್ನು ಕೂಡಲೇ ನಿಲ್ಲಿಸಿ ಅವರ ಮೇಲೆ ಈಗಲೇ ದಾಳಿಮಾಡ ಬೇಕೆಂದರು (ನಗೆ) ಮೊಗಲಕಾಲದಲ್ಲಿ ನಿಜಾಮರು ಕೇವಲ ಸುಬೇದಾರರಿದ್ದರು ಈಸ್ಟ ಇಂಡಿಯಾ ಕಂಪನಿಯೊಡನೆ ಮಾಡಿಕೊಂಡ ಒಡಂಬಡಿಕೆಯಲ್ಲಿಯೂ ಅವರಿಗೆ ಸುಬೇದಾರರೆಂದೇ ಕರೆಯಲಾಗಿದೆ. ಅದ್ದರಿಂದ ಈ ಸುಬೇದಾರರೊಡನೆ ಇನ್ನೇಕೆ ಮಾತುಕತೆ? ಅವನ್ನು ನಿಲ್ಲಿಸಿ ಪ್ರಜೆಗಳ ಬಯಕೆಯಂತೆ ವರ್ತಿಸಬೇಕೆಂದು ಸೂಚಿಸಿದರು.

ಶ್ರೀ. ಎ ಸ್. ವಿ ಮುನಸ್ವಾಮಿ ಪಿಳ್ಳೆ ಯವರು, ಸಂಸ್ಥಾನಗಳ ವಿಷಯದಲ್ಲಿ ಸರದಾರ ವಲ್ಲಭಭಾಯಿಯವರು ತೋರಿದ ಮುತ್ಸದ್ದಿತನವನ್ನು ಕೊಂಡಾಡಿದರು. ಲೀನೀಕರಣದ ಕಾಲಕ್ಕೆ ಸಂಸ್ಥಾನಗಳನ್ನು ಸಿಕ್ಕಹಾಗೆ ಯಾವಯಾವೂ ಜಿಲ್ಲೆಗಳಿಗೆ ಸೇರಿಸಲಾಗಿದೆ. ಈ ಪ್ರಮಾದವನ್ನು ಸರಕಾರವು ಸರಿಪಡಿಸಬೇಕೆಂದು ಹೇಳಿದರು.

ಶ್ರೀ ಗಾಡಗೀಳರು ಎಲ್ಲರಿಗೂ ಉತ್ತರಕೊಡುತ್ತ, ಹೈದರಾಬಾದದ ಅನುಚಿತ ವರ್ತನೆಯಿಂದ ದಕ್ಷಿಣಭಾರತದ ಶಾಂತಿಗೆ ಭಂಗಬಂದಿದೆಯೆಂದೂ ಹೈದರಾಬಾದ ಹಿಂದುಸ್ತಾನಗಳಲ್ಲಿ ಶಾಶ್ವತ ಒಪ್ಪಂದವಾಗಬೇಕೆಂದೂ ಹೈದರಾಬಾದದಲ್ಲಿ ಹೊಣೆಗಾರ ಸರಕಾರ ಸ್ಥಾಪಿಸುವ ವರೆವಿಗೂ ಎಲ್ಲ ತೊಡಕು ಬಿಡುವವೆಂದೂ ಹೇಳಿದರು. ಪಾರಚಿನಾರ ಶಿಬಿರದಲ್ಲಿದ್ದ ಮುಸಲ್ಮಾನೇತರ ನಿರಾಶ್ರಿತರಮೇಲಾದ ಹಲ್ಲೆಯಲ್ಲಿ ೧೩೪ ಜನರು ಮಡಿದರೆಂದೂ ೧೫೦ ಜನರು ಗಾಯಗೊಂಡರೆಂದೂ ೨೦೦—೩೦೦ ಸ್ತ್ರೀಯರು ಅಪಹೃತರಾದರೆಂದೂ ಈ ಶಿಬಿರದಲ್ಲಿ ಇವರು ೪ ತಿಂಗಳು ಇದ್ದರೆಂದೂ ಪ್ರತಿಕ್ಷೇಪ್ರ ರದ ಕಾಲಕ್ಕೆ ತಿಳಿದು ಬಂದಿತು. ಈ ಹಲ್ಲೆಯು ಜಾನೇವರಿಯ ಕೊನೆಯವಾರದಲ್ಲಿ ನಡೆಯಿತು.

ತಾ. ೧೬ ರಂದು ಅಹಾರ ಮಂತ್ರಿಗಳಾದ ಶ್ರೀ ಜಯರಾಮದಾಸ ದೌಲತರಾಮರು ಅಹಾರದ ಬಗ್ಗೆ ನಡೆದ ಚರ್ಚೆಗೆ ಉತ್ತರ ಕೊಡುತ್ತ ದೇಶದ ಅಹಾರ ಪರಿಸ್ಥಿತಿಯು ಸುಧಾರಿಸಿದೆಯೆಂದೂ ಕಳೆದ ತಿಂಗಳುಗಳಲ್ಲಿ ಸರಕಾರವು ಮಾಡಿದ ಹೊಸ ಪ್ರಯತ್ನಗಳ ಫಲವಾಗಿ ವಿದೇಶದ ಧಾನ್ಯಗಳ ವಸೂಲಿ ತೃಪ್ತಿಕರವಾಗಿವೆಯೆಂದೂ ಹೇಳಿದರು. ಮದ್ರಾಸದಲ್ಲಿ ಅಹಾರದ ಕೊರತೆಯಿದ್ದರೂ ಅವರು ಹೌಹಾರಬೇಕಿಲ್ಲ. ಅವರಿಗೆ ಎಲ್ಲ ಅನುಕೂಲ ಮಾಡಿಕೊಡಲಾಗುವದು. ಮದ್ರಾಸಕ್ಕೆ ಈ ೩ ತಿಂಗಳಲ್ಲಿ ೯೨ ಸಾವಿರ ಟನ್ನು ಅಹಾರ ಧಾನ್ಯ ಪೂರೈಸಿದೆ. ಅಲ್ಲದೆ ಇನ್ನೂ ೯೯ ಸಾವಿರ ಟನ್ನು ಪೂರೈಸಲಾಗುವದು. ಕೇಂದ್ರಕ್ಕೆ ಅಹಾರ ಧಾನ್ಯಗಳು ಬಂದಂತೆ ಅವನ್ನು ಮದ್ರಾಸಕ್ಕೆ ಕಳಿಸಲಾಗುವದು. ಅವರು ಮತ್ತೆ ಹೇಳಿದುದು ಹೇಗೆ. ಪ್ರಾಂತಗಳಲ್ಲಿ ಹೆಚ್ಚು ಅಹಾರ ಬೆಳೆವ ಯೋಜನೆಗಳು ನಿರರ್ಥಕವಾಗಿವೆ ಗೊಬ್ಬರ, ಒಕ್ಕಲುತನದ ಉಪಕರಣ ಇವುಗಳ ಕೊರತೆ ಹಾಗೂ ಕೆಲ ಪ್ರಾಂತಿಕ ಅಡಚಣೆ ಇವೇ ಇದಕ್ಕೆ ಕಾರಣ. ಬಾವಿಗಾಗಿ ೩ ಕೋಟಿವಾರ್ಷಿಕ ಧನಸಹಾಯ ಕೊಟ್ಟರೆ ಪ್ರಾಂತದಲ್ಲಿಲ್ಲ ಬಾವಿಗಳನ್ನು ಕಡಿಯಿಸಿ ಬರಗಾಲ ಬಾರದಂತೆ ಮಾಡುವದಾಗಿ ಮದ್ರಾಸದ ಮುಖ್ಯಮಂತ್ರಿಗಳು ತಿಳಿಸುತ್ತಾರೆ. ಈ ಬಗ್ಗೆ ನಾನು ವಿಚಾರಿಸುತ್ತಿದ್ದೇನೆ.

ಅಹಾರೋತ್ಪಾದನಕ್ಕೆ ನಾವು ಇನ್ನೂ ಹೆಚ್ಚು ಬೆಳೆ ಮಾಡುವದಗತ್ಯ. ಒಕ್ಕಲುತನಕ್ಕಾಗಿ ಅಮೇರಿಕೆಯು ಪ್ರತಿಯೊಬ್ಬನಿಗೆ ೫ ರೂ. ಕಾನಡಾ ೨೦ ರೂ. ಮತ್ತು ಇಂಗ್ಲಂಡು ೦ ರೂ. ಹೀಗೆ ವೆಚ್ಚ ಮಾಡುತ್ತಿದ್ದರೆ ಭಾರತವು ಒಬ್ಬನಿಗೆ ೦ ಆಣೆಯಂತೆ ವೆಚ್ಚ ಮಾಡುತ್ತಿದೆ. ಭಾರತದ ಅವಿಭಾಜ್ಯಸ್ಥಿತಿಯಲ್ಲಿ ಅಹಾರದ ಪ್ರಮಾಣವು ೧೦೦ ಕ್ಕೆ ಕೇವಲ ೭೫ ರಷ್ಟಿದೆ. ಹೀಗೆ ಅಹಾರ ಮಂತ್ರಿಗಳು ಉತ್ತರಕೊಟ್ಟಮೇಲೆ ಬೇಡಿಕೆಯು ಪಾಸಾಯಿತು.

ಅಮೇಲೆ ಹಣಕಾಸಿನ ಖಾತೆಯಬೇಡಿಕೆಯು ಚರ್ಚೆಗೆ ಬಂದಿತು.

ಶ್ರೀ. ಕೆ. ಸಂತಾನಂರು ಕಡಮೆ ವೆಚ್ಚದಿಂದ ಹೆಚ್ಚು ಕೆಲಸವಾಗಬೇಕು. ಮೊದಲು ಒಬ್ಬ ಅಧಿಕಾರಿ ಮಾಡುತ್ತಿದ್ದ ಕೆಲಸವನ್ನು ಈಗ ೩ ರಿಂದ ೪ ಅಧಿಕಾರಿಗಳು ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಶ್ರೀ. ಅನಂತಶಯನಂ ಅಯ್ಯಂಗಾರರು ಸ್ಟರ್ಲಿಂಗದ ಒಡಂಬಡಿಕೆಯಿಂದ ಭಾರತಕ್ಕೆ ಅನ್ಯಾಯವಾಗಿದೆ. ಹಣಕಾಸಿನ ಮಂತ್ರಿಗಳಿಗೆ ಹಿಂದೀಯರಿಗಿಂತ ಬಿಳಿತೊಗಲಿನವರ ಮೇಲೆಯೇ ಮಮತೆ ಇರುವಂತೆ ಕಾಣುತ್ತದೆ. ಹೊಸದಲಿನ ಒಡಂಬಡಿಕೆಯ ಪ್ರಕಾರ ೩೫೦ ಲಕ್ಷ ಪೌಂಡು ಭಾರತಕ್ಕೆ ದೊರೆತರೆ ಈಗ ಕೇವಲ ೭೫೦ ಲಕ್ಷ ಪೌಂಡು ದೊರೆತಿದೆ. ನಮಗೆ ನಮ್ಮ ಪಾಲಿನ ೧೧೬ ಕೋಟಿ ಪೌಂಡುಗಳು ದೊರೆಯಬೇಕು ಎಂದರು. ಇನ್ನೂ ಕೆಲವರು ಟೀಕಿಸಿ ಮಾತನಾಡಿದರು.

ಹಣಕಾಸಿನ ಮಂತ್ರಿಗಳಾದ ಶ್ರೀ ಷಣ್ಮುಖಂ ಚೆಟ್ಟಿಯಾರರು ಉತ್ತರ ಕೊಡುತ್ತ ಹೀಗೆ ಹೇಳಿದರು.

ಸ್ಟರ್ಲಿಂಗ ಒಡಂಬಡಿಕೆಯನ್ನು ಟೀಕಿಸಲಾಯಿತು. ಇದು ಸರಿಯಲ್ಲ. ನಾವು ವಸ್ತುಸ್ಥಿತಿಯನ್ನು ಎದುರಿಸಬೇಕವೆ? ಈ ಒಡಂಬಡಿಕೆ ಇಲ್ಲವೆ ಬ್ರಿಟನದ ವಿರುದ್ಧ ಯುದ್ಧ ಇವೆರಡೇ ಮಾರ್ಗಗಳು ಉಳಿದಿದ್ದವು. ಇವನ್ನು ಗಮನಿಸಬೇಕು. ಈ ಒಡಂಬಡಿಕೆ ನನಗೂ ಸಮಾಧಾನ ತಂದಿಲ್ಲ. ಅದರೇನು? ಈಗ ಸಾಲಗಾರ ಸಾವಿಗರ ಸಂಬಂಧ ಬದಲಾಗಿದೆ. ಸಾವಿಗನೇ ಸಾಲಗಾರನ ಮನೆಗೆ ಎಡತಾಕಬೇಕಾಗಿದೆ.

ತಾ. ೧೭ ರಂದು ಅರ್ಥಸಚಿವರು ೧೯೪೮ ಎಪ್ರಿಲ ೧ ರಿಂದ ಪ್ರಾರಂಭವಾಗಲಿರುವ ಹೊಸ ವರ್ಷದ ಬಗ್ಗೆ ಹಿಂದುಸ್ತಾನ ಕೇಂದ್ರ ಸರಕಾರದ ಹಣಕಾಸಿನ ಸೂಚನೆಗಳ ಮಸೂದೆಯನ್ನು ಪರಿಶೀಲನಾ ಸಮಿತಿಗೆ ಒಪ್ಪಿಸಬೇಕೆಂಬ ಸೂಚನೆಯನ್ನು ಮಂಡಿಸಿದರು. ಆ ಮೇಲೆ ಈ ಬಗ್ಗೆ ಚರ್ಚೆ ನಡೆಯಿತು.

ಮತ್ತೆ ಅನೇಕರು ಅನೇಕ ವಿಧವಾಗಿ ಟೀಕಿಸಿದರು. ಶ್ರೀ. ರಾಮನಾರಾಯಣಸಿಂಗರು, ಆಡಳಿತದ ಅಧಿಕಾರಿ ವರ್ಗವು ಮಿತಮೀರಿದ ಮದ್ಯಾನೆಯಂತಿದೆಯೆಂದರು ನಮ್ಮ ಮಂತ್ರಿಗಳಿಗೆ ಇದನ್ನು ನಿಗ್ರಹಿಸಿ ವರ್ತಿಸು ಬೀರಿ ಕೆಲಸ ತಕ್ಕೊಳ್ಳುವದು ಅಶಕ್ಯವಾಗಿದೆ ಎಂದರು.

ಹಣಕಾಸಿನ ಸೂಚನೆಗಳ ಮೇಲಿನ ಚರ್ಚೆಯ ಬಗ್ಗೆ ಎರಡು ದಿನ ಮೀಸಲಿಡಲಾಗಿದ್ದು ಇಂದು ಚರ್ಚೆಯಲ್ಲಿ ಸಮಯವಾಗಿದ್ದರಿಂದ ವರುಷಿನಕ್ಕೆ ಸಭೆ ಮುಂದರಿಯಿತು.

ಗಾಂಧಿಯವರ ವ್ಯಕ್ತಿತ್ವ, ಸೇವೆ, ಆದರ್ಶಗಳನ್ನು ಪವಿತ್ರವೆಂದು ಬಾಯಿಂದ ಹೊಗಳಿ, ಮೊನ್ನೆ ಅವರು ಇಹಯಾತ್ರೆಯನ್ನು ಮುಗಿಸಿದಾಗ ಹಳಿಯಿಂದ ಕೊಡಗಟ್ಟಲೆಯ ವರೆಗೆ ಕಂಬನಿಸುರಿಸಿ ಪುನಃ ಎಲ್ಲವನ್ನೂ ಮರೆತು, ಸಂಸಾರದ ನಿತ್ಯ ಭವಣೆಯಲ್ಲಿ ಮಗ್ನರಾಗಿ ಉದಾತ್ತತೆಯ ಭಾವದಿಂದ ಉರುಳಿ ಉದಾಸೀನ ಮತ್ತು ಕೇವಲಸ್ವಾರ್ಥಗಳ ಕೆಳಮಟ್ಟದಲ್ಲಿ ತೊಳಲುವ ಪ್ರವೃತ್ತಿಯನ್ನು ತಡೆಗಟ್ಟಲು ಮೇಲೆ ಹೇಳಿದಂತಹ ಸಮಾಜರಚಿತವಾದುದು ಯೋಗ್ಯವೇ ಸರಿ. ಪ್ರಾಮಾಣಿಕರಾದ ಗಾಂಧಿವಾದಿಗಳು ಈ ಸಂದರ್ಭವನ್ನು ಸದುಪಯೋಗ ಪಡಿಸಿಕೊಳ್ಳದಿರಲಾರರೆಂದು ನಂಬಬಹುದೆ?

ಹೈದರಾಬಾದವನ್ನು ಮಣಿಸಲು ಮೌಂಟಬ್ಯಾಟನ್ನರ ನಿರ್ಧಾರ

ಹೈದರಾಬಾದದ ಇತ್ತಿಹಾದ ರಜಾಕಾರರ ಪುಂಡಾಟಿಕೆಯ ನಿಮಿತ್ತ ಲಂಡನ್ನಿನ ರಾಜಕೀಯ ವರ್ಗಗಳಲ್ಲಿ ಆಶ್ಚರ್ಯಕಾರಕ ತರ್ಕವಿತರ್ಕಗಳು ಕೇಳಬರಹತ್ತಿವೆ. ಲಾರ್ಡ ಮೌಂಟಬ್ಯಾಟನರು ಇತ್ತಿಹಾದದ ಅಕ್ರಮ ಚಟುವಟಿಕೆಗಳನ್ನು ನಿಲ್ಲಿಸಲು ನಿಜಾಮರ ಸೋರ್ಷಕೆಯನ್ನು ಕೊನೆಯದಾಗಿ ಬೇಗ ಮುಗಿಸಲು ನಿರ್ಧರಿಸಿದ್ದಾರೆಂದು ಹೇಳಲಾಗುತ್ತದೆ.

ನಿಜಾಮರ ರಾಜಧಾನಿಯಲ್ಲಿ ಅಘಟಿತ ಘಟನೆಗಳಾಗುವ ಸಂಭವವಿದ್ದದರಿಂದ ಕೂಡಲೇ ಹೊರಟುಬರಬೇಕೆಂದು ಇದೀಗ ಹಿಂದುಸ್ತಾನದಿಂದ ಮರಳಿದ ನಿಜಾಮರ ಘಟನಾ ಸಲಹೆಗಾರರಾದ ಸರ್ ವಾಲ್ಟರ ಮಾಂಕ್ಟನ್ನರಿಗೆ ಲಾಯಕ ಅಲಿಯವರಿಂದ ಅವಸರದ ತಂತಿ ಬಂದಿದೆಯೆಂದು ನನಗೆ ವಿಶ್ವಸನೀಯವಾಗಿ ತಿಳಿದುಬಂದಿದೆ.

ಅವಶ್ಯವೆನಿಸಿದರೆ ಜೂನ ನಂತರ ಹಿಂದುಸ್ತಾನದಲ್ಲಿ ಉಳಿದು ಹೈದರಾಬಾದ ಪ್ರಶ್ನೆ ಬಗೆಹರಿಸುವದಾಗಿ ಲಾರ್ಡ ಮೌಂಟಬ್ಯಾಟನರು ಸರದಾರ ಪಟೇಲರಿಗೆ ಅಭಿವಚನ ಕೊಟ್ಟಿರುವರೆಂದು ಹೇಳಲಾಗುತ್ತದೆ.

ಈಗಿನ ಯಥಾಸ್ಥಿತಿ ಒಪ್ಪಂದದ ಅರ್ಥ ಆಕ್ಷೇಪಬರದವರೆಗಿದ್ದರೂ ಇತ್ತಿಹಾದವು ಅದರ ದುರುಪಯೋಗ ಮಾಡಿಕೊಳ್ಳುತ್ತಿರುವದರಿಂದ ಲಾರ್ಡ ಮೌಂಟಬ್ಯಾಟನರು ಹೈದರಾಬಾದದ ಪ್ರಶ್ನೆಯನ್ನು ಬೇಗನೆ ಮುಗಿಸುವ ನಿರ್ಧಾರ ಮಾಡುವದಕ್ಕೆ ಕಾರಣವಾಗಿದೆ.

ನಾಲ್ಕು ವರುಷಗಳಲ್ಲಿ ಸಂಪೂರ್ಣ ಮದ್ಯಪಾನ ಪ್ರತಿಬಂಧ

ಒತ್ತಾಯದ ಪ್ರಾಥಮಿಕ ಶಿಕ್ಷಣ ಬೇಗ ಜಾರಿಯಲ್ಲಿ ಬರುವದು

ಮುಂಬಯಿ ಶಾಸನ ಸಭೆಯ ಕಾರ್ಯಕಲಾಪಗಳು

ಶಿಕ್ಷಣ ಸಂಬಂಧದ ಬೇಡಿಕೆಗಳ ಚರ್ಚೆ ಮುಂಬಯಿ ಶಾಸನ ಸಭೆಯಲ್ಲಿ ನಡೆದಾಗ ಮುಖ್ಯ ಮಂತ್ರಿಗಳಾದ ಶ್ರೀ ಖೇರರು ಮಾಧ್ಯಮಿಕ ಶಾಲೆಗಳಲ್ಲಿ ಪ್ರಾದೇಶಿಕ ಭಾಷೆಗಳಿಂದ ಶಿಕ್ಷಣ ಕೊಡಲ್ಪಡುವದೆಂದೂ ಬೋಧ ಭಾಷೆಯಾದ ಇಂಗ್ಲಿಷಿನ ಸ್ಥಳದಲ್ಲಿ ಬೇಗನೆ ದೇಶೀ ಭಾಷೆಯನ್ನು ಬಳಕೆಗೆ ತರಲಾಗುವದೆಂದೂ ಶಿಕ್ಷಣ ಕ್ಷೇತ್ರದಲ್ಲಿ ಅವಶ್ಯಕ ಜನರ ಕೊರತೆಯಿರುವದರಿಂದ ಸ್ವಲ್ಪ ತಾಳ್ಮೆ ವಹಿಸಬೇಕೆಂದೂ ೧೬ನೇ ತಾರೀಖಿನ ದಿನ ಅಂದರು. ಭಾಯಾಜಿಯವರು ಮಂಡಿಸಿದ ಕಡಿತದ ಸೂಚನೆಗೆ ಉತ್ತರ ಕೊಡುತ್ತ ಶಿಕ್ಷಣ ಮಂತ್ರಿಗಳು ಮಾಧ್ಯಮಿಕ ಶಾಲೆಗಳಲ್ಲಿಯ ಕುಂದುಕೊರತೆಗಳನ್ನು ಹೋಗಲಾಡಿಸಲು ಸರಕಾರ ಸರ್ವವಿಧ ಪ್ರಯತ್ನ ಮಾಡುತ್ತಿದೆ. ಶಿಕ್ಷಕರು, ವ್ಯವಸ್ಥಾಪಕರು ಮತ್ತು ವಿದ್ಯಾರ್ಥಿಗಳಲ್ಲಿ ಮನೆಮಾಡಿಕೊಂಡಿದ್ದ ದುಷ್ಟ ರೂಢಿ ಚಟುವಟಿಕೆಗಳನ್ನು ನಿರ್ಮೂಲಮಾಡಲು ಸರಕಾರ ಬದ್ಧಪ್ರತಿಜ್ಞವಾಗಿದೆಯೆಂದೂ ಸ್ವಾತಂತ್ರ್ಯವೆಂದರೆ ಮನಬಂದಂತೆ ವರ್ತಿಸುವದಲ್ಲವೆಂದೂ ಹೇಳಿದರು. ವಿದ್ಯಾರ್ಥಿವೇತನಗಳಿಗಾಗಿ ೨ ಲಕ್ಷ ರೂಪಾಯಿಗಳನ್ನು ಮಾತ್ರ ವ್ಯಯ ಮಾಡುತ್ತಿದ್ದು ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಹೆಚ್ಚಿಸುವ ತಮ್ಮ ಮನೀಷೆಯನ್ನು ವ್ಯಕ್ತಪಡಿಸಿದರು. ಪ್ರಾಂತದಲ್ಲಿ ತಾಂತ್ರಿಕ ಮತ್ತು ಒಕ್ಕಲತನ ಶಾಲೆಗಳು ಹೆಚ್ಚುವವೆಂದು ಅವರು ಆಶ್ವಾಸಿಸಿದರು.

ಒತ್ತಾಯದ ಪ್ರಾಥಮಿಕ ಶಿಕ್ಷಣ

ಶಿಕ್ಷಣ ಶಾಖೆಯಲ್ಲಿ ಸರಕಾರೀ ಮೇಲ್ವಿಚಾರಣೆ ಮತ್ತು ನಿಯಂತ್ರಣದ ಸಂಬಂಧದಲ್ಲಿ ಶ್ರೀ ಭಾಯೀಜಿಯವರು ತಂದಿದ್ದ ಕಡಿತದ ಸೂಚನೆಯ ಮೇಲೆ ಮಾತಾಡುತ್ತ ಶಿಕ್ಷಣ ಮಂತ್ರಿಗಳು ಪ್ರಾಂತದಲ್ಲೆಲ್ಲ ಬೇಗನೆ ಒತ್ತಾಯದ ಶಿಕ್ಷಣವನ್ನು ಜಾರಿಯಲ್ಲಿ ತರಲಾಗುವದೆಂದೂ ಮುಂದಿನ ಆರ್ಥಿಕ ವರುಷದಲ್ಲಿ ೫೦೦ ಶಾಲೆಗಳನ್ನು ತೆರೆಯಲು ಸರಕಾರ ನಿರ್ಧರಿಸಿದೆಯೆಂದೂ ಹೇಳಿದರು. ಇನಸ್ಪೆಕ್ಟರ ಮತ್ತು ಡೆಪ್ಯುಟಿ ಇನಸ್ಪೆಕ್ಟರರ ಸಂಖ್ಯೆಯನ್ನು ಬೇಗ ಹೆಚ್ಚಿಸಿ ಮೇಲ್ವಿಚಾರಣೆಯನ್ನು ಬಿಗಿ ಪಡಿಸಲಾಗುವುದೆಂದೂ ಆಶ್ವಾಸಿಸಿದರು.

ವೈದ್ಯಕೀಯ ಧನಸಹಾಯ

ವೈದ್ಯಕೀಯ ಧನ ಸಹಾಯದ ಸಂಬಂಧವಾಗಿ ಭಾಯೀಜಿಯವರು ಮಂಡಿಸಿದ ಕಡಿತದ ಸೂಚನೆಗೆ ಆರೋಗ್ಯ ಮಂತ್ರಿ ಡಾ. ಗಿಲ್ಡರರು ಉತ್ತರಕೊಡುತ್ತ ಪೋಲೀಸರು ಮುಂಬಯಿ ಆಸ್ಪತ್ರೆಗಳ ಡಾಕ್ಟರರ ಕೆಲಸದಲ್ಲಿ ಎಂದೂ ಹಸ್ತಕ್ಷೇಪಮಾಡಿಲ್ಲವೆಂದೂ ರೋಗಿಯ ಜೀವ ಉಳಿಸುವದೇ ಡಾಕ್ಟರರ ಪ್ರಥಮ ಕರ್ತವ್ಯವಾಗಿದೆಯೆಂದೂ ಹೇಳಿದರು. ಮುನಿಸಿಪಾಲಿಟಿಗಳಿಗೆ ವೈದ್ಯಕೀಯ ವ್ಯವಸ್ಥೆಯನ್ನು ಒಪ್ಪಿಸಿದ್ದರಿಂದ ವೈದ್ಯಕೀಯ ಜನರು ಸಾಕಷ್ಟಿಲ್ಲದಂಬುದು ಅವರಿಗೆ ಸಂಬಂಧಿಸಿದ ವಿಷಯವೆಂದೂ ಹಳ್ಳಿಗಳ ಕೆಲಸಕ್ಕೆ ಸ್ತ್ರೀಯರು ಹೆಚ್ಚಾಗಿ ಮುಂದೆ ಬರುವದಿಲ್ಲೆಂದೂ ಹೇಳಿದರು.

ಶಾಳಕೇರಿ ದುರ್ಘಟನೆ

೧೬ನೇ ತಾರೀಖಿನ ದಿನ ಪ್ರಶ್ನೋತ್ತರ ಸಮಯದಲ್ಲಿ ಶ್ರೀ ಅಂದಾನಪ್ಪ ದೊಡ್ಡಮೇಟಿಯವರು ಕೇಳಿದ ಪ್ರಶ್ನೆಗಳಿಗೆ ಉತ್ತರಕೊಡುತ್ತ ಉಪಮಂತ್ರಿಗಳಾದ ಶ್ರೀ ಕುಂಟೆ ಇವರು ಈ ರೀತಿ ಹೇಳಿದರು. ಶಾಳಕೇರಿಯ ದುರ್ಘಟನೆಯ ಸುದ್ದಿ ತಿಳಿದ ಕೂಡಲೆ ಧಾರವಾಡ ಜಿಲ್ಲೆಯ ಪೋಲೀಸ ಅಧಿಕಾರಿಗಳು ಅಲ್ಲಿಗೆ ಹೋಗಿ ಸ್ಥಿತಿಗಳನ್ನು ನಿರೀಕ್ಷಿಸುತ್ತಿರುವರು ಮುಂಬಯಿ ಸರಕಾರವು ಗಡಿಗುಂಟ ಅನೇಕ ಕಡೆಗೆ ಹೆಚ್ಚು ಪೋಲೀಸರನ್ನು ಇಟ್ಟಿದ್ದಲ್ಲದೆ ಸಂಶಯಿತರನ್ನು ಪರೀಕ್ಷಿಸಲು ಅಲ್ಲಲ್ಲಿ ತಪಾಸಣೆ ಕೇಂದ್ರಗಳನ್ನು ತೆರೆದಿದೆಯೆಂದೂ ಗೃಹರಕ್ಷಕ ದಳಗಳನ್ನು ರಚಿಸಲಾಗಿದೆಯೆಂದೂ ಯೋಗ್ಯರಾದವರಿಗೆ ಆತ್ಮರಕ್ಷಣೆಗಾಗಿ ಶಸ್ತ್ರಾಸ್ತ್ರಗಳನ್ನು ಕೊಡಲಾಗುತ್ತಿದೆಯೆಂದೂ ಉಪಮಂತ್ರಿಗಳು ತಿಳಿಸಿದರು. ಶಾಳಕೇರಿಹಟ್ಟಿಗೆ ಹೋಳುವ ಇನ್ನೊಮ್ಮೆ ಕಠಿಣ ಪ್ರಸಂಗವನ್ನೆದುರಿಸಲು ಅಲ್ಲಿ ಒಂದಾದರೂ ಸಶಸ್ತ್ರ ಪೋಲೀಸ ದಳವನ್ನಿಡಲಾಗಿದೆ ಎಂದು ಹೇಳಿದರು.

ಸದಸ್ಯರ ಹಕ್ಕಿನ ಪ್ರಶ್ನೆ

ಶಾಸನ ಸಭೆಯ ಸದಸ್ಯರಾದ ಶ್ರೀ ಶಿ. ಲ. ಕರಂದೀಕರರು ಸುರಕ್ಷಿತತೆ ಕಾಯಿದೆ "ಅನ್ವಯ ತಮ್ಮನ್ನು ಬಂಧಿಸಿದ್ದು ತಮಗೆ ಸ್ವತಂತ್ರನೆಂದಾಗಲಿ ಶಾಸನಬದ್ಧನೆಂದಾಗಲಿ ಶಾಸನ ಸಭೆಯಲ್ಲಿ ಉಪಸ್ಥಿತನಾಗಲಿಕ್ಕೆ" ಅವಕಾಶ ಕಲ್ಪಿಸಿಕೊಡಬೇಕೆಂದು ಅಧ್ಯಕ್ಷರಿಗೆ ಪತ್ರಬರೆದು ಬಿನ್ನವಿಸಿಕೊಂಡಿದ್ದರು. ಅಧ್ಯಕ್ಷರು ಆ ಪತ್ರವನ್ನೋದಿ ಕಾಮನ್ಸ ಸಭೆಯಲ್ಲಿಯ ಇಂಥದೇ ಒಂದು ಸಂದರ್ಭವನ್ನು ವಿವರಿಸಿ ಶ್ರೀ ಕರಂದೀಕರರಿಗೆ ಈ ಸಂಬಂಧದಲ್ಲಿ ಸಹಾಯ ಮಾಡಲು ತಮಗೆ ಬರುವದಿಲ್ಲೆಂದು ಹೇಳಿದರು.

ಯುನಾನಿ ಸಂಸ್ಥೆಗಳಿಗೆ ಧನ ಸಹಾಯ ಕೊಡಬೇಕೆಂದು ಮಂಡಿಸಲ್ಪಟ್ಟ ಕಡಿತದ ಸೂಚನೆ ಬಗ್ಗೆ ಡಾ. ಗಿಲ್ಡರರು ಹೇಳುತ್ತ ಈ ಸಂಬಂಧದಲ್ಲಿ ಸರಕಾರ ಒಂದು ಸಮಿತಿಯನ್ನು ನೇಮಿಸಿದ್ದು ಅದರ ವರದಿ ಬೇಗ ಪ್ರಸಿದ್ಧವಾಗಲಿದೆಯೆಂದೂ ತಿಳಿಸಿದರು. ಅಲೋಪಥಿ ಔಷಧಗಳು ಹೆಚ್ಚು ತುಟ್ಟಿ ಮತ್ತು ಪರಿಣಾಮಕಾರಿಯಲ್ಲವೆಂಬ ಭಾಯೀಜಿಯವರ ಅಭಿಪ್ರಾಯವನ್ನು ಆರೋಗ್ಯ ಮಂತ್ರಿಗಳು ಅಲ್ಲಗಳೆದರು. ವರ್ಷಕ್ಕೆ ಒಂದರಂತೆ ೩೦ ಆಸ್ಪತ್ರೆಗಳನ್ನು ಕಟ್ಟಲು ಸರಕಾರ ನಿರ್ಧರಿಸಿದ್ದು ಸ್ಥಳೀಯರು ಮುಂದೆ ಬಂದ ಸ್ಥಳಗಳಲ್ಲಿ ಈ ಆಸ್ಪತ್ರೆಗಳನ್ನು ಕಟ್ಟಲಾಗುವದೆಂದು ಹೇಳಿದರು. ಕ್ಷಯರೋಗದ ಉಪಚಾರದ ಆಸ್ಪತ್ರೆಗಳನ್ನು ಹೆಚ್ಚಿಸುವ ಯೋಜನೆಯ ವಿಚಾರ ಸರಕಾರ ನಡೆಸಿದೆಯೆಂದೂ ಹೇಳಿದರು. ಕುಷ್ಟರೋಗಿಗಳ ಉಪಚಾರದ ವ್ಯವಸ್ಥೆಯನ್ನೂ ಸರಕಾರ ಬೇಗ ಮಾಡಲಿದೆಯೆಂದು ಹೇಳಲಾಯಿತು. ಮದ್ರಾಸದಲ್ಲಿಯಂತೆ ಮುಂಬಯಿಯಲ್ಲಿಯೂ ಸಾರ್ವಜನಿಕ ಆರೋಗ್ಯ ಕಾಯಿದೆಯನ್ನು ಜಾರಿಯಲ್ಲಿ ತರುವ ವಿಚಾರವಿದೆಯೆಂದೂ ಆ ಕಾಯಿದೆಯಲ್ಲಿ ಮುನಿಸಿಪಾಲಿಟಿಯವರು ಉತ್ಪನ್ನದಲ್ಲಿ ೧೦೦ಕ್ಕೆ ೩೦ ಲೋಕಲ್ ಬೋರ್ಡಿನವರು ಜಿಲ್ಲಾ ಬೋರ್ಡಿನವರು ೧೦೦ಕ್ಕೆ ೧೫ರಷ್ಟು ವೈದ್ಯಕೀಯ ಪರಿಹಾರ ಕೊಡಲೆಬೇಕೆಂದಿರುವದೆಂದೂ ಆರೋಗ್ಯ ಮಂತ್ರಿಗಳು ಹೇಳಿದರು. ಸರಕಾರೀ ಡಾಕ್ಟರರು ಖಾಸಗಿ ಧಂದೆ ಮಾಡಬಹುದೇ ಎಂಬ ಪ್ರಶ್ನೆಯನ್ನು ಶಾಸನ ಸಭೆಯು ನಿರ್ಣಯಿಸಬೇಕೆಂದೂ ಇನ್ನು ೨೫ ವರುಷ ಆನರರಿ ಡಾಕ್ಟರರ ಅವಶ್ಯಕತೆಯಿದೆಯೆಂದೂ ಮಂತ್ರಿಗಳು ಅಭಿಪ್ರಾಯಪಟ್ಟರು.

ಮದ್ಯಪಾನ ಪ್ರತಿಬಂಧ

ಮದ್ಯಪಾನ ಪ್ರತಿಬಂಧಕ ಮಂಡಳದ ಧಾಟಿಯ ಬಗ್ಗೆ ಬಂದ ಕಡಿತದ ಸೂಚನೆಯು ಫೆಬ್ರುವರಿ ೧೧ಕ್ಕೆ ಚರ್ಚಿಸಲ್ಪಟ್ಟಿತು. ಮಂತ್ರಿಗಳು ಈ ಸಂಬಂಧದಲ್ಲಿ ಇಂತು ಹೇಳಿದರು. ಹದಿನಾಲ್ಕು ತಿಂಗಳುಗಳ ಹಿಂದೆ ಈ ಮಂಡಳ ರಚಿತವಾಗಿದ್ದು ಅದರ ಕಾರ್ಯ ಇನ್ನೂ ನಡೆಯುತ್ತಿದೆ. ಮಧ್ಯಪ್ರಾಂತ, ಮದ್ರಾಸ ಪ್ರತಿಬಂಧಕ ಶಾಸನಗಳನ್ನು ಪರಿಶೀಲಿಸುವ ಬಗ್ಗೆ ಉಪಸಮಿತಿಯೊಂದನ್ನು ನೇಮಿಸಿದೆ. ಮದ್ಯಪಾನವನ್ನು ಸಂಪೂರ್ಣವಾಗಿ ಪ್ರತಿಬಂಧಿಸುವ ಕಾರ್ಯದಲ್ಲಿ ಈಗಿಲ್ಲ ಈ ಬಗ್ಗೆ ಪ್ರತ್ಯೇಕ ಅಧಿಕಾರಿಗಳನ್ನು ನೇಮಿಸಿದ್ದು ಪ್ರಾಂತಕ್ಕೆ ಸಂಬಂಧಿಸಿದ ಸಂಸ್ಥಾನಗಳು ಸಹ ಈ ಕೆಲಸದಲ್ಲಿ ಸಹಕರಿಸಿದರೆ ಉತ್ತಮ ಪರಿಣಾಮಗಳು ದೊರಕಬಹುದು; ನೀರಾಪಾನ ಆರೋಗ್ಯ ದೃಷ್ಟಿಯಿಂದ ಹಿತಕರವಾಗಿದೆ ಚಹಾ ಕಾಫಿಗಳ ಬದಲು ಅದನ್ನು ಉಪಯೋಗಿಸಬಹುದು ಆದರೆ ನೀರಾದ ದುರುಪಯೋಗವಾದುದು ಕಂಡುಬಂದರೆ ಆ ಕೇಂದ್ರವನ್ನು ಮುಚ್ಚಬಿಡಲಾಗುವದು ಇಂದಿನವರೆಗೆ ಅಂಥ ದುರುಪಯೋಗದ ಉದಾಹರಣೆಯಿಲ್ಲ. ಆ ಕೇಂದ್ರಗಳ ಬಗ್ಗೆ ಇನ್ನೂ ಬೇಡಿಕೆಯು ಇದೆ.

ನಾಸಿಕ ಗಡಂಗದ ಬಗ್ಗೆ ವಿವರಿಸುತ್ತ ಮಂತ್ರಿಗಳು ಹೀಗೆ ಹೇಳಿದರು. ಯುದ್ಧ ಕಾಲದಲ್ಲಿ ವಿದೇಶಗಳಿಂದ ಮದ್ಯಬಾರದ್ದರಿಂದ ನಾಸಿಕ ಗಡಂಗವನ್ನು ಪ್ರೋತ್ಸಾಹಿಸಬೇಕಾಯಿತು. ನಮ್ಮ ಪ್ರಾಂತದಲ್ಲಿ ನಾಲ್ಕು ವರುಷಗಳನಂತರ ಮದ್ಯಪ್ರತಿಬಂಧವು ಸಂಪೂರ್ಣ ಜಾರಿಯಲ್ಲಿ ಬರುವದರಿಂದ ಅಲ್ಲಿಯವರೆಗೆ ಬೇಡಿಕೆಯವರೆಗೆ ಅದನ್ನು ಪೂರಯಿಸುವದು ಸರಕಾರದ ಕರ್ತವ್ಯವಾಗಿದೆ. ಇತ್ತೀಚೆ ವಿದೇಶ ಮದ್ಯದ ಆಯಾತದ ಮೇಲೆ ನಿರ್ಬಂಧ ಹೇರಿದ್ದರಿಂದ ನಾಸಿಕದ ಗಡಂಗದ ಅವಶ್ಯಕತೆಯಿದೆ ಈ ಮದ್ಯವನ್ನು ಪೂರ್ವ ಆಫ್ರಿಕೆಗೆ ಸಹ ರಫ್ತು ಮಾಡಲಾಗುತ್ತಿದೆ. ಈ ಎಲ್ಲ ಲಾಭಗಳನ್ನು ಒಮ್ಮೆಲೆ ಬಿಡುವದು ಕಠಿಣವಾಗುತ್ತದೆ. ಈ ಗಡಂಗದಲ್ಲಿ ಶುದ್ಧ ಸ್ಪಿರಿಟನ್ನು ಸಹ ತಯಾರಿಸುತ್ತಿದ್ದು ಆಲ್ಕೋಹಾಲನ್ನು ತಯಾರಿಸುವ ಪ್ರಯತ್ನವು ನಡೆದಿದೆ. ಮದ್ಯಪಾನವು ಸಂಪೂರ್ಣ ಪ್ರತಿಬಂಧಿಸಲ್ಪಟ್ಟನಂತರ ಒಂದು ಕ್ಷಣಸಹ ಇಲ್ಲಿ ಮದ್ಯವನ್ನು ತಯಾರಿಸಲಾಗುವದಿಲ್ಲ ಎಂದು ಮಂತ್ರಿಗಳು ಆಶ್ವಾಸಿಸಿದರು.

ಮಾಧ್ಯಮಿಕ ಶಿಕ್ಷಕರು

೧೮ ನೆಯ ತಾರೀಖಿನ ದಿವಸ ಶಿಕ್ಷಣ ಶಾಖೆಯ ಬೇಡಿಕೆಗಳ ಮೇಲಿನ ಕಡಿತದ ಸೂಚನೆಗಳಿಗೆ ಉತ್ತರ ಕೊಡುತ್ತ ಮಾನ್ಯ ಶಿಕ್ಷಣ ಮಂತ್ರಿಗಳು, ಘಾಟೆ ಪರೂಳೇಕರ ಸಮಿತಿಯ ಸೂಚನೆಗಳು ಸರಕಾರಕ್ಕೆ ಸಾಮಾನ್ಯವಾಗಿ ಮಾನ್ಯವಿರುವದಾಗಿಯೂ ಸಮಿತಿಯ ವರದಿಯ ಮೇಲೆ ಸರಕಾರವು ತನ್ನ ನಿರ್ಣಯವನ್ನು ಸಾಧ್ಯವಿದ್ದಷ್ಟು ಬೇಗ ಸಾರುವದಾಗಿಯೂ ಹೇಳಿದರು. ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಸಾಹಸಕ್ಕೆ ಆಸ್ಪದ ಕೊಡಬಾರದೆಂದು ಶ್ರೀ ಡಾಂಗೆಯವರು ಸೂಚಿಸಿದ್ದಕ್ಕೆ ಯುವಕರ ಮನಸ್ಸನ್ನು ಹತ್ತಿಕ್ಕಿ ಸರ್ವಾಧಿಕಾರತ್ವದಿಂದ ಅವರ ವ್ಯಕ್ತಿತ್ವವನ್ನು ನಾಶಗೊಳಿಸುವದು ಸರಕಾರದ ಧೋರಣೆಯಲ್ಲೆಂದು ಮಂತ್ರಿಗಳು ಹೇಳಿದರು. ಪ್ರಾಥಮಿಕ ಶಿಕ್ಷಣವನ್ನು ಬಿಟ್ಟುಕೊಟ್ಟು ಮಾಧ್ಯಮಿಕ ಶಿಕ್ಷಣದ ಪ್ರಸಾರ ಕೈಕೊಳ್ಳುವದು ಶಕ್ಯವಿಲ್ಲೆಂದು ಮಂತ್ರಿಗಳು ಹೇಳಿದರು. ಮಾಧ್ಯಮಿಕ ಶಾಲೆಗಳ ಮಂಡಲದಲ್ಲಿ ಶಿಕ್ಷಕರಿಗೆ ಪ್ರಾತಿನಿಧ್ಯ ಕೊಡಲು ಸರಕಾರ ಯೋಚಿಸಿದೆಯೆಂದು ಮಾಧ್ಯಮಿಕ ಶಾಲೆಗಳ ಕಟ್ಟಡದ ಬಗ್ಗೆ ಕೊಡಲಾಗುವ ಧನಸಹಾಯದಲ್ಲಿ ಒಂದು ಪೈ ಕೂಡ ಅಪವ್ಯಯವಾಗದಂತೆ ನೋಡಿಕೊಳ್ಳಲಾಗುವದೆಂದೂ ಅವರು ಹೇಳಿದರು. ಕಾಂದೀವಲಿ ಶಾಲೆಯನ್ನು ಶಾರೀರಿಕ ಶಿಕ್ಷಣದ ಶಿಕ್ಷವಿದ್ಯಾಲಯವನ್ನಾಗಿ ಮಾರ್ಪಡಿಸುವ ವಿಚಾರವಿದೆಯೆಂದೂ ಆಟದ ಬೈಲು ಸಂಕಷ್ಟಿಲ್ಲದಿದ್ದು ಹುಡುಕಾದ್ದರೂ ಅವುಗಳನ್ನು ಒದಗಿಸುವದು ಕಠಿಣವಿದ್ದದ್ದರಿಂದ ಮೊದಲು ಹುಡುಗರಲ್ಲಿ ಆಟದ ಚಟುವಟಿಕೆ ಹುಟ್ಟಿಸಬೇಕೆಂದು ಕೇಳಿಕೊಂಡರು. ಮಂತ್ರಿಗಳು ಕೊಟ್ಟ ಹೇಳಿಕೆಯಿಂದ ಸಮಾಧಾನಹೊಂದಿ ಸದಸ್ಯರು ತಮ್ಮ ಕಡಿತದ ಸೂಚನೆಗಳನ್ನು ಹಿಂತೆಗೆದುಕೊಂಡರು. ೭ ಕೋಟಿ ೯೩ ಲಕ್ಷ ೭೦ ಸಾವಿರ ರೂಪಾಯಿಗಳ ಶೈಕ್ಷಣಿಕ ಬೇಡಿಕೆಗೆ ಮನ್ನಣೆ ದೊರೆಯಿತು.

ಕೊಲ್ಹಾಪುರ ಮಂತ್ರಿ ಮಂಡಳದ ಪದಚ್ಯುತಿ

ಮಹಾತ್ಮರ ಕೊಲೆಯ ನಂತರ ಕೊಲ್ಹಾಪುರದಲ್ಲಿ ಸಂಭವಿಸಿದ ಗಲಭೆಗಳ ಸಂಬಂಧದಲ್ಲಿ ಹಿಂದುಸ್ತಾನ ಸರಕಾರವು ಸಂಸ್ಥಾನ ಶಾಖೆಯ ಕಾರ್ಯದರ್ಶಿಗಳಾದ ಶ್ರೀ. ವ್ಹಿ. ಪಿ. ಮೆನನ್ನರನ್ನು ಅಲ್ಲಿಗೆ ಕಳಿಸಿತ್ತು. ಮಹಾರಾಜರೊಡನೆ ವಿಚಾರ ವಿನಿಮಯ ಮಾಡಿ ಕೇಂದ್ರ ಸರಕಾರದ ಸಲಹೆಯ ಮೇರೆಗೆ ಕೊಲ್ಹಾಪುರದ ಸ್ವೀಯ ಮಂತ್ರಿ ಮಂಡಲವನ್ನು ವಿಸರ್ಜಿಸಬೇಕೆಂದು ಗೊತ್ತಾಗಿದೆ. ಈ ಗಲಭೆಗಳ ವಿಷಯದಲ್ಲಿ ಮಂತ್ರಿ ಮಂಡಲದ ಮೇಲೆ ಹೊರಿಸಲಾದ ಆರೋಪಗಳನ್ನು ಪಕ್ಷಾತೀತ ನ್ಯಾಯ ಮಂಡಲದ ಮುಖಾಂತರ ವಿಚಾರಿಸಲಾಗುವದು. ಸದ್ಯಕ್ಕೆ ಒಬ್ಬ ಅಧಿಕಾರಿಗೆ ಕೊಲ್ಹಾಪುರದ ಆಡಳಿತದ ಸೂತ್ರ ಒಪ್ಪಿಸಲಾಗುವದು.

ಸಾಮೂಹಿಕ ಒಕ್ಕಲತನ ಪ್ರಯೋಗ ಮದ್ರಾಸ ಸರಕಾರದ ಯೋಜನೆ

ಹೈದರಾಬಾದ—ಮದ್ರಾಸ ಗಡಿರಕ್ಷಣೆಯ ವ್ಯವಸ್ಥೆ

ಮದ್ರಾಸ ಶಾಸನಸಭೆಯ ಕಾರ್ಯಕಲಾಪ

ಮದ್ರಾಸದ ಗೃಹ ಮಂತ್ರಿಗಳಾದ ಡಾ. ಸುಬ್ಬರಾಯನ್‌ರು ಮದ್ರಾಸ ಶಾಸನ ಸಭೆಯಲ್ಲಿ ಪೋಲೀಸ ಶಾಖೆಗಾಗಿ ಮುಂಗಡ ಪತ್ರಿಕೆಯಲ್ಲಿ ಬೇಕಾದ ಬೇಡಿಕೆಯ ಚರ್ಚೆಗೆ ಉತ್ತರ ಕೊಡುತ್ತ ಹೈದರಾಬಾದ ಮುಸಲ್ಮಾನರು ಕಾಶೀಂಯವರಂಥವರು ಇಲ್ಲವೆ ಹಿಂದುಸ್ಥಾನ ಸರಕಾರದ ವಿರುದ್ಧ ದ್ವೇಷವನ್ನು ಹಬ್ಬಿಸುವ ಭಾಷಣಗಳನ್ನು ಮಾಡಬಾರದೆಂದು ಬಿನ್ನವಿಸಿಕೊಂಡರು. ಇತ್ತೆಹಾದದ ಅಧ್ಯಕ್ಷರಾದ ಕಾಸೀಮ ರಜವಿಯವರ ಇತ್ತೀಚಿನ ಭಾಷಣಗಳಿಂದ ನಿಜಾಮ ಸರಕಾರಕ್ಕೆ ಸಹ ತೊಂದರೆಯುಂಟಾಗುವದೆಂದೂ ಅವರು ಹೇಳಿದರು. ಬೇಡಿಕೆಗೆ ಸಭೆ ಮನ್ನಣೆ ಕೊಟ್ಟಿತು.

ಸರ್ ಆರ್ಚಿಬಾಲ್ಡ ನೈ

ಮದ್ರಾಸ ಗವರ್ನರರಾದ ಸರ್ ಆರ್ಚಿಬಾಲ್ಡ ನೈ ಇವರ ಅಧಿಕಾರಾವಧಿ ಈ ತಿಂಗಳ ಕೊನೆಗೆ ಮುಗಿಯುತ್ತಿದ್ದರೂ ಅವರು ಅಗಸ್ಟ ಕೊನೆಯ ವರೆಗೆ ಗವರ್ನರರಾಗಿ ಉಳಿಯಬೇಕೆಂದು ಬಿನ್ನವಿಸಿಕೊಳ್ಳಲಾಗಿದೆಯೆಂದೂ ಅದಕ್ಕೆ ಅವರು ಒಪ್ಪಿಕೊಳ್ಳುವರೆಂದೂ ವಿಶ್ವಸನೀಯವಾಗಿ ತಿಳಿಯುತ್ತದೆ.

ಮುಸ್ಲಿಂ ಲೀಗಿಗೆ ಶರಣು

ಮದ್ರಾಸದಲ್ಲಿ ಕೂಡಿದ್ದ ಹಿಂದುಸ್ತಾನ ಮುಸ್ಲಿಂ ಲೀಗ ಕೌನ್ಸಿಲ್ಲಿನ ನಿರ್ಣಯವನ್ನು ಪ್ರತಿಭಟಿಸಲು ಮದ್ರಾಸ ಶಾಸನ ಸಭೆಯ ೯ ಸದಸ್ಯರು ಲೀಗಿಗೆ ಶರಣು ಹೊಡೆದಿರುವರು. ಅವರು ಆ ಬಗ್ಗೆ ಹೊರಡಿಸಿದ ಪ್ರಕಟನೆಯಲ್ಲಿ ದೇಶದ ವಿಭಜನೆಯಿಂದ ಮತ್ತು ಮಹಾತ್ಮರ ಬಲಿದಾನದಿಂದ ದೇಶದಲ್ಲಿ ಉದ್ಭವಿಸಿದ ಪರಿಸ್ಥಿತಿಯನ್ನು ನಿರೀಕ್ಷಿಸಿ ಹಿಂದುಸ್ತಾನದ ಮುಸಲ್ಮಾನರು ಲೀಗ ಸಂಸ್ಥೆ ಉಳಿಯಬೇಕೆಂದು ಬಯಸುವದಿಲ್ಲ. ಘಟನಾ ಸಮಿತಿಯಲ್ಲಿ ಮತ್ತು ಹಲವು ಪ್ರಾಂತಗಳಲ್ಲಿ ಲೀಗ ಪಕ್ಷವನ್ನು ವಿಸರ್ಜಿಸಿದ್ದರಿಂದ ಮತ್ತು ಇತ್ತೀಚಿನ ಲೀಗ ಸಭೆಯ ಮುಸಲ್ಮಾನರು ತೋರಿದ ಅನಾಸ್ಥೆಯಿಂದ ಇದು ಸಾಧ್ಯವಾಗಿದೆ. ಸಭೆಯನ್ನು ಸಾಗಿಸಿದ ರೀತಿಯಿಂದ ಸಭೆಯ ವ್ಯವಸ್ಥಾಪಕರಿಗೆ ಪರಿಸ್ಥಿತಿಯ ಗಾಂಭೀರ್ಯದ ಅರಿವು ಆಗಿಲ್ಲೆಂದು ತೋರುತ್ತದೆ. ದೇಶದಲ್ಲಿ ಮುಸ್ಲಿಂ ಲೀಗ ಉಳಿಯಬೇಕೊ ಹೇಗೆಂಬ ಬಗ್ಗೆ ಸ್ಪಷ್ಟ ನಿರ್ಧಾರ ಮಾಡುವ ಅವಶ್ಯಕತೆಯಿದ್ದಾಗ ಈ ಪಕ್ಷವು ಯಾವದೊಂದು ನಿರ್ಧಾರಕ್ಕೆ ಬಂದಿಲ್ಲ. ಶಾಸನ ಸಭೆಯ ಲೀಗ ಪಕ್ಷವು ಅವಶ್ಯವೆನಿಸಿದರೆ ಬೇರೆ ಹೆಸರಿನಲ್ಲಿ ಕೆಲಸ ಮಾಡಬೇಕೆಂದು ಹೇಳಿದ್ದು ಅಸಂಬಂದ್ಧವಾದ ಮಾತಾಗಿದೆ ಎಂದು ಮುಂತಾಗಿ ಈ ರಾಜೀನಾಮೆ ಪತ್ರದಲ್ಲಿ ಅಭಿಪ್ರಾಯ ಪಡಲಾಗಿದೆ.

ಕನ್ನಡ ವಾರ್ತಾ ಪ್ರಸಾರ

ಮದ್ರಾಸ ಬಾನುಲಿಯಿಂದ ಕನ್ನಡದಲ್ಲಿ ವಾರ್ತಾ ಪ್ರಸಾರ ಮಾಡಬೇಕೆಂದು ಶಾಸನ ಸಭೆಯಲ್ಲಿ ಶ್ರೀ ಬೂದೀಹಾಳ ಅನಂತಾಚಾರ್ಯರು ಕೇಳಿದ ಪ್ರಶ್ನೆಗೆ ಮಂತ್ರಿವರ್ಯ ಶ್ರೀ ಸೀತಾರಾಮ ರೆಡ್ಡಿಯವರು ಕೊಟ್ಟ ಉತ್ತರದಿಂದ ಕನ್ನಡಿಗರಿಗೆ ಅಸಮಾಧಾನವಾಗಿದೆ. ಕನ್ನಡ ಜನತೆ ದಿಲ್ಲಿ ಕೇಂದ್ರದಿಂದಲೆ ಸುದ್ದಿಗಳನ್ನು ಕೇಳಬಹುದು ಎಂದು ಮಂತ್ರಿಗಳು ಅಭಿಪ್ರಾಯ ವ್ಯಕ್ತ ಮಾಡಿದ್ದು ಆಶ್ಚರ್ಯಕರವಾಗಿದೆ. ದಿಲ್ಲಿ ೧೫ ಮಿನಿಟದಿಂದ ಕನ್ನಡ ವಾರ್ತಾ ಪ್ರಸಾರ [illegible] ಚೆನ್ನಾಗಿ ಕೇಳಿಸುವದಿಲ್ಲ [illegible] ವೇಳದಲ್ಲಿ ಪ್ರಸಾರ ಮಾಡುವ [illegible] ಆಕಾಶವಾಣಿ ಅಧಿಕಾರಿಗ[illegible] ತಿಳಿದು ಬಂತು. [illegible] ದಿಂದಲೂ ದಿನವೂ [illegible] ಯೆಂದೂ ಮಂಗಳೂರಿಗಳಿಗಾಗಿ ಕಲಿಕೋಟೆಯಲ್ಲಿ ಬಾನುಲಿ ಕೇಂದ್ರವನ್ನು ತೆರೆಯುವಂತೆ ಕನ್ನಡಿಗರಿಗಾಗಿಯೂ ಅಂಥದೊಂದು ಕೇಂದ್ರ ತೆರೆ[illegible] ಉಚಿತವಾಗುವದೆಂದೂ ಮದ್ರಾಸ ಜನತೆಯ [illegible] ಪ್ರಾಯವಿದೆ.

ಸಾಮೂಹಿಕ ಒಕ್ಕಲತನ

ಮದ್ರಾಸ ಸರಕಾರವು ಪ್ರಾಂತದಲ್ಲಿ ಒಂದು ಕೇಂದ್ರವನ್ನು ಆಯ್ದುಕೊಂಡು ಸಾಮೂಹಿಕ ಒಕ್ಕಲತನ ಪ್ರಯೋಗವನ್ನು ನಡೆಸುವದು. ಪ್ರಯೋಗವು ಯಶಸ್ವಿಯಾದರೆ ಮತ್ತೆ ಕೆಲ ಪ್ರದೇಶಗಳಿಗೆ ಅದನ್ನು ವಿಸ್ತರಿಸಲಾಗುವದು. ಸರಕಾರದ ಅಧೀನದಲ್ಲಿ ೧೦ ಲಕ್ಷ ಎಕರೆ ಪಡ ಭೂಮಿ ಇದ್ದು ಅದನ್ನು ಸಾರ್ವಜನಿಕರಿಗೆ ಹಂಚ ಲಾಗುವದು. ಸುಮಾರು ೫೦-೬೦ ಸಾವಿರ ಎಕರೆ ಭೂಮಿಯನ್ನು ರಾಜಕೀಯ ಚಳವಳಿಗಳಲ್ಲಿ ಹಾನಿಗೊಂಡವರಿಗೆ ಕೊಡಲಾಗುವದು. ಉಳಿದ ಭೂಮಿಯನ್ನು ಹರಿಜನರಿಗೆ ಹಿಂದುಳಿದ ವರ್ಗದವರಿಗೆ ಕೊಡಲಾಗುವದು. ಇದರಿಂದ ಹೆಚ್ಚು ಆಹಾರ ಧಾನ್ಯ ಬೆಳೆಯಲು ಅನುಕೂಲವುಂಟಾಗುವದು. ಈ ಎಲ್ಲ ಜನರನ್ನು ಒಂದುಗೂಡಿಸಿ ಅವರ ಸಹಕಾರಿ ಸಂಘಗಳನ್ನೇರ್ಪಡಿಸಿ ಭೂಮಿಗಳನ್ನು ಅವುಗಳಿಗೆ ಒಪ್ಪಿಸಲಾಗುವದು. ಇದರಿಂದ ಸಾಮೂಹಿಕ ಒಕ್ಕಲತನಕ್ಕೆ ಉತ್ತೇಜನ ಕೊಟ್ಟಂತಾಗುವದು. ಎಂದು ಮದ್ರಾಸ ಸರಕಾರದ ಕಂದಾಯ ಮಂತ್ರಿಗಳಾದ ಶ್ರೀ ಕಲಾ ವೆಂಕಟರಾಯರು ಶಾಸನ ಸಭೆಯಲ್ಲಿ ೧೫ ನೇ ತಾರೀಕಿನ ದಿನ ಹೇಳಿದರು.

ಉಪವಾಸದಿಂದ ಯಾರೂ ಸತ್ತಿಲ್ಲ

ರಾಮನಗರ ಜಿಲ್ಹೆಯಲ್ಲಿ ಉಪವಾಸದಿಂದ ಯಾರೂ ಸತ್ತಿಲ್ಲವೆಂದೂ ಈ ಸುದ್ದಿಯು ನಿರಾಧಾರವೆಂದೂ ಆಹಾರ ಮಂತ್ರಿಗಳಾದ ಡಾ. ರಾಜನ್‌ರು ೧೬ ನೇ ತಾರೀಕು ಶಾಸನ ಸಭೆಯಲ್ಲಿ ಹೇಳಿದರು. ಭತ್ತದ ಬೆಳೆ ಬಾರದ್ದರಿಂದ ರಾಮನಗರ ಜಿಲ್ಹೆಯಲ್ಲಿ ಕೆಲ ಭಾಗಗಳಲ್ಲಿ ಅಕ್ಕಿ ದೊರೆಯುವದು ಕಠಿನವಾಗಿತ್ತು. ಸರಕಾರವು ೬೨ ಅಂಗಡಿಗಳನ್ನು ತೆರೆದು ಪ್ರೌಢನಿಗೆ ಸುರಕ್ಷೆ ೬ ಔಂಸದಂತೆ ಆಹಾರ ಧಾನ್ಯ ಹಂಚಿದೆ. ಸದ್ಯಕ್ಕೆ ಅಲ್ಲಿಯ ಆಹಾರ ಪರಿಸ್ಥಿತಿ ಸಮಾಧಾನಕರವಿದ್ದು ಕಳೆದ ತಿಂಗಳು ಸರಕಾರ ೫ ಸಾವಿರ ಟನ್ನ ಅಕ್ಕಿಯನ್ನು ಕಳಿಸಿದೆ. ಬೆಳೆ ಬಾರದ ಪ್ರದೇಶಗಳಿಗೆಲ್ಲ ಲಕ್ಷ ಕೊಟ್ಟು ಆಹಾರ ಒದಗಿಸಲಾಗುತ್ತದೆ. ಜಿಲ್ಹೆಯ ಕೆಲ ಹಳ್ಳಿಗರು ಹುರುಳಿಯನ್ನು ತಿಂದದ್ದು ನಿಜ ಆದರೆ ಅಕ್ಕಿಯಕಿಂತ ಹುರುಳಿಯು ಪೌಷ್ಟಿಕ ಆಹಾರವಾಗಿದೆ ಎಂದು ಮುಂತಾಗಿ ಮಂತ್ರಿಗಳು ಹೇಳಿದರು.

ಮದ್ರಾಸ ಹೈದರಾಬಾದ ಗಡಿ ಪ್ರದೇಶಗಳ ಮೇಲೆ ಕಣ್ಣಿಡುವದಕ್ಕಾಗಿ ಮದ್ರಾಸ ಸರಕಾರದವರು ಒಬ್ಬ ಪೋಲೀಸ ಸುಪರಿಂಟೆಂಡೆಂಟನನ್ನು ನೇಮಿಸಿದ್ದಾರೆ. ಈ ಅಧಿಕಾರಿಯು ಮದ್ರಾಸ ಸರಕಾರಕ್ಕೆ ಆಗಾಗ ವರದಿಯನ್ನು ಒಪ್ಪಿಸುತ್ತಿರುವನು.

ಆರೋಗ್ಯ ಶಾಖೆಯ ಬೇಡಿಕೆ

ಸಾರ್ವಜನಿಕ ಆರೋಗ್ಯದ ಬಗ್ಗೆ ಮಂತ್ರಿವರ್ಯ ಶೆಟ್ಟರು ೮೮೩೬೦೦೦ ರೂಪಾಯಿಗಳ ಬೇಡಿಕೆಯನ್ನು ಮಂಡಿಸಿದರು. ಆರೋಗ್ಯ ಶಾಖೆಯಲ್ಲಿ ಸಿಬ್ಬಂದಿ ಬಹಳ ಕಡಿಮೆಯಿರುವದೆಂದು ಹೇಳಿ ಅದನ್ನು ಬೇಗ ಹೆಚ್ಚಿಸಬೇಕಾಗಿದೆಯೆಂದು ತಿಳಿಸಿದರು. ಗ್ರಾಮಾಂತರಗಳಲ್ಲಿ ಜನರಿಗೆ ಕುಡಿಯುವ ನೀರನ್ನು ಒದಗಿಸಿಕೊಡಲು ೧ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗುವದೆಂದು ಹೇಳಿದರು. ಪ್ರತಿಯೊಂದು ಹಳ್ಳಿಯಲ್ಲಿಯೂ ಒಳ್ಳೆಯ ಕುಡಿಯುವ ನೀರಿನ ವ್ಯವಸ್ಥೆಯಾಗಬೇಕೆಂದು ಹಿಂದೊಮ್ಮೆ ಶ್ರೀ ರಾಜಗೋಪಾಲಾಚಾರ್ಯರು ಹೇಳಿದ್ದನ್ನು ಅವರು ಸಭೆಯ ಗಮನಕ್ಕೆ ತಂದರು. ಬೇಡಿಕೆಯ ಮೇಲೆ ವಿಶೇಷ ಚರ್ಚೆ ನಡೆಯದೆ ಸಭೆ ಅದಕ್ಕೆ ಒಪ್ಪಿಗೆ ಕೊಟ್ಟಿತು.

ಪಾಕಿಸ್ತಾನದ ಬಗ್ಗೆ ಕೆಲ ಅಧಿಕೃತ ಅಂಕಿಗಳು

ಪಾಕಿಸ್ತಾನದ ವಾರ್ಷಿಕ ಅವಶ್ಯಕತೆ ಮತ್ತು ಉತ್ಪಾದನೆ ಎಷ್ಟೆಷ್ಟೆಂಬುದು ಕೆಳಗಿನ ಅಧಿಕೃತ ಅಂಕಿ ಸಂಖ್ಯೆಗಳಿಂದ ತೋರುತ್ತದೆ.

ಸರಕು	ಉತ್ಪಾದನೆ	ಅವಶ್ಯಕತೆ
ಗಿರಣಿಬಟ್ಟೆ	೫೦೦೦೦ ಗಂಟುಗಳು (೫೧೦೦ ಪೌಂಡಿನ ಗಂಟುಗಳು)	೭೫೦ ಲಕ್ಷ ಗಂಟುಗಳು
ಕಲ್ಲಿದ್ದಲಿ	೨,೮೮,೦೦೦ ಟನ್ನ	೩೫೦೦,೦೦೦ ಟನ್ನ
ಸಿಮೆಂಟು	೫,೮೫,೦೦೦ ಟನ್ನ	೩,[illegible] ಟನ್ನ
ಸಕ್ಕರೆ	೩೫೦೦೦ ಟನ್ನ	೨೪೫೦೦೦ ಟನ್ನ
ಚಿಮಣಿಎಣ್ಣೆ	೫೦೦೦ ಗ್ಯಾಲನ್ನ	೨೪,೦೦,೦೦೦ ಗ್ಯಾಲನ್ನ
ಪೆಟ್ರೋಲು	೧೫೫೦೦,೦೦೦ ಗ್ಯಾಲನ್ನ	೧೬೦೦,೦೦೦ ಗ್ಯಾಲನ್ನ

ಕನ್ನಡಿಗರ ಸ್ನೇಹ ಹಸ್ತವನ್ನು ಸ್ವೀಕರಿಸಿರಿ

ನೆರೆ ಪ್ರಾಂತದವರಿಗೆ ಉರವಣೆಗೊಂಡ ಜಗದ್ಗುರುಗಳ ಹಿತವಾದ

"ಕನ್ನಡಿಗರು ಮಹಾತ್ಮಾಜೀಯವರ ಇಚ್ಛೆಗನುಸಾರವಾಗಿ ಗಡಿ ನಿರ್ಣಯ ವಿಷಯದಲ್ಲಿ ನಡೆದುಕೊಳ್ಳಲು ಉತ್ಸುಕರಿರುವರು. ಅವರಿಗೆ ವೃಥಾ ಹೋರಾಡುವದಾಗಲಿ, ಅನ್ಯಾಯ ಪ್ರಸ್ತಾಪನೆಯಾಗಲಿ ಬೇಕಾಗಿಲ್ಲ. ಪರಸ್ಪರವಾಗಿ ಕಲೆತು ಗಡಿ ನಿರ್ಣಯ ಮಾಡಿಕೊಳ್ಳುವುದೇ ನಮ್ಮ ನಾಗರಿಕತೆಗೆ ಶೋಭೆಯ ಮಾತಾದೀತು" ಎಂದು ಉರವಣೆಗೊಂಡ ಶ್ರೀ ಜಗದ್ಗುರುಗಳು ಮೊಳಕಾಲ್ಮುರಿನಲ್ಲಿ ೧೫ ನೇ ತಾರೀಖು ಅವರ ಗೌರವಾರ್ಥವಾಗಿ ಏರ್ಪಟ್ಟಿದ್ದ ಪ್ರಚಂಡ ಸಾರ್ವಜನಿಕ ಸಭೆಯೊಂದರಲ್ಲಿ ಆಪ್ಪಣೆ ಕೊಡಿಸಿದರು.

'ಆಂಧ್ರರು ಕನ್ನಡಿಗರ ಈ ಸ್ನೇಹ ಹಸ್ತವನ್ನು ನಿರಾಕರಿಸದಿರಲಿ. ಆಂಧ್ರರೊಡನೆ ನಮ್ಮ ದ್ವೇಷವೇ ಇಲ್ಲ. ಆಂಧ್ರರು ಭಾರತದ ಒಂದಂಗವೆಂದು ನಾವು ಪೂರ್ಣವಾಗಿ ಅರಿತಿದ್ದೇವೆ. ಕನ್ನಡಿಗರು ತಮ್ಮ ನೆರೆ ಪ್ರಾಂತೀಯರಾರನ್ನೂ ದ್ವೇಷಿಸಲಾರರು. ಹಗೆತನದ ಆಧಾರದ ಮೇಲೆ ನಾವು ಯಾವ ಮಹತ್ತರ ಕಾರ್ಯವನ್ನೂ ಪರಸ್ಪರರು ಸಾಧಿಸಲಾರೆವು. ರಾಯದುರ್ಗ, ಆಲೂರ ಹಾಗು ಆದವಾನಿ ತಾಲೂಕುಗಳ ಕನ್ನಡಿಗರು ತಮ್ಮನ್ನು ಕರ್ನಾಟಕ ಕೈಬಿಡುವುದೆಂದು ಅಂಜಿದ್ದಾರೆ. ಆದರೆ ಪ್ರಜೆಗಳ ಅಭಿಪ್ರಾಯವೇ ಕಡೆಯ ನಿರ್ಣಯವಾದ್ದರಿಂದಎಂದೂ ಬಲಾತ್ಕಾರವಾಗಿ ಆ ಕನ್ನಡಿಗರನ್ನು ಆಂಧ್ರ ರಾಷ್ಟ್ರಕ್ಕೆ ಸೇರಿಸುವುದು ಸಾಧ್ಯವೇ ಆಗಲಾರದು. ಕಾರಣ ಪೂರ್ವ ತಾಲೂಕುಗಳಲ್ಲೆಲ್ಲಾ ಕನ್ನಡದ ಪ್ರಸಾರ ಭರದಿಂದ ಸಾಗಬೇಕಾದರೆ ಈ ಕಡೆ ಎಲ್ಲರೂ ಹೆಚ್ಚು ಲಕ್ಷಹಾಕಲಿ.

ಅಲ್ಪ ಸಂಖ್ಯಾಕರನ್ನು ತೊಂದರೆ ಗೊಳಿಸುವದಾಗಲಿ ನಿರ್ನಾಮಗೊಳಿಸುವದಾಗಲಿ ಇಂದಿನ ಪ್ರಜಾಪ್ರಭುತ್ವ ಆಡಳಿತೆಯಲ್ಲಿ ಶುದ್ಧ ಭ್ರಾಂತಿಯೇ ಸರಿ. ಇದಕ್ಕೆ ಯಾರೂ ಅಂಜಬೇಕಾಗಿಲ್ಲ. ಮುಖ್ಯವಾಗಿ ನಮ್ಮ ಕರ್ನಾಟಕದಲ್ಲಿ ಒಂದು ಜನಾಂಗ ಇನ್ನೊಂದು ಜನಾಂಗವನ್ನು ತುಳಿದು ಆಳುವಷ್ಟು ಮೂರ್ಖ ಹಾಗೂ ಪ್ರಬಲವಾಗಿ ಯಾವ ಜಾತೀಯರಾದರೂ ಇರುವರೆಂದು ನಾವು ಊಹಿಸಲಾರೆವು.

ಕನ್ನಡಿಗರು ಈಗ ಅಖಿಲ ಭಾರತದಲ್ಲಿ ಎಲ್ಲಿಯೆ ವಾಸಿಸುತ್ತಿರಲಿ, ಸಂಸ್ಥಾನಗಳಲ್ಲಿ ಇಲ್ಲವೆ ಬೇರೆ ಬೇರೆ ಪ್ರಾಂತಗಳಲ್ಲಿರುವವರೆಲ್ಲರೂ ತಾವು ಒಂದೇ ನಾಡಿನ ಸಂಸ್ಕೃತಿಗೆ ಸಂಬಂಧಿಸಿದವರೆಂದೂ ಅದನ್ನು ಕಾಪಾಡಿಕೊಳ್ಳುವುದು ತಮ್ಮ [illegible] ಯೋಗ್ಯತೆ ಎಂದೂ ನಂಬಬೇಕು. ಈಗ ಅದನ್ನು ಅವಶ್ಯವಾಗಿ ತಿಳಿದುಕೊಳ್ಳುವ ಕಾಲವೇ ಬಂದಿದೆ. ಅಖಿಲ ಕನ್ನಡಿಗರ ಉದ್ದೇಶ ಮತ್ತು ಧ್ಯೇಯ ಒಂದೇ ಆದರೆ ಏಕೀಕರಣ ಚಳವಳಿ ಸ[illegible] ಗೊಂಡು ಸ್ವಾಯತ್ತ ಪ್ರಾಂತದ ಆಡಳಿತೆ [illegible] ಗಿಯೇ ಕನ್ನಡಿಗರಿಗೆ ಒದಗುತ್ತದೆ.

ಧರಂಪೂರ, ಅಳ್ವಾರ ಧೋಲಪುರ ಮತ್ತು ಕರಾಳಿ ಸಂಸ್ಥಾನಗಳ ಏಕೀಕರಣವಾಗಿ ಮತ್ಸ್ಯ ಒಕ್ಕೂಟವೆಂಬ ಹೊಸ ಒಕ್ಕೂಟವು ಸ್ಥಾಪಿತವಾಯಿತು. ಭರತಪೂರ ಕೋಟೆಯಲ್ಲಿ ನೆರೆದ ವಿಶೇಷ ದರಬಾರದಲ್ಲಿ ೧೭ ನೇ ತಾರೀಕು ಸಂಸ್ಥಾನ ಖಾತೆಯ ಮಂತ್ರಿಗಳ ಪರವಾಗಿ ಲೋಕೋಪಯೋಗಿ ಖಾತೆಯ ಮಂತ್ರಿ ಶ್ರೀ ಗಾಡಗೀಳರು ಅದನ್ನು ಉದ್ಘಾಟಿಸುತ್ತ ಮಹತ್ವದ ಭಾಷಣ ಮಾಡಿದರು. ಧೋಲಪುರದ ಮಹಾರಾಜರಾದ ಇವರು ರಾಜಪ್ರಮುಖರೆಂದು ಅಳ್ವಾರದ ಮಹಾರಾಜಾ ಉಪರಾಜ ಪ್ರಮುಖರೆಂದು ಪ್ರತಿಜ್ಞೆ ತೆಗೆದುಕೊಂಡರು.

ಇಂಡೋನೇಶಿಯಾದ ಪ್ರಜಾ ರಾಜ್ಯದ ಸರಕಾರವು ಭದ್ರತಾ ಮಂಡಳದ ಸದಿಚ್ಛಾ ಸಮಿತಿಗೆ ಒಂದು ಓಲೆ ಬರೆದು ಎಚ್. ಗವರ್ನರರಾದ [illegible] ನ ಮೂಕರು, ಪ್ರಜಾ ರಾಜ್ಯದ ಸರಕಾರವನ್ನು ವಿಚಾರಿಸದೆ ಇಂಡೋನೇಶಿಯಾದ ಸರಕಾರ ರಚಿಸುತ್ತಿರುವದನ್ನು ಪ್ರತಿಭಟಿಸಿದೆ. ಪ್ರಜಾ ರಾಜ್ಯದ ಪ್ರತಿನಿಧಿ ಮಂಡಳದ ಧುರೀಣರಾದ ಡಾ. ಮಹಮ್ಮದ ರೋಹಿಮರು ಈ [illegible] ಯನ್ನು ನೇರವಾಗಿ ಭದ್ರತಾ ಮಂಡಳದೆದುರು ಇಡಬೇಕೆಂದು ಸದಿಚ್ಛಾ ಸಮಿತಿಗೆ ಕೇಳಿಕೊಂಡಿದ್ದಾರೆ.

ನೋಟೀಸ

[illegible] ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

ಕ್ರಮ ಸಂ [illegible]

[illegible] ಲ. ವರ್ಕ್ಸ, ಕುಂದಾಪುರ ಇದರ ಮೆನೆಜಿಂಗ ಪಾರ್ಟನರ, [illegible] [illegible] ಈಶ್ವರ ಮಗ ಕುಂದಾಪುರ ತಾಲ್ಲೂಕ ಕುಂದಾಪುರ ಕಸಬೆಯಲ್ಲಿರುವವ. [illegible] ರಾಯಣ ಗೋಪಾಲಗಿರಿ ಕಂಟ್ರಾಕ್ಟರ, ಸ್ಟೇಶನರೋಡ ಧಾರವಾಡದಲ್ಲಿ

ಶಿವಾದಿ ರಾಮನಾರಾಯಣ ಗೋಪಾಲಗಿರಿಗಳವರಿಗೆ—

ವಾದಿಯು ಬಾಬ್ತು ಪ್ರಭಾಕರ ಟೈಲ ವರ್ಕ್ಸ, ಕೂಡ ತಾ [illegible] ರ ವರೆಗೆ ನೀವು ನಡ್ಸಿದ ಲೇವಾದೇವಿಯಲ್ಲಿ ನಿಮ್ಮ ಮೇಲೆ ಬರತಕ್ಕ ರೂಪಾಯಿ ಮತ್ತು ಬಡ್ಡಿ ಕೂಡಾ ರೂಪಾಯಿ [illegible] ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ನಿಮ್ಮ ಮೇಲೆ ಮಾಡಿದ ದಾವೆಯು ತಾರೀಖು [illegible] ಕ್ಕೆ ತನಿಖೆಗೆ ಇಟ್ಟಿರುವದರಿಂದ ಆ ದಿವಸ ನಿಮ್ಮ ಆಕ್ಷೇಪ[illegible] ಕೋರ್ಟ ಸವರಾಗುವಾದ್ದಕ್ಕೆ ೧೧ ಘಂಟೆಗೆ ಹಾಜರಾಗಿ ಜ್ವಾಬ್ ಕೊಡತಕ್ಕದ್ದು. [illegible] ಸದರಿ ವ್ಯಾಜ್ಯದಲ್ಲಿ ನಿಮ್ಮ ಗೈರಹಾಜರಿಯಲ್ಲಿ ಕೇಳಿ ಫೈಸಲುಮಾಡಲಾಗುವದೆಂತ ನೀವು ತಿಳಿದಿರತಕ್ಕದ್ದು.

ಕೋರ್ಟ ಹುಕುಮು ಪ್ರಕಾರ

ತಾ. [illegible]

K. Narayana Kama[illegible]

ವಾದಿಯ ಕಡೆ ವಕೀಲರು

ವ್ಯಾಪಾರ ಪ್ರಪಂಚ

ಮುಂಬಯಿ ಪೇಟೆ ಧಾರಣೆ

ಮುಂಬಯಿ ತಾ. ೧೮

ಬಂಗಾರ

ತಯಾರಿ	೧೧೦—೪—೦
ತಯಾರಿ	೧೧೨—[illegible]

ಬೆಳ್ಳಿ

ತಯಾರಿ	೧೩೪—೦—೦
ಮೇಂಬರ	೧೩೪—[illegible]—೦
ಸಾವರಿನ	೭೦—೧೨—೦

ಎಣ್ಣೆ ಕಾಳುಗಳು

ಶೇಂಗಾ	೧೫೭—೩—೦
ಹೊಸ ಬೆಳೆ	೧೫೭—೩—೦
ಅಗಸಿ	೨೪—೧೨—೦
ಅಗಸಿ ಎಣ್ಣೆ	೧೭—೮—೦

ಟೆಕ್ಸಟಾಯಿಲ್ಸ

ಅಹಮದಾಬಾದ ಅಡ್ವಾನ್ಸ	೫೬೫—೦—೦
ಮುಂಬಯಿ ಡಾಯಿಂಗ	೧೦೬೦—೮—೦
ಸೆಂಟ್ರಲ ಇಂಡಿಯಾ	೩೭೦—೦—೦
ಸೆಂಚುರಿ	೫೧೫—೦—೦
ಕಾಲಾಬಾ ಲ್ಯಾಂಡ	೩೨೦—೦—೦
ಗೋಕಾಕ	೩೩೯—೮—೦
ಇಂಡಿಯನ್ ಬ್ಲೀಚಿಂಗ	೧೬೫—೦—೦
ಕೋಹಿನೂರು	೬೦೦—೦—೦
ಕೋಲಾಬ	೬೨೪೫—೦—೦
ಸಿಂಪ್ಲೆಕ್ಸ	೨೨೬—೦—೦
ಸ್ವದೇಶಿ	೬೩೫—೦—೦
ವಿಕ್ಟೋ	೬೨೨—೮—೦
ಟಾಟಾ ಪವರ	೧೫೪೫—೦—೦
ಟಾಟಾ ಹೈಡ್ರೊ	೧೫೬—೦—೦
ಟಾಟಾ ಸ್ಟೀಲ ಡೆಫರ್ಡ	೧೬೮೫—೦—೦
ಟಾಟಾ ಸ್ಟೀಲ ಆರ್ಡಿನರಿ	೩೯೫—೦—೦
ಪ್ರಿಮಿಯರ ಕನ್‌ಸ್ಟ್ರಕ್ಶನ	೨೦೨—೦—
ಇಂಡಿಯನ ಆಯರ್ನ	೩೧—೧೪—೦
ಬಿಬ್ಬಾ ಕಾರ್ಪೊರೇಶನ	೩—೩—೦
ಇಂಡಿಯನ್ ಕಾಪರ	೨—೧೨—೬

ಇನ್ಶುರನ್ಸ

ನ್ಯೂ ಇಂಡಿಯಾ ಇನ್ಶುರನ್ಸ	೨೩—೦—೦

ಬ್ಯಾಂಕುಗಳು

ಸೆಂಟ್ರಲ	[illegible]—೮—೦
ಇಂಪಿರಿಯಲ (ಅಂಶತಃ)	೫೧೫—೦—೦
ಇಂಪೀರಿಯಲ (ಪೂರ್ಣ)	೨೦೮೭—೦—೦
ಇಂಡಿಯಾ	೧೦೨—೦—೦

ಅರಳೆ

ಮಾರ್ಚ	೫೭೯—೮—೦
ಮೇ	೫೮೧—೮—೦
ಜುಲೈ	೫೯೯—೪—೦
ಸಪ್ಟಂಬರ	೫೯೩—೪—೦
ಡಿಸೆಂಬ್ರ	೫೮೫—೮—೦
ಆಡಿವು	೫೭೫—೦—೦ — ೫೭೫—೮—೦

ಕೊಲ್ಲಾಪುರ ಪೇಟೆ

ಒಕ್ಕಲಿಗರ ... ಮಾರಾಟ ಸಮಿತಿ

ಖಂಡ—

[illegible]

ಸಾಂಗಲಿ ಪೇಟೆ

[illegible]

ಶಿವಮೊಗ್ಗೆ

ಶಿವಮೊಗ್ಗೆ ಅಡಿಕೆ ... ಧಾರಣೆ ...

ಸರಕಿನ ಇದೆ—

[illegible]

'ಜಲಉಷಾ' ದ ಜಲಪ್ರವೇಶ

ಭಾರತದ ಮುಖ್ಯ ಮಂತ್ರಿಗಳಾದ ಪಂ. ನೆಹರು ಅವರು ತಾ. ೧೪ ರಂದು ವಿಶಾಖ ಪಟ್ಟಣದಲ್ಲಿ ೮ ಸಾವಿರ ಟನ್ನಿನ 'ಜಲಉಷಾ' ಎಂಬ ಹಡಗನ್ನು ನೀರಿಗಿಳಿಸುವ ಸಮಾರಂಭ ನೆರವೇರಿಸಿದರು. 'ಜಲಉಷಾ' ಸ್ವತಂತ್ರ ಹಿಂದುಸ್ತಾನದ ಪ್ರಥಮ ನೌಕೆ. ಸಿಂಧ್ಯಾ ಸ್ಟೀಮ್ ನ್ಯಾವಿಗೇಶನ್ ಕಂಪನಿಯವರು ಇದನ್ನು ಕಟ್ಟಿದ್ದಾರೆ. ಈ ಕಂಪನಿಯು ಇಸ್ವಿ ೧೯೧೯ ರಲ್ಲಿ ಈ ಕಂಪನಿಯವರು ೧೯೪೧ ರಲ್ಲಿ ವಿಶಾಖ ಪಟ್ಟಣದಲ್ಲಿ ನೌಕಾ ನಿಲ್ದಾಣವನ್ನು ಸ್ಥಾಪಿಸಿದರು.

ಈ ನೌಕೆಯನ್ನು ನೀರಿಗಿಳಿಸಲು ಪಂ. ನೆಹರು ಅವರು ತಮ್ಮ ತಂಗಿ ಸೋದರ ಸೊಸೆಯವರ ಜೊತೆಗೆ ತಾ. ೧೪ ರ ಬೆಳಿಗ್ಗೆ ವಿಶೇಷ ವಿಮಾನದಿಂದ ಗಾಂಧಿ ಗ್ರಾಮಕ್ಕೆ ಆಗಮಿಸಿದರು. ಹಡಗು ಕಟ್ಟುವ ಕಾರಖಾನೆಯ ವಿಶಾಲ ಸೀಮೆಗೆ ಗಾಂಧಿ ಗ್ರಾಮವೆಂದು ನಾಮಕರಣವಾಗಿದೆ. ಮದ್ರಾಸದ ಮುಖ್ಯ ಮಂತ್ರಿ ಸಮೇತ ಇತರ ಮಂತ್ರಿಗಳೂ ಡಾ. ಪಟ್ಟಾಭಿ, ಪ್ರೊ. ಎನ್. ಜಿ. ರಂಗಾ ಶ್ರೀ. ಟಿ. ಪ್ರಕಾಶಂ ಸಿಂಧ್ಯಾ ಕಂಪನಿಯ ಚೇರಮನ್ನರಾದ ಶ್ರೀ. ವಾಲಚಂದ ಹೀರಾಚಂದರೇ ಮೊದಲಾದ ಅನೇಕ ಪ್ರತಿಷ್ಠಿತರು ಪಂ. ನೆಹರು ಅವರನ್ನು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು.

ಹಡಗಿಗೆ 'ಜಲಉಷಾ' ಎಂದು ಪಂಡಿತಜಿಯವರು ನಾಮಕರಣ ಮಾಡಿ ನೌಕೆಯ ಮೇಲೆ ಕುಂಕುಮದಿಂದ ಸ್ವಸ್ತಿಕ ಬರೆದು ತೆಂಗಿನಕಾಯಿ ಒಡೆದು ಬ್ರಾಹ್ಮಣರು ವೇದಮಂತ್ರ ಘೋಷಿಸುತ್ತಿರಲು ಇತ್ತ ಜನಸ್ತೋಮ ಜಯಘೋಷಗೈಯುತ್ತಿರಲು, ಪುಷ್ಪ ಮಂತ್ರಾಕ್ಷತೆಗಳ ಮಳೆಗರೆಯುತ್ತಿರಲು ಪಂಡಿತರು ವಿದ್ಯುಚ್ಛಕ್ತಿಯ ಗುಂಡಿಯನ್ನು ಅದುಮಿ ನೌಕೆಯನ್ನು ನೀರಿಗೆ ಇಳಿಬಿಟ್ಟರು. ನೌಕೆ ಗಂಭೀರಗತಿಯಿಂದ ಸಮುದ್ರದಲ್ಲಿ ಸಾಗಿತು. ಅಸಂಖ್ಯಾತ ಜನ ಸಮಾರಂಭಕ್ಕೆ ನೆರೆದಿತ್ತು. ನೌಕಾ ರಚನೆಯು [illegible] ಧ್ವಜಗಳಿಂದ ಅಲಂಕೃತವಾಗಿತ್ತು.

ಪಂಡಿತರು ಪ್ರಸಂಗೋಚಿತ ಭಾಷಣ ಮಾಡುತ್ತ ಜಲಪ್ರವೇಶ ಮಾಡಿದ ನೌಕೆಯನ್ನು ಸ್ವತಂತ್ರ ಹಿಂದುಸ್ತಾನ ಸರಕಾರಕ್ಕೆ ಹೋಲಿಸಿ ಮಾತನಾಡಿದರು. ನಾನು ತರುಣನಿದ್ದರೆ ವಿಮಾನ ಅಥವಾ ನೌಕಾಪಡೆಯಲ್ಲಿ ಖಂಡಿತ ಕೆಲಸ ಮಾಡುತ್ತಿದ್ದೆ ಎಂದು ಉದ್ಗಾರ ತೆಗೆದರು. ಸರಕಾರವು ಈ ಉದ್ದಿಮೆಗೆ ಸರ್ವವಿಧ ಸಹಾಯವನ್ನು ಸಲ್ಲಿಸುವದಾಗಿ ಆಶ್ವಾಸನವಿತ್ತರು.

ಘಟನಾ ಸಮಿತಿಗಾಗಿ ನಿಜಾಮ ಸರಕಾರವು ಆತುರಪಡೆಯೆ?

ನಿಜಾಮ ಸರಕಾರದ ವಕ್ತಾರರೊಬ್ಬರು ಹೈದರಾಬಾದ ಸಂಸ್ಥಾನದ ಪ್ರಮುಖ ರಾಜಕೀಯ ಪಕ್ಷಗಳಲ್ಲಿ ಒಮ್ಮತವನ್ನುಂಟುಮಾಡಲು ಮತ್ತು ಕೂಡಲೆ ಒಂದು ಘಟನಾ ಸಮಿತಿಯನ್ನು ರಚಿಸಲು ಹೈದರಾಬಾದ ಸರಕಾರವು ಆತುರವಾಗಿದೆಯೆಂದು ತಾ ೧೪ ರಂದು ಹೇಳಿದರು. ಅವರು ಇನ್ನೂ ಹೀಗೆ ಹೇಳಿದರು.

ಸಂಸ್ಥಾನದ ಸದ್ಯದ ಪರಿಸ್ಥಿತಿಗೆ ಅನುಗುಣವಾಗಿ ಕಾಯದೆ ಮಂಡಲದಲ್ಲಿ ಹಾಗು ಮಂತ್ರಿ ಮಂಡಲದಲ್ಲಿ ಹಿಂದು ಮುಸಲ್ಮಾನರಿಗೆ ಸಮಪ್ರಾತಿನಿಧ್ಯವಿರಬೇಕೆಂದು ಸರಕಾರದ ಇಚ್ಛೆ ಇದೆ. ನೌಕರಿಯಲ್ಲಿಯೂ ಈ ಸಮಪ್ರಾತಿನಿಧ್ಯವನ್ನು ಕ್ರಮೇಣ ಅಮಲಿನಲ್ಲಿ ತರುವದು ಶಕ್ಯವಿದೆ. ಅರ್ಹತೆಗನುಸರಿಸಿಯೇ ನೌಕರರನ್ನು ಆಯಲಾಗುವದು. ಅಂದರೇ ಆಡಳಿತ ಸರಿಯಾಗಿ ಸಾಗುವದು.

[illegible]


ಕಾರವಾರ ಸಮುದ್ರ ದಂಡೆಯ ಮೇಲೆ ಇರುವ ಮೀನಗಾರರ ಗುಡಿಸಲುಗಳಿಗೆ ೧೭ ನೇ ತಾರೀಕು ಬೆಂಕಿ ಹತ್ತಿ ಸುಮಾರು ಒಂದು ಲಕ್ಷ ರೂಪಾಯಿ ಹಾನಿಯಾಯಿತು. ಕಾರವಾರದ ಇತಿಹಾಸದಲ್ಲಿಯೇ ಇಂಥ ಬೆಂಕಿ ಅಪೂರ್ವವೆಂದು ಹೇಳಲಾಗುವದು.



೧ ಡಾ. ಹರ್ಡೀಕರ ಹಾಗೂ ಶ್ರೀ ದಿವಾಕರರು ಶಿಬಿರಾಧಿಪತಿ ಕರ್ನಲ ಪುರಿ (ಹ್ಯಾಟ ಹಾಕಿರುವರು) ಯವರೊಡನೆ ಚರ್ಚಿಸುತ್ತಿರುವುದು



ತಂಬುಗಳ ಮಹಾನಗರ:— ನಿರಾಶ್ರಿತರ ಶಿಬಿರವಾದ ಕುರುಕ್ಷೇತ್ರವು.



೩ [illegible] ಶ್ರೀ ದಿವಾಕರ, [illegible] ಹರ್ಡೀಕರ, [illegible]



ವಿಜಾಪುರ ಜಿಲ್ಲಾ ಗೋಸಂವರ್ಧಕ ಸಮಿತಿಯವರು ಬಾಗಲಕೋಟೆಯಲ್ಲಿ ತಾರೀಕು ೨೮—೨—೧೯೪೮ ನೇ ದಿನ ನೆರವೇರಿಸಿದ ದನಗಳ ಪ್ರದರ್ಶನದಲ್ಲಿ ಪ್ರಥಮಸ್ಥಾನ ಪಡೆದ ವಿಜಾಪುರದ ಜಿಲ್ಲೆಯಲ್ಲಿಯೇ ಹುಟ್ಟಿ ಬೆಳೆದ ಶುದ್ಧ ಕಾಂಕರೇಜ ಜಾತಿಯ ದನಗಳು.

ಕರ್ನಾಟಕ

ಧಾರವಾಡ

ಗದುಗಿನ ವೀರನಾರಾಯಣ ದೇವರ ಗರ್ಭ ಗುಡಿ ಪ್ರವೇಶಿಸಿ ಪೂಜಾದಿಗಳನ್ನು ಮಾಡಬೇಕೆಂದು ಹರಿಜನರು ಶಿವರಾತ್ರಿಯಿಂದ ಸತ್ಯಾಗ್ರಹ ನಡೆಸಿದ್ದರು. ಸವರ್ಣ ಹಿಂದುಗಳೆಲ್ಲ ಎಲ್ಲಿಯವರೆಗೆ ನಿಲ್ಲುವರೊ ಅಲ್ಲಿಯವರೆಗೆ ನಿಂತು ದರ್ಶನ ತೆಗೆದುಕೊಳ್ಳಬೇಕೆಂದು ಹೇಳಿ ಪಂಚರು ಗರ್ಭ ಗುಡಿಯ ಬಾಗಿಲು ಮುಚ್ಚಿದ್ದರು. ಜಿಲ್ಲಾಧಿಕಾರಿಗಳು ಮಧ್ಯಸ್ಥಿಕೆ ಮಾಡಿ ಪಂಚರಿಂದ ಕೀಲಿ ತೆಗೆಯಿಸಿ ಗರ್ಭ ಗುಡಿಯ ಮುಂದೆ ನಿಂತು ದರ್ಶನ ತೆಗೆದುಕೊಳ್ಳಲು ಹರಿಜನರಿಗೆ ಮುಕ್ತದ್ವಾರ ಮಾಡಿದರು.

ಹಾವೇರಿಯಲ್ಲಿ ಇದೇ ೨೩ ರಿಂದ ೨೯ ರ ವರೆಗೆ ಯಾರೂ ಬಡಿಗೆ, ಲಾಠಿ, ದೊಣ್ಣೆ ಮೊದಲಾದವುಗಳನ್ನು ಹಿಡಿದುಕೊಂಡು ಅಡ್ಡಾಡಬಾರದು ಕಲ್ಲುಗಳನ್ನು ಕೂಡಹಾಕಬಾರದು ಮೊದಲಾಗಿ ನಿರ್ಬಂಧಿಸಲಾಗಿದೆ. ಕಾಮದಹನದ ಮೆರವಣಿಗೆಯು ಹೊರತು ಬೇರೆ ಮೆರವಣಿಗೆ ಹೊರಡಿಸಬಾರದೆಂದು ಮುಂತಾಗಿಯೂ ನಿರ್ಬಂಧಿಸಲಾಗಿದೆ. ಹಿಂದು ಮುಸಲ್ಮಾನರಲ್ಲಿ ಕಾಮ ದಹನದ ಬಗ್ಗೆ ವಿವಾದವಿದ್ದುದರಿಂದ ಈ ಯೋಜನೆ ಕೈಕೊಳ್ಳಲಾಗಿದೆ ರಾಣೇಬಿನ್ನೂರಿನಲ್ಲಿಯೂ ಇದೇ ಬಗೆಯ ನಿರ್ಬಂಧಕ ಹುಕುಮು ಹೊರಡಿಸಲಾಗಿದೆ.

ಪ್ರಾಂತಾಧ್ಯಕ್ಷ ಶ್ರೀ ನಿಜಲಿಂಗಪ್ಪ ಮತ್ತು ಜಿಲ್ಲಾ ಕಾಂಗ್ರೆಸ ಅಧ್ಯಕ್ಷ ಶ್ರೀ ಗುದ್ಲೆಪ್ಪ ಹಳ್ಳಿಕೇರಿಯವರು ಕಳ್ಳಿ ತಿಪ್ಪಣ್ಣ ಶಾಸ್ತ್ರಿಗಳೊಡನೆ ೧೩ ಕ್ಕೆ ನಿಡಗುಂದಿ ಕೊಪ್ಪಕ್ಕೆ ಬಂದು ನಿಜಾಮ ಗಡಿಯಲ್ಲಿಯ ಜನರು ಗಾಬರಿಯಾಗಬಾರದೆಂದೂ ಊರು ಬಿಡದೆ ಎಲ್ಲರೂ ಆತ್ಮ ರಕ್ಷಣೆ ಮಾಡಿಕೊಳ್ಳಬೇಕೆಂದೂ ಮುಂತಾಗಿ ಹೇಳಿದರು.

ಧಾರವಾಡ ಜಿಲ್ಲೆಗೆ ಗಾಂಧೀಜಿ ರಾಷ್ಟ್ರೀಯ ಸ್ಮಾರಕ ನಿಧಿ ಸಮಿತಿಯನ್ನು ಸ್ಥಾಪಿಸಲೋಸುಗ ಇದೇ ೨೧ ರವಿವಾರ ಸಭೆ ಕರೆಯಲಾಗಿದೆಯೆಂದೂ ಇದಕ್ಕೆ ಗಾಂಧೀಜಿ ತತ್ವಜ್ಞಾನದ ಬಗ್ಗೆ ಆಸ್ಥೆಯಿದ್ದ ಕಾರ್ಯಕರ್ತರೆಲ್ಲ ಬರಬೇಕೆಂದೂ ಧಾರವಾಡ ಜಿಲ್ಲಾ ಕಾರ್ಯವಾಹಕರು ಬಿನ್ನವಿಸುತ್ತಾರೆ.

ಮುಂಡರಗಿಯಲ್ಲಿ ಊರಿಗೆ ಸಮೀಪದಲ್ಲಿ ಒಟ್ಟಿದ್ದ ೧೫೦ ಬಣವೆಗಳು ೧೧ ನೇ ತಾರೀಕಿಗೆ ಅಗ್ನಿ ನಾರಾಯಣನಿಗೆ ಆಹುತಿಯಾದವು. ಒಟ್ಟು ೩೦ ಸಾವಿರ ರೂಪಾಯಿಗಳ ಹಾನಿಯಾಯಿತು. ಹುಬ್ಬಳ್ಳಿ ಗದಗುಗಳಿಂದ ಅಗ್ನಿ ಶಾಮಕ ಯಂತ್ರಗಳು ಹೋದ್ದರಿಂದ ಬೆಂಕಿ ಬಹಳ ಬೇಗ ಆರಿತು. ಯಾರೋ ಹುಡುಗರು ಬೀಡಿ ಸೇದಿ ಬಣವೆಯ ಹತ್ತರ ಒಗೆದದ್ದರಿಂದ ಬೆಂಕಿ ಹತ್ತಿತಂತೆ.

ಮಧ್ಯಸ್ಥ ಮಂಡಳದ 'ಇತ್ತೀಚಿನ ನಿರ್ಣಯದಂತೆ ಕೂಲಿಕಾರರಿಗೆ ಅಧಿಕ ಸಂಬಳ ಮತ್ತು ಅಧಿಕ ತುಟ್ಟಿಭತ್ತೆ ಕೊಡುವದರಿಂದ ವಿಶೇಷ ಹಾನಿಯಾಗುವದರಿಂದ ಗಿರಣಿ ನಡೆಸಿಕೊಂಡು ಹೋಗುವದು ಶಕ್ಯವಿಲ್ಲೆಂದು ಇದೇ ೧೫ ರಿಂದ ಗದುಗಿನ ಎಸ್. ಜಿ. ಮಿಲ್ಲು ಮುಚ್ಚಿದೆ ಇಲ್ಲಿ ಕಾಮಗಾರರಿಗೆ ೧೮—೨೨ ರೂ ಸಂಬಳಸಿಕ್ಕುತ್ತಿದ್ದು ಅದನ್ನು ೨೫—೨—೬೦ ರವರೆಗೆ ಮತ್ತು ಕೂಲಿಕಾರರ ಭತ್ತೆಯನ್ನು ಆರು ಆಣೆಯಿಂದ ಹದಿನಾಲ್ಕು ಆಣೆ ವರೆಗೆ ಕೊಡಬೇಕೆಂದು ಹೊಸದಾಗಿ ನಿರ್ಣಯ ಕೊಡಲಾಗಿತ್ತು.

ಧಾರವಾಡ ಹುಬ್ಬಳ್ಳಿಗಳಿಗೆ ನೀರು ಪೂರಯಿಸುವ ನೀರಸಾಗರ ಯೋಜನೆಯು ತಾಂತ್ರಿಕ ವಿವರಣೆಗಳಿಗೆ ಮನ್ನಣೆ ಕೊಡಲಾಗಿದೆಯೆಂದೂ ಯೋಜನೆಯ ಕಾರ್ಯವನ್ನು ಕೂಡಲೆ ಪ್ರಾರಂಭಿಸಲು ಆಜ್ಞೆಯನ್ನು ಹೊರಡಿಸಲಾಗಿದೆಯೆಂದೂ ಮುಂಬಯಿ ಸರಕಾರವು ಪ್ರಕಟನೆಯ ಮೂಲಕ ಸಾರಿದೆ.

ಹುಬ್ಬಳ್ಳಿಯ ರಾಷ್ಟ್ರೀಯ ಮಜೂರ ಸಂಘದ ಕೂಲಿಕಾರರ ಸಭೆ ಶ್ರೀ ಶಿವಶಂಕರಪ್ಪಾ ದೇವಪೂರ ಇವರ ಅಧ್ಯಕ್ಷತೆಯಲ್ಲಿ ೧೪ ಕ್ಕೆ ಕೂಡಿ ಧಾರಣೆ ಏರುವದರಿಂದ ಉಂಟಾದ ಪರಿಸ್ಥಿತಿಯ ಬಗ್ಗೆ ವಿಚಾರ ಮಾಡಲಾಯಿತು. ಯೋಗ್ಯ ಧಾರಣೆಗೆ ಆಹಾರ ಪದಾರ್ಥಸಿಕ್ಕುವಂತೆ ಮತ್ತು ಲಾಭಬಡಕ ವ್ಯಾಪಾರಸ್ಥರಿಗೆ ಕ್ರೂರದಂಡನೆಗೆ ಗುರಿಮಾಡಬೇಕೆಂದು ಕೇಳಿ ಕೊಳ್ಳುವ ಗೊತ್ತುವಳಿ ಸ್ವೀಕೃತವಾಯಿತು.

ರೋಣ ತಾಲೂಕಿನ ನರೇಗಲ್ಲ ಗ್ರಾಮದ ಸುತ್ತ ಮುತ್ತ ನಿಜಾಮ ಸಂಸ್ಥಾನದ ಪುಂಡರು ಹಾವಳಿ ನಡೆಸಿದ್ದಾರೆ. ಹೊಲದಲ್ಲಿ ಕೆಲಸ ಮಾಡುವ ಹೆಣ್ಣು-ಮಕ್ಕಳನ್ನು ಹೆದರಿಸಿ ಹೊಲದಲ್ಲಿಯ ಬೆಳೆ ಒಯ್ಯುವದು ಮೊದಲಾದ್ದನ್ನು ನಡೆಸಿರುವರು. ಈ ಪುಂಡರ ನೆವ ಮಾಡಿಕೊಂಡು ಇಲ್ಲಿಯ ಕೆಲ ಉಡಾಳ ಜನರೂ ಗೊಂದಲ ಹಾಕುತಿರುವರು. ಗಡಿ ಜಮೀನಿಗೆ ಹೊಂದಿಯೇ ಪೋಲೀಸರು ಬಿಡಾರ ಬಿಟ್ಟರೆ ರೈತರಿಗೆ ಸಂರಕ್ಷಣ ಸಿಕ್ಕಂತಾಗುವದು.

ಹುಬ್ಬಳ್ಳಿಯಲ್ಲಿ ೧೨ ನೆಯ ತಾರೀಕು ಪ್ರಾಂತಾಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಮಾತಾಡುತ್ತ

ಬೆಳಗಾವಿ

ಮಿರಜಿಯಲ್ಲಿ ಶನಿವಾರ ರಾತ್ರಿ ೧೧ ರಿಂದ ಮುಂಜಾನೆ ೬ರ ವರೆಗೆ ಕರ್ಫ್ಯೂ ಆಜ್ಞೆ ಜಾರಿಯಲ್ಲಿ ಬಂದಿದೆ. ಮಾರ್ಚ ೧೯ ರ ವರೆಗೆ ೧೪೪ನೇ ಕಲಮನ್ನು ಜಾರಿಯಲ್ಲಿ ತರಲಾಗಿದೆ.

ಮಿರಜಿಯ ಆಹಾರ ಮತ್ತು ಪೂರೈಕೆ ಖಾತೆಯ ಡೈರೆಕ್ಟರರು ಪ್ರಕಟನೆಯನ್ನು ಹೊರಡಿಸಿ ವಿಷಿಯಂತ್ರಣವನ್ನು ಕ್ರಮಶಃ ಜಾರಿಯಲ್ಲಿ ತರಲಾಗುವದೆಂದು ಹೇಳಿದ್ದಾರೆ. ಮುಂಬಯಿ ಸರಕಾರ ಈ ಬಗ್ಗೆ ತಾಳಿದ ಧೋರಣೆಯನ್ನು ಅನುಸರಿಲಾಗುವದು.

ವಿಲೀನಹೊಂದಿದ ಸಂಸ್ಥಾನಗಳಲ್ಲಿಯ ಮಾಧ್ಯಮಿಕ ಶಾಲೆಗಳನ್ನು ಮುಂಬಯಿ ಸರಕಾರದವರು ಖಾಸಗಿ ಸಂಘಗಳ ವಶಕ್ಕೆ ಒಪ್ಪಿಸಬಹುದೆಂದು ತೋರುತ್ತದೆ.

ಬೆಳಗಾವಿ ಜಿಲ್ಲೆಯಲ್ಲಿ ಚಿಕ್ಕ ಉಳಿತಾಯ ಅಥವಾ ರಾಷ್ಟ್ರೀಯ ಉಳಿತಾಯದ ಯೋಜನೆಯ ಪ್ರಚಾರಕ್ಕಾಗಿ ಸಪ್ತಾಹವನ್ನು ಪಾಲಿಸಲಾಗುವದು. ಇದರ ಪ್ರಥಮ ಸಭೆ ಲಿಂಗರಾಜ ಕಾಲೇಜಿನಲ್ಲಿ ೧೨ಕ್ಕೆ ಸಹಾಯಕ ಕಲೆಕ್ಟರರ ಅಧ್ಯಕ್ಷತೆಯಲ್ಲಿ ನೆರೆವಿತ್ತು. ಶ್ರೀ ಚೌಗುಲೆ, ರಾ. ಸಾ. ಪಾಲಿ ಮತ್ತು ವಾಗಳೆಯವರು ಮಾತಾಡಿ ಉಳಿತಾಯದ ಯೋಜನೆಯ ಉಪಯುಕ್ತತೆಯನ್ನು ತಿಳಿಸಿ ಹೇಳಿದರು.

ಹೋಳೀಹುಣ್ಣಿಮೆ ವಾರದಲ್ಲಿ ಎಂದರೆ ೨೩ನೇ ತಾರೀಕಿನಿಂದ ೨೯ ರ ವರೆಗೆ ಕೆರೆ ತಿಂದಿ ಅಂಗಡಿಗಳನ್ನು ಮುಚ್ಚಬೇಕೆಂದು ಅಧಿಕಾರಿಗಳು ಹುಕುಮು ಹೊರಡಿಸುವರೆಂದು ತಿಳಿಯುತ್ತದೆ.

ನಿಖಿಲ ಕರ್ನಾಟಕ ಆಯುರ್ವೇದ ಪರಿಷತ್ತಿನ ೧೬ನೆಯ ಅಧಿವೇಶನ ಬೆಳಗಾವಿಯಲ್ಲಿ ಮೇ ೧೬–೧೭ ಕ್ಕೆ ಕೂಡುವದು. ಶ್ರೀ ಪಣ್ಣುಖಪ್ಪಾ ಅಂಗಡಿಯವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿ ರಚಿತವಾಗಿದೆ.

ಮಿರಜಿಯಲ್ಲಿ ಕಳೆದ ತಿಂಗಳು ಸಂಭವಿಸಿದ ಕೊಳ್ಳಿ ಲೂಟಿಗಾಗಿ ೧೫ನೆಯ ತಾರೀಕಿನ ದಿವಸ ೬ ಜನರನ್ನು ಸೆರೆ ಹಿಡಿದಿದ್ದಾರೆ. ತಾಸಂಗದಲ್ಲಿ ಇದೇ ಸಂದರ್ಭದಲ್ಲಿ ೧೨ ಜನರನ್ನು ಸೆರೆಹಿಡಿಯಲಾಗಿದೆ.

ಸೊಗಲದ ಹತ್ತಿರ ಇರುವ ಮರಕುಂಬಿಯಲ್ಲಿ ಇದೇ ೨೧ ರಿಂದ ೨೩ ರ ವರೆಗೆ ಸೋಮೇಶ್ವರ ಜಾತ್ರೆ ನೆರೆಯಲಿರುವದಷ್ಟೆ. ಆದರೆ ಅಲ್ಲಿ ಮತ್ತು ಸುತ್ತಲೂ ಕಾಲರಾ ಬೇನೆ ಇದೆಯೆಂದು ತಿಳಿದುಬಂದದ್ದರಿಂದ ಈ ಜಾತ್ರೆಯನ್ನು ಪ್ರತಿಬಂಧಿಸಲಾಗಿದೆಯೆಂದು ಸವದತ್ತಿ ಮ್ಯಾಜಿಸ್ಟ್ರೇಟರು ಪ್ರಕಟಿಸಿದ್ದಾರೆ.

ಚಿಕ್ಕೋಡಿ ಸಬ್ ಇನಸ್ಪೆಕ್ಟರ ಶ್ರೀ ಹುಲಕೋಟಿಯವರು ಪೋಲೀಸರೊಂದಿಗೆ ಕೊಲ್ಹಾಪುರ ಸಂಸ್ಥಾನದ ಪಾಳೀತಿಗೆ ಹೋಗಿ ಪುಂಡರು ಚಿಕ್ಕೋಡಿ ಮತ್ತು ಹತ್ತರವಾಟ ಮೊದಲಾದ ಸ್ಥಳಗಳಿಂದ ಲೂಟಿಮಾಡಿ ಒಯ್ದ ೬೪ ಸಾವಿರ ರೂಪಾಯಿ ಬೆಳ್ಳಿ ಬಂಗಾರ ಭಾಂಡೀ ಸಾಮಾನ ಮೊದಲಾದ್ದನ್ನು ಜಪ್ತಮಾಡಿರುವರು.

ಸದ್ಯಕ್ಕೆ ಬೆಳಗಾವಿಯಲ್ಲಿ ಆಹಾರ ಧಾನ್ಯಗಳ ಧಾರಣೆ ಏರುವದಕ್ಕೆ ಆಹಾರ ಧಾನ್ಯಗಳು ಹೆಚ್ಚು ಪ್ರಮಾಣದಲ್ಲಿ ನಿರ್ಯಾತವಾಗುತಿರುವದೇ ಕಾರಣವಾಗಿದೆ. ಆದುದರಿಂದ ಸರಕಾರವು ಆಹಾರ ಧಾನ್ಯಗಳು ಹೊರಗೆ ಹೋಗದಂತೆ ಬೇಗ ಯೋಜನೆ ಕೈಕೊಳ್ಳಬೇಕೆಂದು ಬೆಳಗಾವಿ ವ್ಯಾಪಾರಿ ಸಂಘದವರು ಸರಕಾರಕ್ಕೆ ಬಿನ್ನವಿಸಿಕೊಂಡಿರುವರು.

ಕಾಶೀ ವಿಶ್ವವಿದ್ಯಾಲಯದವರು ಕೊಲ್ಹಾಪುರ ಸಂಸ್ಥಾನದ ೫ ವಿದ್ಯಾರ್ಥಿಗಳಿಗೆ ಪ್ರವೇಶ ಕೊಟ್ಟಿದ್ದಾರೆ.

ಕರ್ನಾಟಕ ಪ್ರಾಂತೀಕರಣ ನಿಶ್ಚಿತವೆಂದೂ ಈ ಬಗ್ಗೆ ವಿವಂಚನೆ ಬೇಡವೆಂದೂ ಎಲ್ಲರೂ ಈ ಬಗ್ಗೆ ಬಲವಾದ ಪ್ರಯತ್ನ ಮಾಡಬೇಕೆಂದೂ ಮುಂತಾಗಿ ಹೇಳಿ ಅಧಿಕಾರ ಲಾಲಸೆಯನ್ನು ಬಿಟ್ಟುಕೊಡಬೇಕೆಂದೂ ಮುಂತಾಗಿ ಹೇಳಿದರು. ಶ್ರೀ ಕಳ್ಳಿ ತಿಪ್ಪಣ್ಣ ಶಾಸ್ತ್ರಿಗಳೂ ಸಮಯೋಚಿತ ಭಾಷಣ ಮಾಡಿದರು. ಶ್ರೀ ಹಳ್ಳೀಕೇರಿ ಗುದ್ಲೆಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ಬಳ್ಳಾರಿ

ಹೊಸಪೇಟೆ ಸಬ್ ಇನಸ್ಪೆಕ್ಟರ ಶ್ರೀ ಸುಬ್ಬರಾಯರು ಯಾವದೊಂದು ಫೌಜದಾರಿ ಖಟ್ಲೆಯ ತಪಾಸಣೆಗಾಗಿ ಕೊಪ್ಪಳಕ್ಕೆ ಹೋದಾಗ ಅಲ್ಲಿಯ ಫೌಜದಾರರು ಅವರನ್ನು ಸೆರೆಹಿಡಿದು ಅಪಾಚ್ಯ ಬೈದರಂತೆ. ಪೋಲೀಸ ಮೇಲಧಿಕಾರಿಯು ಅವರನ್ನು ಸ್ಟೇಶನಿಗೆ ಕರೆದುಕೊಂಡು ಹೋಗಿ ಕಳಿಸಿಬಿಡಿರೆಂದು ವಿಧಿಸಿದರಂತೆ. ಅದರಂತೆ ಅವರನ್ನು ಪೋಲೀಸರ ಕಾವಲಿನಲ್ಲಿ ಸ್ಟೇಶನಕ್ಕೆ ಕರೆದುಕೊಂಡು ಬಂದರು. ಸುಬ್ಬರಾಯರು ಗದಗ ಪೋಲೀಸ ಸ್ಟೇಶನಕ್ಕೆ ತಂತಿ ಕಳಿಸಲು ಸ್ಪೆಶಲ್ ಟ್ರೇನಿನಲ್ಲಿ ಪೋಲೀಸಪಡೆ ಬಂದು ಅವರನ್ನು ಹೊಸಪೇಟೆಗೆ ಮುಟ್ಟಿಸಿತು. ಸುಬ್ಬರಾಯರನ್ನು ಇತ್ತೆಹಾದ-ಸಂಸ್ಥೆಯ ವಶಕ್ಕೆ ಒಪ್ಪಿಸುತಿದ್ದ ಸಲ್ಪದರಲ್ಲಿ ತಪ್ಪಿತು ಎಂದು ಕೊಪ್ಪಳ ಸಬ್ ಇನಸ್ಪೆಕ್ಟರರು ವ್ಯಕ್ತಪಡಿಸಿದರಂತೆ.

ಬಳ್ಳಾರಿ ಮುನಸಿಪಲ್ ಹದ್ದಿನಲ್ಲಿ ಕಾಯದೆಬದ್ಧ ಸೀದಾ ಕೂಡಲೆ ರದ್ದು ಪಡಿಸಬೇಕೆಂದು ಬಳ್ಳಾರಿ ಮುನಸಿಪಾಲಿಟಿ ಸಭೆಯಲ್ಲಿ ಗೊತ್ತುವಳಿ ಸ್ವೀಕೃತವಾಯಿತು ಕಮೀಶನರರ ಡಾಯರಿಯನ್ನು ಓದಲು ಅಧ್ಯಕ್ಷರಿಗೆ ಅವಕಾಶವಿದೆಯೆ ಎಂಬ ಬಗ್ಗೆ ಚರ್ಚೆಯಾಗಿ ಅಧಿಕಾರವಿದೆಂದು ನಿರ್ಣಯಿಸಲಾಯಿತು. ಅದರಂತೆ ಆ ಡಾಯರಿಯಲ್ಲಿಯ ಕೆಲ ಅವತರಣಿಕೆಗಳನ್ನು ಓದಿ ಹೇಳಲಾಯಿತು.

ಉತ್ತರ ಕನ್ನಡ

ಕಾರವಾರದಿಂದ ಸಮುದ್ರ ಮಾರ್ಗವಾಗಿ ನಿರ್ಯಾತವಾಗಲಿದ್ದ ಅಕ್ಕಿಯ ೧೫೦ ಚೀಲಗಳನ್ನು ಪೋಲೀಸರು ವಶಪಡಿಸಿಕೊಂಡಿದ್ದಾರೆ. ಒಬ್ಬ ಮೀನಗಾರನ ಮನೆಯಲ್ಲಿ ಈ ಅಕ್ಕಿ ಸಂಗ್ರಹ ಸಿಕ್ಕಿತಂತೆ.

ರತ್ನಾಗಿರಿ ಜಿಲ್ಲೆಗೆ ನಿರ್ಯಾತವಾಗಲಿದ್ದ ಅಕ್ಕಿ ಹಾಗು ಭತ್ತದ ೫೦೦೦ ಚೀಲಗಳನ್ನು ಉತ್ತರ ಕನ್ನಡ ಜಿಲ್ಲೆಯ ವಿವಿಧ ಭಾಗಗಳಲ್ಲಿ ತಡೆಹಿಡಿಯಲಾಗಿದೆ.

ಕಾರವಾರದಲ್ಲಿ ಅಕ್ಕಿಯ ಬೆಲೆಯು ೧೮೦ಕ್ಕೆ ೧೦೦ ರಂತೆ ಏರಿದ್ದ ಮೂಲಕ ಬಡವರ ಕಲ್ಯಾಣಕ್ಕಾಗಿ ಬೆಲೆಗಳನ್ನು ಮತ್ತೆ ನಿಯಂತ್ರಿಸಬೇಕೆಂದು ಕಾರವಾರ ನಗರಸಭೆಯ ಅಧ್ಯಕ್ಷರಾದ ಶ್ರೀ ಕುಡುಚೀಕರರು ಜಿಲ್ಲಾಧಿಕಾರಿಗಳಿಗೆ ಬರೆದುಕೊಂಡಿದ್ದಾರೆ. ಬಡವರು ಉಪಯೋಗಿಸುವ ಕೆಂಪು ಅಕ್ಕಿ ಬೆಲೆ ಪಾಯಲಿಗೆ ೨–೨–೦ ಇದೆ ಇದರ ನಿಯಂತ್ರಿತ ಬೆಲೆ ಪ್ರತಿ ಪಾಯಲಿಗೆ ೧–೯–೦ ಇತ್ತು.

ಉತ್ತರ ಕನ್ನಡ ಜಿಲ್ಲೆಯ ಪೋಷ್ಟಮನ್ನರು ಮತ್ತು ಕೆಳದರ್ಜೆಯ ನೌಕರರು ಜಿಲ್ಲೆಯಲ್ಲಿ ಮತ್ತೆ ಸೀದಾ ಪ್ರಾರಂಭಿಸಬೇಕೆಂದು ಸರಕಾರಕ್ಕೆ ಬಿನ್ನವಿಸಿಕೊಂಡಿದ್ದಾರೆ.

ಕಾರವಾರದ ಸಾರ್ವಜನಿಕ ಪುಸ್ತಕಾಲಯಕ್ಕೆ ಮುಂಬಯಿ ಸರಕಾರದವರು ೨೦೨೦ ರೂ. ಧನ ಸಹಾಯ ಮಾಡಿದ್ದಾರೆ.

ಕಾರವಾರಕ್ಕೆ ಹುಬ್ಬಳ್ಳಿಯಿಂದ ಯಲ್ಲಾಪೂರ ಮಾರ್ಗವಾಗಿ ರೇಲ್ವೆ ಹಾಕುವದು ಶ್ರೇಯಸ್ಕರ, ಅಳ್ನಾವರದಿಂದ ಹುಬ್ಬಳ್ಳಿ ಮಾರ್ಗವಾಗಿ ರೇಲ್ವೆ ಹಾಕುವದು ಲಾಭಕರವಲ್ಲ ಎಂದು ಮುಂತಾಗಿ ಕಾರವಾರ ಭಾಗದ ಎಕ್ಸಿಕ್ಯೂಟಿವ ಎಂಜಿನಿಯರ ಶ್ರೀ ಗೋಡಸೆಯವರು ಅಭಿಪ್ರಾಯಪಟ್ಟಿದ್ದಾರೆ. ಹಾನಗಿರಿ ಘಟಕಳ ನಡುವೆ ಕೂಡ ರೇಲ್ವೆ ಮಾರ್ಗ ಹಾಕುವದು ವ್ಯಾಪಾರದ ದೃಷ್ಟಿಯಿಂದ ಲಾಭಕರವೆಂದು ಇವರು ಸೂಚಿಸಿದ್ದಾರೆ.

ವಿಜಾಪುರ

ವಿಜಾಪೂರ ಜಿಲ್ಲಾ ಮದ್ಯ ಪ್ರತಿಬಂಧಾಧಿಕಾರಿಗಳು ಮನಗೂಳಿ, ಟಕ್ಕಳಕಿ, ಮುತ್ತಗಿ, ಹುಬನೂರ ಮೊದಲಾದ ಗ್ರಾಮಗಳಲ್ಲಿಯ ಲವಣಿ ತಾಂಡೆಗಳಿಗೆ ಹೋಗಿ ಮದ್ಯ ಕುಡಿಯಬಾರದೆಂದು ಮುಂತಾಗಿ ಪ್ರಚಾರ ಮಾಡಿ ಬಂದರು.

ಜಮಖಂಡಿಯ ಕಾರ್ಯಕರ್ತರಾಗಿದ್ದ ಶ್ರೀ ಅನಂತರಾವ ಸಾಬಡೆಯವರ ಕೊಲೆಯ ಪ್ರಕರಣದಲ್ಲಿ ಸೆರೆ ಹಿಡಿಯಲ್ಪಟ್ಟು ಖಟ್ಲೆಗೆ ಗುರಿಯಾದ ಎಲ್ಲ ಆರೋಪಿಗಳನ್ನು ನಿರ್ದೋಷಿಗಳೆಂದು ಬಿಡುಗಡೆ ಮಾಡಲಾಯಿತು. ತೀರ್ಪನ್ನು ಕೋರ್ಟಿನಲ್ಲಿ ಹೇಳದೆ ಸೆಶನ್ಸ ಜಡ್ಜರ ನಿವಾಸಸ್ಥಾನದಲ್ಲಿಯ ಮಧ್ಯಾಹ್ನ ೨॥ ಗಂಟೆಗೆ ಹೇಳಲಾಯಿತು. ಅಸೆಸರರೆಲ್ಲ ದೋಷಿಯೆಂದು ಅಭಿಪ್ರಾಯಪಟ್ಟಿದ್ದರೂ ಜಡ್ಜರು ನಿರ್ದೋಷಿಯೆಂದು ತೀರ್ಪು ಕೊಟ್ಟರು. ಮುಂಬಯಿ ಹಾಯಕೋರ್ಟಿನವರು ಇದರ ವಿಚಾರಣೆ ನಡೆಸಬೇಕೆಂದು ಜಮಖಂಡಿ ಸಾರ್ವಜನಿಕ ಸಭೆಯಲ್ಲಿ ಕೇಳಿಕೊಳ್ಳಲಾಯಿತು.

ದಕ್ಷಿಣ ಕನ್ನಡ

ಮಂಗಳೂರ ಜಿಲ್ಲೆಯಲ್ಲಿಯ ಕಾಂಗ್ರೆಸ ಸ... ದಲದ ಕೆಲ ಕೇಂದ್ರಗಳನ್ನು ಶೋ... ಶೋಧಿಸಿ ಅಲ್ಲಿಯ ಲಾಠಿ ಮತ್ತು ... ಕಾಗದ ಪತ್ರಗಳನ್ನು ವಶಪಡಿಸಿಕೊಂಡಿರುವ... ದನ್ನು ಕೇಳಿ ವಿಷಾದವಾಗಿದೆ. ಇವೆಲ್ಲ ... ಸೇವಾದಲಗಳೆಂದು ತಿಳಿದು ಹೀಗೆಮಾಡಿ... ರೆಂದು ತಿಳಿಯುತ್ತದೆ. ಜಿಲ್ಲಾ ಕಾಂಗ್ರೆಸ ಸ... ಯನ್ನು ಕೇಳಿದ್ದರೆ ಈ ತಪ್ಪು ಆಗುತ್ತಿರಲಿ... ಇನ್ನಾದರೂ ಇವೆಲ್ಲವನ್ನು ಸರಿಪಡಿಸಬೇಕೆಂ... ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿ... ವರು ಮದ್ರಾಸ ಸರಕಾರಕ್ಕೆ ಬರೆದಿದ್ದಾರೆ.

೧೧ ನೇ ತಾರೀಕು ಮಂಗಳೂರಿನ ದೇಶ... ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಜರುಗಿ... ಸಭೆಯಲ್ಲಿ ಕರ್ನಾಟಕ ಏಕೀಕರಣ ಮತ್ತು... ಪ್ರಾಂತೀಕರಣ ಕುರಿತು ಶ್ರೀ ಪಾತ್ತಿ ವೆಂಕಟೇ... ಅಯ್ಯಂಗಾರ ಮತ್ತು ಕೆ. ಆರ್ ಕಾರಂತ ಇವ... ಮಾತನಾಡಿದರು. ಶ್ರೀ ಜಿನರಾಜ ಹೆಗ್ಗಡೆ... ವರು ಅಧ್ಯಕ್ಷತೆ ವಹಿಸಿದ್ದರು. ಏಕೀಕರಣವಾಗ... ಗಡಿನಾಡಿನವರಿಗೆ ಸೌಖ್ಯವಿಲ್ಲ ಎಂದು ಪ್ರತಿಪಾದಿ... ಲ್ಪಟ್ಟಿ ಯಾವ ರೀತಿಯಿಂದಲಾದರೂ ಅದ... ಸಾಧ್ಯಮಾಡಿಕೊಳ್ಳಬೇಕೆಂದು ಹೇಳಿದರು.

ಉಡುಪಿಯಲ್ಲಿ ಜಿ. ಡಿ. ಮಾಲಕರು ಮತ್ತ... ಕೂಲಿಕಾರರ ವಿವಾದದಲ್ಲಿ ಸರಕಾರ ಕೊ... ತೀರ್ಪು ಕಾರ್ಯರೂಪದಲ್ಲಿ ಬಾರದ್ದರಿಂದ ೮ ... ತಾರೀಖಿನಿಂದ ಕೂಲಿಕಾರರು ಸಂಪು ಹೂಡಿ... ವರು.

ಸುಪ್ರಸಿದ್ಧ ಲೇಖಕ ಹಾಗು ಭಾಷಣಕಾರ... ಕೀರ್ತಿಶೇಷ ಪಂಡಿತ ವೆಂಕಟರಮಣ... ರ್ಯರ ಭಾವಚಿತ್ರದ ಅನಾವರಣ ಸಮಾರಂ... ಉಡುಪಿ ಕಲಾವೃಂದದಲ್ಲಿ ಜರುಗಿತು.

ಉಡುಪಿಯ ಡಾಕ್ಟರ್ ಕೊರಡ್ಕಲ ವೆಂಕ... ರಾವ, ಎಲ್, ಐ. ಎಮ್. ಇವ... ತಮ್ಮ 'ಮನೆ ಮದ್ದು' ಪುಸ್ತಕ ... ಮೂಲಕ ಮನೆ ಮಂದಿಯ ಆರೋಗ್ಯ ಪಾಲ... ರೋಗ ನಿವಾರಣೆಯ ವಿಷಯದಲ್ಲಿ ಮಾಡಿರು... ಅಮೂಲ್ಯ ಸೇವೆಗೆ ಪ್ರೋತ್ಸಾಹನಾರ್ಥವಾ... ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ... ವರು ಮತ್ತು ಮದರಾಸಿನ ಸ್ಕೂಲ್ ಬು... ಎಂಡ್ ಲಿಟರೇಚರ ಸೊಸೈಟಿಯವರು ... ೫೦/– ರಂತೆ ಎರಡು ಸಂಭಾವನೆಗಳನ್ನು ಕೊ... ರುವರು.

ಮೈಸೂರು ಸಂಸ್ಥಾನ

ವಿದೇಶಗಳಿಂದ ಅಡಿಕೆಗಳನ್ನು ಆಮದು... ಮಾಡುವದನ್ನು ನಿಲ್ಲಿಸಬೇಕೆಂದೂ ಇದರಿಂ... ಸ್ಥಳೀಯ ವ್ಯಾಪಾರಸ್ಥರಿಗೆ ಬಹಳ ಹಾನಿ ತಟ್ಟಿ... ಯೆಂದೂ ಅಡಿಕೆಯ ಬೆಲೆಯೂ ತಗ್ಗಿದೆಯೆಂದ... ಅ. ಭಾ. ಅಡಿಕೆ ಮಾರಾಟಗಾರ ಸಂಘದ ... ಮಗ್ಗಿ ತಾಲೂಕಿನವರು ಹಾಗು ಅಡಿಕೆ ಬೆಳೆವ... ಸಂಘದವರು ಸರಕಾರಕ್ಕೆ ಬಿನ್ನವಿಸಿ ಕೊಂ... ಡ್ಡಾರೆ.

ಆರ್. ಎಸ್, ಎಸ್‌ದ ಶ್ರೀ ವಿನಾಯಕ ... ಅವಲಕ್ಕಿಯವರನ್ನು ಸಾಗರದಲ್ಲಿ ಬಂಧಿಸಿ ... ಮುಗ್ಗಿಗೆ ತರಲಾಗಿದೆ.


ಈಸೂರು ಗ್ರಾಮದಲ್ಲಿ ಒಂದು ತರದ ... ಆರಂಭವಾಗಿ ೫೦—೬೦ ಜನ ಸತ್ತಿರುವದಾಗಿ ... ಯುತ್ತದೆ. ಆರೋಗ್ಯಾಧಿಕಾರಿಗಳು ಇನ್ನ... ಯಾವದೇ ಉಪಾಯ ಯೋಜಿಸಿದಂತೆ ತೋ... ದಿಲ್ಲ.

ಕಳೆದ ೨೨ ನೇ ತಾರೀಖಿನಿಂದ ಕಾನಕ... ಹಳ್ಳಿಯಲ್ಲಿ ಪ್ರಾರಂಭವಾದ ಸೇವಾದಲ ಶಿಕ್ಷ... ಶಿಕ್ಷಣ ಶಿಬಿರದಲ್ಲಿ ಸಂಸ್ಥಾನದ ಬೇರೆಬೇರೆ ಜಿ... ಗಳಿಂದ ಒಟ್ಟು ೮೨ ಜನ ಶಿಕ್ಷಣ ಪಡೆಯುತ್ತಿ... ವರು. ಇದೇ ತಿಂಗಳ ೨೩ ಕ್ಕೆ ಡಾ. ನಾ. ... ಹರ್ಡೀಕರರು ಇವನ್ನು ಸಂದರ್ಶಿಸಿ ಸಂಸ್ಥಾನದ... ಸೇವಾದಲದ ಸಂಘಟನೆಗಾಗಿ ನಾಲ್ಕು ದಿನ ಸಂ... ಚರಿಸುವರು,

ಕನ್ನಡ ಸಂಸ್ಥಾನ

ಕೊಲ್ಹಾಪುರ ಸಂಸ್ಥಾನ ಪ್ರಜಾಪರಿಷ... ಹೊಸದಾಗಿ ಕಾರ್ಯಾಧ್ಯಕ್ಷರಾಗಿ ಆರಿಸಲ್ಪಟ್ಟ ... ರತ್ನಪ್ಪ ಕುಂಬಾರರು ತಮ್ಮ ಕಾರ್ಯಕಾರೀ ಮಂ... ಳವನ್ನು ಆರಿಸಿಕೊಂಡಿದ್ದಾರೆ. ಶ್ರೀ ಶಂಕರರಾ... ಮಾನೆ ಮತ್ತು ಗೋಪಾಳರಾವ ದಾಳವೆ ಅವ... ಪ್ರಧಾನ ಮತ್ತು ಜೊತೆ ಕಾರ್ಯದರ್ಶಿಗಳ... ಯೋಜಿಸಲ್ಪಟ್ಟಿದ್ದಾರೆ.

ಜಾಡ್ಯಾಪೂರಕ್ಕೆ ಸಮೀಪದಲ್ಲಿರುವ ಬಡ್ಡಾ... ಥಾನೆಕ್ಕೆ (ಗಡಹಿಂಗ್ಲಜ) ಕಳೆದವಾರ ಮಾಮ... ವಾರದೊ ಪೋಲೀಸರೂ ಸ್ವಯಂಸೇವಕರೂ ಬ... ವಿಲೀನೀಕರಣಕ್ಕೆ ಅನುಕೂಲ ಮತಕೊಡಬ... ದೆಂದೂ ಕೊಟ್ಟರೆ ಸರಕಾರದ ರೋಷಕ್ಕೆ ... ಯಾಗಬೇಕಾಗುವದೆಂದೂ ಜನರಿಗೆ ಬೆದರಿ... ಹಾಕಿದರೆಂದು ತಿಳಿಯುತ್ತದೆ.



ಮುಂಬಯಿ

ಧೋಲಾಪುರದಲ್ಲಿ ಜಲಾತ್ರಿಕರು ರವಿವಾರ ತಾ. ೧೪ ಕ್ಕೆ ಹಾಕಿದ ಗಲಭೆಯಲ್ಲಿ ೬-೭ ಅಂಗಡಿಗಳು ಲೂಟಿಯಾಗಲ್ಪಟ್ಟವು. ಪೋಲೀಸರು ೪೦ ಜಲಾತ್ರಿಕರನ್ನು ಬಂಧಿಸಿದ್ದಾರೆ. ೧೫ ದಿವಸಗಳವರೆಗೆ ಅಲ್ಲಿ ಜಮಾವ ಬಂದೀ ಕಲಮು ಜಾರಿಯಾಗಿದೆ.

ಕೆಳಗಿನ ಅನೇಕ ಮಾರ್ಗಗಳಿಂದ ಕೊಲ್ಹಾಪುರ ಕ್ಕೆ ೨ ಬಾಯಿಲು ಟ್ರಸ್ಟ್ ಬಸ್‌ಗಳನ್ನು ತಾ. ೧೫ ರಂದು ಹೊರಟ ಭಾರತ ಸರಕಾರ ಹೊಸ ಹಂಗಾಮಿ ಕೇಂದ್ರದಲ್ಲಿ ಮುಂಬಯಿ ಪ್ರಾಂತದ ಜಿ. ಆರ್. ತಾ. ಯಿಂದ ಪತ್ತೆ ಹಚ್ಚಲಾಗಿದೆ. ಈ ಟ್ರಸ್ಟ್ ಮುಂದಿನ ಮಾರ್ಗಗಳಲ್ಲಿ ಹಿಂದುಸ್ಥಾನದ ಯಾವ ಭಾಗಕ್ಕೆ ಸುದ್ದಿ ಕಳಿಸಲು ಅಪ್ಪಣೆಯಿಂದ ಹಣ ಇಲ್ಲದೆ ಟೆಲಿಫೋನ ಮೂಲಕ ಕಳುಹಿಸುವ ಹೊಸ ಬೆಲೆಗಳನ್ನು ಈ ರೀತಿ ಕಳುಹಿಸುತ್ತಿದ್ದುದರಿಂದ ಸರಕಾರಕ್ಕೆ ಲಕ್ಷಗಟ್ಟಲೆ ರೂಪಾಯಿ ಹಾನಿ ಆಗುತ್ತಿತ್ತು. ಈ ಬಗ್ಗೆ ಇಬ್ಬರನ್ನು ಬಂಧಿಸಲಾಗಿದ್ದಾರೆ.

ಶೀಘ್ರವಾಗಿ ಯೋಜನೆಯು ಅಂತ್ರಿಕ ವಿವರಗಳಿಗೆ ನನ್ನ ಕೆಲಸವಾಗಿದೆಯೆಂದೂ ಮುಕ್ತ ಯೋಜನೆಯ ಕಾರ್ಯವನ್ನು ಕೂಡಲೆ ಪ್ರಾರಂಭಿಸಲು ಅಪ್ಪಣೆ ಕೊಡಬೇಕಾಗುವದೆಂದೂ ಮುಂಬಯಿ ಸರಕಾರವು ಜಿ. ಆರ್. ಮುಖಾಂತರ ಸಾರಿದೆ.

ತಿಥಾಮಾ ಜಿಲ್ಲೆಯಲ್ಲಿ ಮದ್ರಾಸ ಎಕ್ಸ್‌ಪ್ರೆಸ್ಸನ್ನು ನಿಲ್ಲಿಸಿ ಮುಸಲ್ಮಾನ ನಿರಾಶ್ರಿತರು ಆಕ್ರಮಣ ಮಾಡಿರುವರೆಂದು ಕೊಲ್ಹಾಪುರಕ್ಕೆ ಸುದ್ದಿ ಬಂದಿದ್ದು ಈ ಆಕ್ರಮಣದಲ್ಲಿ ೨ ಜನ ತತ್ಕಾಲ ಮರಣಹೊಂದಿದರೆಂದೂ ೧೫ ಜನರು ಗಾಯಗೊಂಡಿರುವರೆಂದೂ ತಿಳಿಯುತ್ತದೆ.

ಕೊಲ್ಹಾಪುರದ ಸಿಪಾಯರು ನೇಪಾಲವನ್ನು ಜಯಿಸಲಿಕ್ಕೆ ಹೊರಡಬೇಕೆಂದು ದೇವಸ್ಥಾನದ ಹುಂಡಿ ಒಂದು ಕಾರ್ಯ ಪ್ರಾರಂಭವಾಗಿದ್ದರೆಂದು ತಿಳಿದುಬರುತ್ತದೆ.

ಕೊಲ್ಹಾಪುರದ ಗಿರಣಿಯ ಸಂಪು ಇನ್ನೂ ಜಾರಿ ನಡೆದಿದೆ. ಗಿರಣಿಯ ಒಡೆಯರು ಈ ಸಂಪನ್ನು ಅಕ್ರಮವೆಂದು ಸಾರಬೇಕೆಂದು ಕೊಲ್ಹಾಪುರ ನ್ಯಾಯಾಲಯದ ಕಡೆ ಅರ್ಜಿ ಮಾಡಿದ್ದಾರೆ.

ಸರಕಾರೀ ಪ್ರೌಢಶಾಲೆಗೆ ಕೊಟ್ಟಷ್ಟು ಭತ್ತೆ ಮತ್ತು ಬೋನಸ್ಸು ಕೊಡಬೇಕೆಂಬ ಬೇಡಿಕೆಯನ್ನು ಅಹಮ್ಮದಾಬಾದ ನಗರ ಸಭೆಯವರು ಮನ್ನಿಸದಿದ್ದರಿಂದ ನಗರ ಸಭೆಯ ಪ್ರಾಥಮಿಕ ಶಾಲೆಗಳ ೧೫೦೦ ಶಿಕ್ಷಕರು ತಾ. ೧೫ ರಿಂದ ಸಂಪು ಹೂಡಿದ್ದಾರೆ. ಪ್ರಾಥಮಿಕ ಶಾಲಾ ಶಿಕ್ಷಕ ಸಂಘದ ಅಧ್ಯಕ್ಷರಾದ ಶ್ರೀ. ಠಕೋರೆಯವರು ನಗರ ಸಭೆಯ ಸ್ಕೂಲಬೋರ್ಡಿನ ಉಪಾಧ್ಯಕ್ಷ ಪದಕ್ಕೆ ರಾಜೀನಾಮೆ ಕೊಟ್ಟು ಸಂಪಿನ ನೇತೃತ್ವ ವಹಿಸಿದ್ದಾರೆ.

ಅಹಮ್ಮದಾಬಾದ ಗಿರಣಿ ಒಡೆಯರ ಸಂಘದವರು ಪ್ರಾರಂಭಿಸಿದ ಜವಳಿ ಮತ್ತು ಇತರ ಉದ್ಯೋಗಗಳ ಸಂಶೋಧಕ ಸಂಸ್ಥೆಯನ್ನು ಸ್ಥಾಪಿಸುವ ಬಗ್ಗೆ ಮುಂಬಯಿ ಗವರ್ನರರು ಅವರನ್ನು ಅಭಿನಂದಿಸಿದರು. ಈ ಬಗ್ಗೆ ಈಗಾಗಲೇ ೫೦ ಲಕ್ಷ ರೂಪಾಯಿ ಸಂಗ್ರಹವಾಗಿದ್ದು ಅದರಲ್ಲಿ ೧೫ ಲಕ್ಷ ರೂ. ಗಳನ್ನು ಮುಂಬಯಿ ಸರಕಾರವು ಕೊಟ್ಟಿದೆ.

ರಾಜಕೋಟದಿಂದ ಅಹಮ್ಮದಾಬಾದಕ್ಕೆ ವಿಮಾನದಿಂದ ಬಂದ ಮೂವರು ಅರಬರನ್ನು ಶೋಧಿಸಲಾಗಿ ಅವರ ಹತ್ತರ ೩॥ ಲಕ್ಷ ರೂಪಾಯಿ ಬೆಲೆಯ ಬಂಗಾರದ ಗಟ್ಟಿಗಳು ಸಿಕ್ಕಿದುದರಿಂದ ಕೂಡಲೆ ಅವರನ್ನು ಬಂಧಿಸಲಾಗಿದೆ.

ಮುಂಬಯಿಯ ಮಲಬಾರ ಹಿಲ್ ಎಂಬಲ್ಲಿಂದ ಕೋಟೆಗೆ ಹೋಗುವ ಒಂದು ಬಸ್ಸು ಚೌಪಾಟಿಯಲ್ಲಿ ಹೊರಳುವಾಗ ಅಪಘಾತಕ್ಕೀಡಾಗಿ ೩೦ ಜನರನ್ನು ಗಾಯಗೊಳಿಸಿತು. ಕೆಲವು ಚಿಂತಾಜನಕ ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಲಾಗಿದೆ.

ಮುಂಬಯಿ ಸರಕಾರವು ಆಹಾರ ಪರಿಸ್ಥಿತಿಯು ಕೆಟ್ಟ ಗೋದಾಮಗಳನ್ನು ಆಹಾರದ ಅಭಾವದಿಂದ ಜನರು ಸಾಯುವದನ್ನು ನೋಡುತ್ತ ಸುಮ್ಮನಿರದು. ಪರಿಸ್ಥಿತಿಯು ಹದಗೆಟ್ಟಿಲ್ಲ. ಸರಕಾರವು ಕೈಕೊಂಡ ಉಪಾಯಗಳನ್ನು ಕೈಕೊಳ್ಳುವದು ಎಂದು ನಾಗರಿಕ ಪೂರೈಕೆ ಮಂತ್ರಿಗಳಾದ ಶ್ರೀ ದಿನಕರರಾವ ದೇಸಾಯಿ ಅವರು ತಾ. ೧೫ ರಂದು ಪೂನಾ ಜಿಲ್ಲೆಯ ತಮ್ಮ ಪ್ರವಾಸ ಕಾಲದ ಭಾಷಣದಲ್ಲಿ ಹೇಳಿದರು.

ಬಿಹಾರ

ದರ್ಭಾಂಗಾ ಜಿಲ್ಲೆಯಲ್ಲಿ ೮ ಸಾವಿರ ಮುಸಲ್ಮಾನರು, ಮೊದಲು ಮುಸ್ಲಿಂ ಲೀಗಿನಲ್ಲಿದ್ದವರು ಈಗ ಕಾಂಗ್ರೆಸ ಪ್ರತಿಜ್ಞಾಪತ್ರಕ್ಕೆ ಸಹಿಹಾಕಿ ಕಾಂಗ್ರೆಸ ಸಭಾಸದರಾಗಿ ಸೇರಿರುವರೆಂದು ಪಾಟ್ನಾದಿಂದ ಸುದ್ದಿ ಬಂದಿದೆ.

ಮದ್ರಾಸ

ಮದ್ರಾಸ ಕಾರ್ಪೋರೇಶನ್ನವರು ಮುಂಗಡ ಪತ್ರದಲ್ಲಿ ಮಹಾತ್ಮರ ಸ್ಮಾರಕಕ್ಕಾಗಿ ೫೦ ಸಾವಿರ ರೂಪಾಯಿ ತೆಗೆದಿಟ್ಟಿದ್ದಾರೆ.

ಮದ್ರಾಸ ಪ್ರಾಂತದಲ್ಲಿ ಇಲೆಕ್ಟ್ರಿಕ್ ಕೆಮಿಕಲ್ ರಿಸರ್ಚ ಸಂಸ್ಥೆಯನ್ನು ಸ್ಥಾಪಿಸಿ ರಾಸಾಯನಿಕ ಸಂಶೋಧನೆ ನಡೆಸುವವರಿರುವರು. ಈ ಸಂಸ್ಥೆಗೆ ಡಾ. ಅಲಗಪ್ಪ ಚೆಟ್ಟಿಯಾರರು ೧೫ ಲಕ್ಷ ರೂಪಾಯಿ ದಾನ ಮಾಡಿದ್ದಾರೆ ಇಲ್ಲಿ ಪೊಟ್ಯಾಶ್ ಕ್ಲೋರೇಟ ಮೊದಲಾದವುಗಳನ್ನು ತಯಾರಿಸುವರು.

ವಿಶಾಖಾ ಪಟ್ಟಣದಲ್ಲಿ ಸೇರಿದ ಒಂದು ಲಕ್ಷ ಜನರ ಪ್ರಚಂಡ ಸಭೆಯಲ್ಲಿ ಭಾಷಣಮಾಡುತ್ತ ಭಾರತದ ಮುಖ್ಯಮಂತ್ರಿ ಪಂಡಿತ ಜವಾಹರಲಾಲರು, ಆಂಧ್ರ ಪ್ರಾಂತದ ನಿರ್ಮಾಣದ ಬೇಡಿಕೆಯನ್ನು ಮನ್ನಿಸಲಾಗಿದೆಯೆಂದೂ ಹೈದರಾಬಾದ ಮುಸ್ಲಿಂ ಮುಖಂಡರು ತಲೆಕೆಟ್ಟವರಂತೆ ವರ್ತಿಸುವರೆಂದೂ ಅದರಿಂದ ಹೈದರಾಬಾದಕ್ಕೆ ಕೇಡು ತಟ್ಟುವದೆಂದೂ ಹೇಳಿದವಲ್ಲದೆ ಅಹಾರದ ಕೊರತೆಯು ಮಾತೃಭೂಮಿಯವರನ್ನೂ ಉಪವಾಸಕ್ಕೆ ಬಲಿ ಕೊಡುವದಿಲ್ಲವೆಂದು ಆಶ್ವಾಸನವಿತ್ತರು.

ಹೈದರಾಬಾದ

ನಿಜಾಮ ಸರಕಾರದವರು ಹೈದರಾಬಾದದ ವಕ್ತ ಹಾಗೂ ಇತ್ತೇಹಾದ ಎಂಬ ಎರಡು ಉರ್ದು ಪತ್ರಿಕೆಗಳಿಗೆ ಎಲ್ಲ ಲೇಖ ಮತ್ತು ಟೀಕೆಗಳನ್ನು ಪ್ರಕಟಿಸುವ ಮೊದಲು ೧೫ ದಿನ ಪರಿಶೀಲನೆಗೆ ಒಪ್ಪಿಸಬೇಕೆಂದು ವಿಧಿಸಿದ್ದಾರೆ. ಶಾಂತತೆಗೆ ಧಕ್ಕೆ ತರುವಂತಹ ಕೆಲವು ಲೇಖ ಇತ್ತೀಚೆ ಪ್ರಕಟವಾದದ್ದೇ ಈ ಆಜ್ಞೆಗೆ ಕಾರಣ.

ನಿಜಾಮರು ಆಂಧ್ರ ವಿಶ್ವವಿದ್ಯಾಲಯದ ಪದವೀದಾನ ಭವನದ ಕಟ್ಟಡ ಹಾಗೂ ಅದರ ಅವಶ್ಯಕ ಸಲಕರಣೆಗಳಿಗಾಗಿ ೨ ಲಕ್ಷ ರೂಪಾಯಿ ಮಂಜೂರ ಮಾಡಿದ್ದಾರೆ. ಹೈದರಾಬಾದ ಹಾಗೂ ಆಂಧ್ರದ ನಡುವಿನ ಸಾಂಸ್ಕೃತಿಕ ಸಂಬಂಧವನ್ನು ಬಲಪಡಿಸಲು ವಿಶ್ವವಿದ್ಯಾಲಯವು ಹೆಣಗುವದೆಂದು ನಿಜಾಮರು ಆಶಿಸುವರಲ್ಲದೆ ಜಾತೀಯ ಸೌಹಾರ್ದವನ್ನೂ ಅದು ದೃಢಪಡಿಸುವದೆಂದು ಅವರು ನಂಬಿದ್ದಾರೆ.

ಡಾ. ಸಯ್ಯದ ಅಬ್ದುಲ ಲತೀಫ ತಾ. ೧೫ ರಂದು ಒಂದು ಪ್ರಕಟನೆ ಹೊರಡಿಸಿ ಮಜಲೀಸ ಇತ್ತೇಹಾದುಲದ ಅಧ್ಯಕ್ಷರಾದ ರಜವಿಯವರಿಗೆ ಸರಕಾರವನ್ನು ಕೊಡತಕ್ಕಲ್ಲಿ ಸಿಗಿಸಬಾರದೆಂದೂ ಹೈದರಾಬಾದದ ರಾಜಕೀಯ ಜೀವನವನ್ನು ಮತ್ತಷ್ಟು ಗಡುಚಾಗಿ ಮಾಡಬಾರದೆಂದೂ ವಿನಂತಿಸಿದ್ದಾರೆ. ರಜವಿಯವರ ಘಾತಕ ಧೋರಣವನ್ನು ಪ್ರತಿಭಟಿಸಿ ಸರಿಯಾದ ಹೆಜ್ಜೆ ಹಾಕಬೇಕೆಂದು ಅವರು ಹೈದರಾಬಾದ ಮುಖ್ಯ ಪ್ರಧಾನರ ದರ್ಬಾರ ಅಲಿ ಅವರಿಗೆ ಸಲಹೆ ಕೊಟ್ಟು ಇದಾಗದಿದ್ದರೆ ಮಂತ್ರಿಪದಕ್ಕೆ ರಾಜೀನಾಮೆ ಕೊಡಬೇಕೆಂದೂ ಸೂಚಿಸಿದ್ದಾರೆ.

ನಗರ, ಕರ್ನೂಲ ಹಾಗೂ ಮಹಬೂಬ ನಗರ ಜಿಲ್ಲೆಗಳ ವಕೀಲರು ಅಧಿಕಾರಿಗಳ ದಬ್ಬಾಳಿಕೆಯ ನಿಷೇಧಾರ್ಥವಾಗಿ ಕೋರ್ಟುಗಳಿಗೆ ಬಹಿಷ್ಕಾರ ಹಾಕಿರುವರೆಂದು ವಕೀಲರ ಸಂಘದ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಪರಭಣಿ ಜಿಲ್ಲೆಯ ಹನುಮಂತಪದಲ್ಲಿದ್ದ ನಾಗನಾಥ ಮೂರ್ತಿಯ ಜೋಡಿ ಮಾರ್ಚ ೨ ಕ್ಕೆ ಯಾರೋ ಒಬ್ಬ ಬಾಂಬು ಎಸೆದಿದ್ದರಿಂದ ೩ ಜನರು ಸತ್ತಿದ್ದು ೩೩೦ ಜನರಿಗೆ ಗಾಯಗಳಾಗಿವೆ. ೧೫ ಸಾವಿರ ಜನರು ಮೂರ್ತಿಯ ಪಲ್ಲಕ್ಕಿ ಸೇವೆ ಮಾಡುತ್ತಿರುವಾಗ ಈ ಬಾಂಬು ಸಿಡಿಸಲಾಯಿತು ಎಂದು ಔರಂಗಾಬಾದದಿಂದ ಸುದ್ದಿ ಬಂದಿದೆ. ಗಾಯಾಳುಗಳಿಗೆ ಕೂಡಲೆ ವೈದ್ಯಕೀಯ ಸಹಾಯವನ್ನು ಒದಗಿಸಲಾಯಿತು.

ಹೈದರಾಬಾದ ಮುಂಬಯಿ ಸರಕಾರಗಳ ಪೋಲೀಸ ಮಹಾಧಿಕಾರಿಗಳು ದುಂದುಮೋಜಿನ ಪರಿಷತ್ತು ಸೇರಿಸಿ ಮುಂಬಯಿ ಹೈದರಾಬಾದ ಸರಹದ್ದು ದುರ್ಘಟನೆಗಳನ್ನು ಪರಿಶೀಲಿಸಿದರು. ಅಧಿಕಾರಿಗಳು ಔರಂಗಾಬಾದ ಜಿಲ್ಲೆಯ ಸರಹದ್ದಿನ ಭಾಗದಲ್ಲಿ ಸಂಚರಿಸಿದರು. ದುರ್ಘಟನೆಗಳನ್ನು ಮತ್ತೆ ನಡೆಯಗೊಡದಂತೆ ಕೈಕೊಳ್ಳಬೇಕೆಂದು ತೀರ್ಮಾನಿಸಲಾಯಿತು.

ಹೊಸದಿಲ್ಲಿ

ಭೋಪಾಳದ ನವಾಬರು ತಾ. ೧೫ ರಂದು ಒಂದು ಘೋಷಣೆ ಹೊರಡಿಸಿ ಯಾವದೇ ಪ್ರಾಂತದಲ್ಲಿ ಅಥವಾ ಯಾವದೇ ಒಕ್ಕೂಟದಲ್ಲಿ ಭೋಪಾಳವು ಸೇರುವದಿಲ್ಲವೆಂದು ಖಂಡಿತವಾಗಿ ಸಾರಿದ್ದಾರೆ. ಸಂಸ್ಥಾನದಲ್ಲಿ ಹೊಣೆಗಾರ ಸರಕಾರ ಸ್ಥಾಪಿಸುವದಾಗಿಯೂ ಸಂಸ್ಥಾನದ ಹಳ್ಳಿಗಳ ಹಿತಕ್ಕಾಗಿ ವಿಶೇಷ ಹಣವನ್ನು ವಿನಿಯೋಗಿಸುವದಾಗಿಯೂ ಘೋಷಣೆಯಲ್ಲಿ ಹೇಳಿದ್ದಾರೆ.

ಕಾಶ್ಮೀರದ ಸಮಸ್ಯೆಯು ಭದ್ರತಾ ಮಂಡಲದೆದುರು ಬಂದು ಎರಡೂವರೆ ತಿಂಗಳಾದರೂ ಇನ್ನೂ ಕಾಶ್ಮೀರದ ಕಾಳಗ ನಿಲ್ಲಿಸಲು ಅದು ಯಾವ ಪ್ರಯತ್ನವನ್ನೂ ಮಾಡಿಲ್ಲ. ಭದ್ರತಾಮಂಡಲವು ತನ್ನ ಕರ್ತವ್ಯವನ್ನೂ ಹೊಣೆಯನ್ನೂ ಸರಿಯಾಗಿ ನಿರ್ವಹಿಸಿಲ್ಲ ಎಂದು ಮೊದಲಾಗಿ ಭಾರತ ಪ್ರತಿನಿಧಿ ಮಂಡಲದ ಧುರೀಣರಾದ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರು ೧೩ ರಂದು ನ್ಯೂಯಾರ್ಕ ಬಾನುಲಿಯಲ್ಲಿ ಮಾತನಾಡುತ್ತ ಹೇಳಿದರು.

ತಾ. ೧೫ ರಂದು ಹಿರಿಯೋಲಗದಲ್ಲಿ ಸಂಸ್ಥಾನ ಶಾಖೆಯ ಅರ್ಥಿಕ ಬೇಡಿಕೆಗೆ ಮಂಡಿಸಲ್ಪಟ್ಟ ಕಡಿತದ ಸೂಚನೆಯ ಬಗ್ಗೆ ಮಾತನಾಡುತ್ತ ಶ್ರೀ ಮುನವಳ್ಳಿಯವರು, ರಾಮದುರ್ಗ ಪ್ರಜೆಗಳ ಹೋರಾಟವನ್ನು ೧೯೩೯ ರಲ್ಲಿ ಸಂಭವಿಸಿದ ದುರ್ಘಟನೆಗಳನ್ನು ವಿವರಿಸಿ ಆಗ ಪ್ರಜಾ ಸಂಘದ ಅಧ್ಯಕ್ಷ ಮೊದಲಾದವರ ಜಪ್ತಾದ ಆಸ್ತಿಪಾಸ್ತಿಯನ್ನು ಸರಕಾರವು ಮರಳಿ ಕೊಡಿಸಬೇಕೆಂದು ಬಿನ್ನವಿಸಿದರು.

ಅಂತರ ರಾಷ್ಟ್ರೀಯ ತಾತ್ಪೂರ್ತಿಕ ಆಹಾರ ಸಮಿತಿಯು ಹಿಂದುಸ್ಥಾನಕ್ಕೆ ೧೬೧೧೪೦ ಮೆಟ್ರಿಕ ಟನ್ ಅಕ್ಕಿಯನ್ನು ಕೊಡಮಾಡಿದ್ದು ಜಾನೇವರಿಯಿಂದ ಜೂನ ಅಂತ್ಯದ ಅವಧಿಯಲ್ಲಿ ೬೫೦, ೧೦ ಮೆಟ್ರಿಕ ಟನ ಅಕ್ಕಿಯನ್ನು ಕೊಡಮಾಡಿದೆ. ಬರ್ಮಾದಿಂದ ೫೧೧೦೦, ಇಜಿಪ್ತದಿಂದ ೨೩೦೦೦ ಸಯಾಮದಿಂದ ೧೫೦೦೦, ಯುಕಡೋರದಿಂದ ೬೦೦೦ ಮೆಕ್ಸಿಕೋದಿಂದ ೬೦೦೦ ಟನ ಅಕ್ಕಿ ದೊರೆಯುವದು.

ಹಿಮಾಲಯ ಪ್ರಾಂತದಲ್ಲಿ ಹಿಂದೀ ಒಕ್ಕೂಟದ ಸಂಸ್ಥಾನಗಳ ಆರ್ಥಿಕ, ಭೌಗೋಲಿಕ, ಸಾಂಸ್ಕೃತಿಕ ರೀತಿಯಿಂದ ಅಭಿನ್ನವಿರುವ ಪ್ರದೇಶಗಳನ್ನು ಸೇರಿಸಬೇಕೆಂದೂ ಹೊಸದಾಗಿ ಸ್ಥಾಪಿತವಾದ ಈ ಪ್ರಾಂತವನ್ನು ಹಿಮಾಲಯಪ್ರಾಂತವೆಂದು ಕರೆಯಬೇಕೆಂದೂ ಹಿಂದೀ ಸರಕಾರದ ಸಂಸ್ಥಾನ ಶಾಖೆಯನ್ನು ಕೇಳಿಕೊಳ್ಳಬೇಕೆಂದೂ ಹಿಮಾಲಯ ಸಂಸ್ಥಾನಗಳ ಪ್ರಜಾ ಪರಿಷತ್ತು ನಿರ್ಧರಿಸಿತು. ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿ ಅಂದೋಲನದಲ್ಲಿ ಹಾನಿಗೊಂಡವರಿಗೆ ಪರಿಹಾರವೀಯಲು ಕೇಳಿಕೊಂಡಿತು.

ಅಳ್ವಾರ ಸಂಸ್ಥಾನದ ಅಧಿಕಾರಿಗಳು ಆರ್. ಎಸ್. ಎಸ್. ಸಂಘಕ್ಕೆ ಬೆಂಬಲವಿತ್ತುದನ್ನು ಶೋಧಿಸುವದಕ್ಕಾಗಿ ಅಳ್ವಾರ ಮಹಾರಾಜರನ್ನು ಸಂಸ್ಥಾನದಿಂದ ಗಡಿಪಾರು ಮಾಡಿದ್ದನ್ನು ಹಿಂತೆಗೆದುಕೊಂಡು ತಮ್ಮ ಸಂಸ್ಥಾನದಲ್ಲಿ ಪ್ರವೇಶಿಸಲು ಅವರಿಗೆ ಅಪ್ಪಣೆ ಕೊಡಲಾಗಿದೆ. ನಾಗಪುರಕ್ಕೆ ಬಂದ ಡಾ. ಖರೆಯವರ ಮೇಲೆ ಪ್ರಾಂತಿಕ ಸರಕಾರವು ಒಂದು ನೋಟೀಸು ಪ್ರಯೋಗಿಸಿ ನಾಗಪುರದ ನಗರ ಸಭೆಯ ಸೀಮೆಯನ್ನು ಅಪ್ಪಣೆಯಿಲ್ಲದೆ ಬಿಟ್ಟು ಹೋಗಬಾರದೆಂದು ವಿಧಿಸಿದೆ.

ಕಲಕತ್ತಾ

ಆಸಾಮ ರೇಲ್ವೆಯ ಸತ್ತಗ್ರಾಮ ಹಾಗು ತಿಪ ಕಾಯಿ ಸ್ಟೇಶನುಗಳ ನಡುವೆ ಪ್ರವಾಸಿಕರ ಉಗಿಬಂಡಿಯು ಹಳಿಬಿಟ್ಟು ಸರಿದು ೨೪ ಜನರಿಗೆ ಗಾಯ ಸಂಭವಿಸಿದೆಯೆಂದು ತಿಳಿಯುತ್ತದೆ.

ಪಶ್ಚಿಮ ಬಂಗಾಲದ ಪುನರ್ನಿವೇಶನ ಮಂತ್ರಿಗಳು ಪತ್ರಿಕಾ ಪರಿಷತ್ತಿನಲ್ಲಿ ಮಾತನಾಡುತ್ತ ನಿರಾಶ್ರಿತರ ಬಗ್ಗೆ ಹೀಗೆ ಹೇಳಿದರು. ಸರಕಾರವು ಪಡ ಭೂಮಿಗಳನ್ನು ವಶಪಡಿಸಿಕೊಳ್ಳಲು ಬೇಗನೇ ಕಟ್ಟಳೆ ಮಾಡುವದು ೩೦ ಲಕ್ಷ ಎಕರೆ ಭೂಮಿಯನ್ನು ಪೂರ್ವ ಪಂಜಾಬದ ನಿರಾಶ್ರಿತರಿಗೆ ಕೊಡಲಾಗುವದು. ನಿರಾಶ್ರಿತರ ಸದ್ಯದ ವಸತಿಗಾಗಿ ಕೆಲ ಸೈನ್ಯ ಠಾಣೆಗಳನ್ನು ವಶಪಡಿಸಿಕೊಳ್ಳುವದು ನಿಶ್ಚಿತವಾಗಿದೆ.

ಪಾಕಿಸ್ತಾನ

ಹಿಂದುಸ್ಥಾನ ಸರಕಾರ, ರಿಝರ್ವ ಬ್ಯಾಂಕ ಮತ್ತು ಪಾಕಿಸ್ತಾನ ಸರಕಾರದ ಪ್ರತಿನಿಧಿಗಳ ಸಭೆಯು ಮುಂಬಯಿಯಲ್ಲಿ ಇದೇ ತಿಂಗಳ ತಾ. ೧೧ ಕ್ಕೆ ಸೇರಿತ್ತು. ಅದರಲ್ಲಿ ಪಾಕಿಸ್ತಾನ ಸರಕಾರವು ಕೂಡಲೇ ನಾಣ್ಯ ಚಲನದ ಕಾರ್ಯ ಕೈಕೊಳ್ಳಕೂಡದೆಂದೂ ಹಿಂದುಸ್ಥಾನ ಪಾಕಿಸ್ತಾನಗಳ ನಾಣ್ಯ ವಿನಿಮಯದ ದರದಲ್ಲಿ ಅಂತರವಾಗತಕ್ಕದ್ದಲ್ಲವೆಂದೂ ನಿಶ್ಚಯಿಸಲಾಯಿತು ಇದಕ್ಕೆ ಪಾಕಿಸ್ತಾನ ಸರಕಾರವೂ ಒಪ್ಪಿಕೊಂಡಿದೆ. ರಿಝರ್ವ ಬ್ಯಾಂಕಿನ ಬದಲು ಪಾಕಿಸ್ತಾನ ರಾಷ್ಟ್ರೀಯ ಸೆಂಟ್ರಲ ಬ್ಯಾಂಕನ್ನು ೩ ಕೋಟಿ ರೂ. ಬಂಡವಲದಿಂದ ಸ್ಥಾಪಿಸಬೇಕೆಂದು ಪಾಕಿಸ್ತಾನದ ವಿಚಾರವಿದೆ. ಎಪ್ರಿಲ ೧ ನೇ ತಾ. ೩ಿಂದ ಈಗಿದ್ದ ನೋಟಿನ ಮೇಲೆ ಪಾಕಿಸ್ತಾನ ಸರಕಾರದ ಮುದ್ರೆ ಒತ್ತಿ ಪಾಕಿಸ್ತಾನವು ಬಳಕೆಯಲ್ಲಿ ತರುವದಾಗಿ ತಿಳಿಯುತ್ತದೆ.

ಶ್ರೀ ಚಾಂದವಾಲಾರು ಸಿಂಧದ ನಿರಾಶ್ರಿತರ ಸ್ಥಳಾಂತರದ ಬಗ್ಗೆ ಮಾತನಾಡುತ್ತ, ಸಿಂಧ ಹೈದರಾಬಾದದಿಂದ ಮಾರವಾಡಕ್ಕೆ ರೈಲು ದಾರಿಗೆ ಪ್ರಾರಂಭಿಸಲು ಅಧಿಕಾರಿಗಳು ನಿರ್ಧರಿಸಿದ್ದಾರೆ. ಈಗಾಗಲೇ ಸಿಂಧದಿಂದ ೮ ಲಕ್ಷ ನಿರಾಶ್ರಿತರನ್ನು ಸ್ಥಳಾಂತರಿಸಿದ್ದು ಇದೇ ವೇಳೆಯೊಳಗಾಗಿ ಇನ್ನೂ ೩ ಲಕ್ಷ ಜನರನ್ನು ಸ್ಥಳಾಂತರಿಸಬಹುದೆಂದು ಹೇಳಿದರು. ಪ್ರತಿ ತಿಂಗಳು ಒಂದು ಲಕ್ಷ ನಿರಾಶ್ರಿತರನ್ನು ಸ್ಥಳಾಂತರಿಸಬಹುದೆಂದು ಅಂದಾಜು ಮಾಡಲಾಗಿದೆ.

ಕರಾಚಿಯಲ್ಲಿ ಎರಡಾಣೆಯ ಖೊಟ್ಟಿ ನಾಣ್ಯಗಳು ಬಹಳಾಗಿವೆಯೆಂದು ಕಂಡು ಬಂದದ್ದರಿಂದ ಅನೇಕರು ತಾ ೧೫ ರಂದು ರಿಝರ್ವ ಬ್ಯಾಂಕಿನಲ್ಲಿ ಅವನ್ನು ಕೊಟ್ಟು ಬೇರೆ ನಾಣ್ಯಗಳನ್ನು ಪಡೆದರು. ರಿಝರ್ವ ಬ್ಯಾಂಕಿನ ಮ್ಯಾನೇಜರರು, ಕರಾಚಿಯ ನಾಗರಿಕರು ಈ ಹಿತ್ತಾಳೆಯ ಎರಡಾಣೆಯ ನಾಣ್ಯಗಳನ್ನು ಸ್ವೀಕರಿಸುತ್ತಿಲ್ಲವೆಂದು ತಿಳಿದು ಬಂದಿದೆಯಾದರೂ ಇನ್ನೂ ಬಹಳ ನಾಣ್ಯ ಚಲಾವಣೆಯಲ್ಲಿ ಉಂಟೆಂದು ತಿಳಿಸಿದರು.

ಎರಡು ಕಿರುಗತೆಗಳು

ಕಾಳಿ ದೊರೆಯಿತು

(ಲೇಖಕರು— ಶ್ರೀ. ಕನ್ನಡ ಕುವರ ವಿಜಾಪೂರ)

ಸಾಯಂಕಾಲವಾಯಿತು. ದನಗಳನ್ನೆಲ್ಲಾ ದಟ್ಟಿಗೆ ಕೂಡಿಸಿ ಆಯಿತು. ಆದರೂ ಆ ಹಾಳು ಕಾಳಿ ಹಸುವು ಇನ್ನೂ ಬಂದಿರಲಿಲ್ಲ. ಯಾವಾಗಲೂ ಇದೇ ಹಿಂಡಿನ ಜತೆಯಲ್ಲಿ ಬರುತ್ತಿದ್ದ ಅದು ಈ ದಿನ ತಪ್ಪಿಸಿಕೊಂಡಿತ್ತು. ಮಾದನಿಗೆ ತುಂಬಾ ಭಯವಾಯಿತು. ಹುಡುಕೋಣ ಎಂದರೆ ಕತ್ತಲಾಗಿದೆ. ಆದರೂ ದನ ಬಾರದೇ ಗುಡಿಸಲಿಗೆ ಹೋದರೆ ಅವನ ಚಿಕ್ಕಮ್ಮ ಸುಮ್ಮನೆ ಬಿಡುವಳೇ? ಅವಳಿಗೆ ಅಮ್ಮನವರ ಹೆದರಿಕೆ. ಮಾದನು "ಅಂಬಾ, ಅಂಬಾ!" ಎಂದು ಆ ಹಸುವನ್ನು ಕರೆದನು ಕತ್ತಲಾಯಿತು. ಮಾದನ "ಅಂಬಾ" ಧ್ವನಿಯು ಕತ್ತಲೆಯಲ್ಲಿ ವಿಚಿತ್ರವಾಗಿ ಅವನಿಗೆ ಇನ್ನೂ ಭಯವನ್ನು ಹುಟ್ಟಿಸಿತು. ಅವನು ಬಹು ದುಃಖದಿಂದ ಹಿಂತಿರುಗಿ ಗುಡಿಸಲಿಗೆ ಹೋದನು. ಸೋಮಿಗೆ ಕಾಳಿಯು ಹಿಂಡಿನಲ್ಲಿ ಬರದಿದ್ದುದನ್ನು ಅಳುತ್ತಾ ಹೇಳಿದನು.

ಅವಳು ಸಿಟ್ಟಿನಿಂದ ಕಿಡಿಯಾಗಿ, "ಏ ಕಳ್ಳ ಹೈದಾ! ನಿನ್ನ ಹೆಣ ಸುಡರೆ? ಚಿನ್ನದಂತಹ ಹಸು ಬರದಿದ್ದರೆ ನಾನು ಅಮ್ಮನಿಗೇನು ಹೇಳಲಿ? ನೀನು ಪೋಲಿ ಪೋಲಿ ತಿರುಗಲಿಕ್ಕಾದಿಯ? ಹಗಲಿಡೀ ಏನು ಮಾಡುತ್ತಿದ್ದೆ? ಈಗ ಅಪ್ಪೂ ಮನೆಯಲ್ಲಿಲ್ಲ. ನೀನು ಅದನ್ನು ಹುಡುಕಿ ತರದಿದ್ದರೆ ಇಲ್ಲಿ ಕಾಲೇ ಇಡಬೇಡ" ಎಂದು ಗುಡುಗಿ ಅವನನ್ನು ಹೊರಗೆ ತಳ್ಳಿ ಬಾಗಿಲನ್ನು ಧಡಾರನೆ ಹಾಕಿದಳು. ಅವಳು ಸಣ್ಣ ಮಗನೊಡನೆ ಊಟ ಮಾಡಿ ಮಲಗಿದಳು.

ಮೊದಲೇ ಈ ತರಹದ ಉಪಟಳಗಳಿಂದ ನೊಂದಿದ್ದ ಮಾದನ ಶಿಶುಹೃದಯಕ್ಕೆ ಇದು ವಜ್ರಾಘಾತದಂತಾಯಿತ್ತು. ಮಾದನಿಗೆ ಮಾತಾಡಲೂ ಆಗಲಿಲ್ಲ; ಅಳುವೂ ಬಾರದು. ಸುತ್ತಲೂ ಕಾಡು ಜೀರ್ ಎನ್ನುತ್ತಿತ್ತು. ಚಂದ್ರನಾಗಲೇ ಮೂಡಿ, ಹಾಲಿನಂತಹ ಪ್ರಕಾಶವನ್ನು ಸುರಿಯುತ್ತಿದ್ದನು. ಆದರೆ ಚಂದ್ರನು ಮಾದನ ಎದೆಯಲ್ಲಿ ಧಗಧಗಿಸುತ್ತಿದ್ದ ದಾವಾನಲವನ್ನು ತಣಿಯಿಸಲಾರ. ಒಂದು ಕುರುಡು ನೊಣವು ಘೊಂಯ್ಯೆಂದು ಬಂದು ಮಾದನ ಕೆದರಿದ ತಲೆಗೆ ಹೊಡೆದು ಹಾರಿಹೋಯಿತು. ಕೊಟ್ಟಿಗೆಯಿಂದ ಕಾಳಿಯ ಎರಡು ತಿಂಗಳು ಕರು "ಅಂಬೇ" ಎಂದು ಕೂಗಿತು. ಮಾದನು ಹಸುವನ್ನು ಹುಡುಕುತ್ತ ಅಲ್ಲಿಂದ ಮುಂದೆ ನಡೆದನು.

ಕಾಡು ಇಡೀ ಭಯಂಕರವಾಗಿ ನಿಂತಿದೆ. ಶಬ್ದವೇ ಕಡಿಮೆ. ರಾತ್ರಿ ಏರುತ್ತಿತ್ತು. ಚಂದ್ರನು ಮೃದುವಾಗಿ ಹಿತಕರವಾಗಿ ಇದ್ದನು. "ಅಂಬಾ, ಅಂಬಾ" ಎಂದು ರೋದನ ಧ್ವನಿಯಿಂದ ಕೂಗುತ್ತ ಆ ಕಾಡಿನಲ್ಲಿ ದೇಹದ ಪರಿವೆಯೇ ಇಲ್ಲದಂತೆ ಮಾದನು ಹೋಗುತ್ತಿದ್ದನು. ಮರದ ನೆರಳು ದೊಡ್ಡದಾಗಿ ತೋರುವಲ್ಲಿ ಹೋಗಿ "ಅಂಬಾ." ಎಂದು ಕೂಗುವನು. ಕಾಳಿ ಇಲ್ಲ. ಬಿದಿರು ಹಿಂಡಲಿನ ಬುಡಕ್ಕೆ ಹೋಗಿ "ಅಂಬಾ" ಎಂದು ಅಳುವನು. ಬಿದಿರು ಮುಳ್ಳೊಂದು ಆ ಎಳೇ ಪಾದಕ್ಕೆ ಚುಚ್ಚಿ ನೋವುಂಟುಮಾಡುವುದು. ದೂರದಲ್ಲಿ ಕಪ್ಪಾಗಿ ಏನೋ ನಿಂತಿತ್ತು. ಕಾಳಿಯೇ ನಿಂತಿರುವದೆಂದು, ಕೊನೆಗೂ ದೊರೆಯಿತೆಂದು ಸಂತೋಷದಿಂದ, "ಅಂಬಾ, ಬಾ" ಎನ್ನುತ್ತಾ ಅಲ್ಲಿಗೆ ಓಡಿದನು. ಆ ಕರೀ ವಸ್ತುವಿನ ಸ್ಪರ್ಶವಿದನು. ಅದೊಂದು ಮೂಕ, ಜೀವಹೀನ, ಕರುಣಾಹೀನ ಪೊದರು. ಅದರ ಮುಳ್ಳುಗಳು ಮಾದನ ಕೈಗಳನ್ನು ಗೀರಿದುವು. ಆದರೂ ಕಾಳಿಯಿಲ್ಲ. ಅಲ್ಲಿಂದ ಮುಂದೆ ನಡೆದನು. ಮರದ ಬೇರೊಂದನ್ನು ಎಡವಿ ಬಿದ್ದನು. ಗಾಯವಾಯಿತು, ನೋವಾಯಿತು. ಮಾದನು ಮುಂದೆ ಪುಟ್ಟ ಕಾಲುಗಳಿಂದ ನಡೆದೇ ಇದ್ದನು. ಇವನ ಕೂಗಿಗೆ ಇಡೀ ಕಾಡೇ "ಅಂಬಾ, ಅಂಬಾ" ಎಂದು ಮೊಳಗುವಂತಿತ್ತು. ತುಸು ಹೊತ್ತು ಇಡೀ ಮೌನವಾಯಿತು. ದೂರದಿಂದ "ಅಂಬಾ" ಎಂದು ಹಸುವಿನ ಧ್ವನಿಯೇ ಮೆಲ್ಲನೆ ಕೇಳಿತು ಅದು ಮುಳುಗುತ್ತಿದ್ದಂತಹ ಧ್ವನಿ. ಮಾದನು ಧ್ವನಿಯಾಲಿಸಿ ಪುನಃ ಕರೆದು ಆ ಕಡೆಗೆ ಓಡಿದನು. ಕಾಲಿನಲ್ಲಿ ಸುರಿಯುತ್ತಿದ್ದ ರಕ್ತವನ್ನು ಮರೆತನು ಬೆಳಗ್ಗಿನ ಗಂಜಿಯೂಟವಾದ ಮೇಲೆ ಏನೂ ತಿನ್ನದ ಹಸಿವನ್ನೂ ಮರೆತನು. ಇನ್ನೊಮ್ಮೆ ಹತ್ತಿರದಿಂದ ಭೂಮಿಯ ಒಳಗಿನಿಂದ "ಅಂಬಾ" ಎಂದು ಕೇಳಿದ ಹಾಗಾಯಿತು.

ಅಲ್ಲಿ ಸರಕಾರದ ಕಂದಕ (ಅಗೆಳು) ಒಂದು ಇತ್ತು. ಅದು ತೀರ ಇಕ್ಕಟ್ಟಾದದ್ದು. ಅದರೊಳಗೆ ಕಾಳಿಯು ಬಿದ್ದು ಹೋಗಿದೆ. ಕುತ್ತಿಗೆಯ ಒಂದು ಭಾಗಕ್ಕೆ ಮುರಿದು ಹೋಗಿದೆ. ರಕ್ತ ಸುರಿದು ಹೆಪ್ಪುಗಟ್ಟಿದೆ. ಅದರೊಳಗಿಂದ ಅದಕ್ಕೆ ಏಳುವುದು ಹೇಗೂ ಸಾಧ್ಯವೇ ಇರಲಿಲ್ಲ. ಬಿದ್ದಾಗಲೇ ಮೇಲೆ ಎತ್ತಿದ್ದರೆ ಕಾಲೇನಾದರೂ ಮುರಿದು ಹೋಗಬಹುದಾಗಿದ್ದರೂ ಬದುಕಬಹುದಿತ್ತೋ ಏನೋ. ಆದರೆ ಈಗ ಬಹಳ ತಡವಾಗಿತ್ತು. ಆದರೆ ಆರು ವರ್ಷದ, ಸರಳ ಶಿಶು ಹೃದಯದ ಮಾದನಿಗೆ ಅದು ಹೇಗೆ ತಿಳಿಯಬೇಕು? ಮರಗಳ ಸಂದಿನಿಂದ ಬರುತ್ತಿದ್ದ ಚಂದ್ರ ಕಾಂತಿಯಲ್ಲಿ ಅವನು ಕಾಳಿಯ ನುಣ್ಣಗಿನ, ಹೊಳೆಯುವ ಪುಷ್ಟಿಯಾದ ಮೈಯನ್ನು ಕಂಡನು. ಮಾದನು ಓಡಿ ಅದರ ಬೆನ್ನನ್ನು ಸವರಿದನು. ಆದರೆ ಕಾಳಿಗೆ ಏಳಲಾಗುವುದೇ? ಅದರ ಕಣ್ಣುಗಳಿಂದ ನೀರು ಸುರಿಯುತ್ತಿತ್ತು. ಇನ್ನೊಮ್ಮೆ ಕೂಗಲು ಕುತ್ತಿಗೆಯ ನರಗಳನ್ನು ಬಹು ಕಷ್ಟದಿಂದ ಉಬ್ಬಿಸಿತು. ಆದರೆ ಆಗಲಿಲ್ಲ. ಒಂದು ಕ್ಷಣ ಅದರ ಕಣ್ಣುಗಳು ಥಳಥಳನೆ ಕೆಂಡದಂತೆ ಹೊಳೆದುವು. ಮಾದನನ್ನೇ ಅವು ನೋಡಿದುವು. ಮರುಕ್ಷಣವೇ ಕಾಳಿಯು ಸತ್ತು ಹೋಯಿತು. ತನ್ನ ಪ್ರೀತಿಯ ಹುಡುಗ ಮಾದನನ್ನು ನೋಡಲೆಂದೇ ಅದು ಅಷ್ಟು ಹೊತ್ತು ಜೀವ ಹಿಡಿದಹಾಗಿತ್ತು. ಎಷ್ಟೋ ಸಮಯ ಮೂಕ ಪ್ರಾಣಿಗಳಿರುವ ಹೃದಯ ಮನುಷ್ಯರಿಗಿರುವುದಿಲ್ಲ.

ಅದು ಸತ್ತು ಹೋಯಿತು ಎಂದು ಮಾದನಿಗೆ ತಿಳಿಯುವುದಿಲ್ಲ. ಅದಕ್ಕೆ ಅಲ್ಲಿಂದ ಅದು ಎದ್ದು ಬರಬಹುದು ಏಳುವುದು ಎಂದೇ ಅವನ ಯೋಚನೆ. "ಏಳು ಕಾಳೀ!" ಅನ್ನುವನು. ಅದರ ಬೆನ್ನನ್ನು ಸವರುವನು. ಆದರೆ ಕಾಳಿ ನಿಶ್ಚಲ. ಮಾದನು ನೋಡಿದನು, ಅದರ ತಲೆ ಮುಟ್ಟಿದನು. ತಾನು ಏನೂ ಮಾಡಿದರೂ ಪ್ರೀತಿಯಿಂದ ಕಿವಿ ಬಾಲಗಳನ್ನು ಆಡಿಸುತ್ತಿದ್ದ ಕಾಳಿ ಆಗ ಕಲ್ಲುಬಂಡೆಯಂತೆ ಮಲಗಿದೆ. ಮಾದನಿಗೆ ಅಳು ತಡೆಯಲಾಗಲಿಲ್ಲ. ಅಲ್ಲೇ ಕಂದಕದ ಬಳಿಯಲ್ಲಿ ಕುಳಿತು ಕಾಳಿಯ ತಲೆಯ ಮೇಲೆ ತನ್ನ ತಲೆ ಇಟ್ಟು ಅಳತೊಡಗಿದನು.

ಚಂದ್ರನು ನೆತ್ತಿಗೆ ಬಂದಿದ್ದನು ಆ ರಾತ್ರಿ ಎಂದಿಗಿಂತ ಪ್ರಕಾಶವಾಗಿತ್ತು. ಗೂಬೆಯೊಂದು ಭೀಕರವಾಗಿ ಘೂಕರಿಸಿತು. ದೂರದಲ್ಲಿ ನಾಯಿಯೊಂದು ಹುಲಿ ಹಿಡಿದಂತೆ ಕರುಣಾಜನಕವಾಗಿ ಕೂಗಿತು. ಕಾಡಿನ ಹಕ್ಕಿಯೊಂದು ಪಟಪಟನೆ ಹಾರಿ ಹೋಯಿತು. ಚಂದ್ರನನ್ನು ಕರಿಯ ಮೋಡವೊಂದು ಮರೆ ಮಾಡಿತು.

ದೂರದ ಹಳ್ಳಿಗೆ ಗಾಡಿಯ ಸಾಮಾನುಗಳನ್ನು ಮಾಡಿಸಿತರಲೆಂದು ಹೋಗಿದ್ದ ಹೊಲೆಯ ನಿಂಗನು ಆ ರಾತ್ರಿ ಏನೇನೋ ಕೆಟ್ಟ ಸ್ವಪ್ನಗಳನ್ನು ನೋಡಿದನು. ಅವನ ಮೊದಲನೆ ಹೊಲತಿ ಸ್ವಪ್ನದಲ್ಲಿ ಬಂದು "ಮಾದನನ್ನು ಬಿಟ್ಟೆಯಾ?" ಎಂದು ಕಣ್ಣೀರು ಸುರಿಸಿದಳು ಅವನಿಗೆ ನಿದ್ರೆಯೇ ಬಾರದು. ಗುಡಿಸಲಿನಲ್ಲಿ ಏನಾಯಿತೋ ಏನೋ ಎಂದು ಉದ್ವಿಗ್ನತೆಯಿಂದ ರಾತ್ರಿ ಕಳೆದನು. ಬೆಳಗ್ಗೆ ಅಲ್ಲಿಂದ ನೆಂಟರಾರಿಗೂ ತಿಳಿಸದೇ ತನ್ನ ಹಳ್ಳಿಗೆ ಹೊರಟನು. ಆರು ಗಂಟೆಗೆ ಮೊದಲೇ ಅವನು ತನ್ನ ಗುಡಿಸಲಿಗೆ ತಲುಪಿದ್ದನು ಅವನ ಈಗಿನ ಹೊಲತಿ ಸೋಮಿಯು ಇನ್ನೂ ಎದ್ದಿರಲಿಲ್ಲ. ಬಾಗಿಲನ್ನು ಬಡಿದು ಎಬ್ಬಿಸಿದನು.

ದೂರದ ಹಳ್ಳಿಗೆ ಹೋದ ಗಂಡ ಇನ್ನೂ ಎರಡು ದಿನ ಬರುವುದಿಲ್ಲ ಎಂದು ತಿಳಿದಿದ್ದ ಸೋಮಿಗೆ ಅವನನ್ನು ಕಂಡು ದಿಗ್ಭ್ರಮೆಯಾಯಿತು. "ಮಾದನೆಲ್ಲಿ?" ಎಂದು ಅವನು ಕೇಳಿದನು. ಗುಡಿಸಲೊಳಗೆ ಹುಡುಕಿದನು. ಅದು ಹುಡುಕುವಷ್ಟು ದೊಡ್ಡದಾಗಿರಲಿಲ್ಲ. ಅವಳ ಉತ್ತರವಿಲ್ಲ. "ಮಾದನೆಲ್ಲಿ, ಮುಂಡೇ, ಏನು ಮಾಡಿದೆ ಹೇಳು?" ಎಂದು ಇನ್ನೊಮ್ಮೆ ಕೂಗಿದನು. ಸೋಮಿಯು ಸುಧಾರಿಸಿಕೊಂಡು ಹೇಳಿದಳು "ನಿನ್ನೆ ರಾತ್ರಿ ಕಾಳಿಹಸುವು ಕೊಟ್ಟಿಗೆಗೆ ಬರಲಿಲ್ಲ. ಅದನ್ನು ಹುಡುಕಲೆಂದು ಅವನು ಹೋದನು ನಾನು ಎಷ್ಟು ಬೇಡನೆಂದರೂ ಕೇಳಲಿಲ್ಲ. ಈಗ ನಾನೇ ಅವನನ್ನು ಹುಡುಕಲು ಹೊರಡಬೇಕೆಂದಿದ್ದೆ." ನಿಂಗನು "ನಿನ್ನಿಂದಲೇ ಏನೋ ನಡೆದಿರಬೇಕು ನಂಗೊತ್ತು ನಿಂಗನನ ಮೇಲೆ ಎಂಥಾ ಪ್ರೀತಿ ಎಂದು" ಎನ್ನುತ್ತಾ ಕಾಡಿನ ಕಡೆಗೆ ಹೋಗಿಯೇ ಬಿಟ್ಟನು ನಿಂಗ ಕಾಡೆಲ್ಲ ಸುತ್ತಿ ಮಗನನ್ನು ಕೂಗಿಕರೆದ, ಹುಡುಕಿ ಹುಡುಕಿ ದಣಿದ.

ಆದರೆ ಮಾದನೂ ಇಲ್ಲ ಕಾಳಿಯೂ ಇಲ್ಲ. ನಿಂಗನು ದಣಿವಿನಿಂದಲೂ ದುಃಖದಿಂದಲೂ ಸಾಯಂಕಾಲ ಹಿಂತಿರುಗಿದನು.

\+ + + + + + + +

ಕಾಲ ಎಲ್ಲಾ ದುಃಖಗಳನ್ನೂ ಮರೆಯಿಸುವುದು. ನಿಂಗನು ಎಲ್ಲ ಮನುಷ್ಯರಂತೆ ಮಾದನನ್ನು ಮರೆತನು ಸೋಮಿಯು ಅದೊಂದು ಪೀಡೆ ಹೋದುದು ಒಳ್ಳೆಯದಾಯಿತೆಂದೇ ತಿಳಿದಿದ್ದಳು ಆದರೂ ಮಾದನಿಗೆ ತಾನು ಕೊಟ್ಟ ಹಿಂಸೆ ಒಮ್ಮೊಮ್ಮೆ ಅವಳ ಮನಸ್ಸನ್ನು ಕೊರೆಯುತ್ತಿತ್ತು. ಅವನು ಕಾಣದೇ ಹೋಗಿರುವುದಕ್ಕೂ ನಾನೇ ಕಾರಣವಲ್ಲವೇ ಎಂದು ಬೆದರುತ್ತಿದ್ದಳು.

ಮರುವರ್ಷ ಸಾಧಾರಣ ಅದೇ ಸಮಯ ಸೋಮಿಯು ಅವಳ ನಾಲ್ಕು ವರ್ಷದ ಹೈದ ಮಗನೊಡನೆ ಕಾಡಿಗೆ ಮುತ್ತುಗದೆಲೆ (ಊಟ ಮಾಡಲು) ತರಲೆಂದು ಹೋದಳು. ಆ ಹುಡುಗನು ಅವನ ಮನಬಂದಂತೆ ಆಡುತ್ತಾ ಅತ್ತಿತ್ತ ಓಡುತ್ತಿದ್ದನು ಅಲ್ಲೇ ಒಂದು ಮೂಲೆಯಲ್ಲಿ ಒಂದು ಬಿದಿರು ಹಿಂಡಲಿನ ಬುಡದಲ್ಲಿ ಏನೋ ಆಶ್ಚರ್ಯಕರವಸ್ತುಗಳನ್ನು ನೋಡಿ "ಅವ್ವಾ, ಅವ್ವಾ, ಇಲ್ಲಿ ಬಾ!" ಎಂದನು ಸೋಮಿಯು "ಇವನ ಹಾಳು ಯಾವಾಗಲೂ ಉಂಟಲ್ಲ" ಎಂದು ಹೋಗಲಿಲ್ಲ. ಹುಡುಗ ಮತ್ತೆ ಮತ್ತೆ ಕರೆದನು. ಸೋಮಿಯು ಸಿಟ್ಟು ಹೋಗಲಿ ಎಂದು ಆ ಕಡೆ ಹೋದಳು

ಅಲ್ಲಿ ಅನೇಕ ಅಸ್ಥಿಪಂಜರಗಳ ತುಂಡುಗಳು ಬಿದ್ದಿದ್ದವು ಒಂದು ಚಿಕ್ಕ ತಲೆ ಬುರುಡೆ ಸೋಮಿಯನ್ನೇ ನೋಡಿ "ಕಾಳಿ ದೊರೆಯಿತು, ಚಿಕ್ಕಮ್ಮಾ!" ಎಂದಿತು. ದನದ ತಲೆ ಬುರುಡೆ ಮತ್ತು ಮುರಿದ ಕೈ ಕಾಲುಗಳ ಮೂಳೆ ಅಲ್ಲೇ ಬಿದ್ದಿದ್ದವು. "ಹೋದಾ" ಎಂದು ಕಿರುಚಿ ಸೋಮಿಯು ನೆಲದ ಮೇಲೆ ಬಿದ್ದಳು. "ಅವ್ವಾ, ಅವ್ವಾ" ಎಂದು ಅವಳ ಮಗನು ಗಾಬರಿಯಿಂದ ಕೂಗಿದನು. ಆದರೆ ಅವಳ ಕಣ್ಣು ತೆರೆಯಲಿಲ್ಲ; ಅವಳಿಂದ ಉತ್ತರವೂ ಬರಲಿಲ್ಲ.

ಹದ್ದೊಂದು ಪಟಪಟನೆ ರೆಕ್ಕೆ ಬಡಿದು ಅಲ್ಲಿಂದ ಹಾರಿ ಹೋಯಿತು.

ಮೃಗಜಲದಲ್ಲಿಯ ಕಮಲ

ಲೇಖಕರು
ವಿ. ಸ. ಖಾಂಡೇಕರ

ಅನುವಾದಕರು
ಶ್ರೀ ಶಿವಾನಂದ ಗೋಕರ್ಣ

ಮೀನೆ ನನ್ನೊಡನೆ ಈಗ ಕೊಂಕಣಕ್ಕೆ ಬರುವಳು. ತಾತನ ತೊಡೆಯ ಮೇಲೆ ಕುಳಿತ ಮೀನೆ ಕಿಸುಕ್ಕನೆ ನಕ್ಕಳು. ಆದರೆ ಅಷ್ಟರಲ್ಲಿಯೇ ತಲೆಯನ್ನಲ್ಲಾಡಿಸುತ್ತ ಹೇಳಿದಳು. "ನಾವು ಬರುವದಿಲ್ಲ ಹೋಗು"— ತಲೆಯನ್ನಾಡಿಸಿ ಹೇಳಬೇಕಾದರೆ ಕೆಳಗಡೆ ತೂಗುಬಿಟ್ಟ ಹೆರಳು ಸಣ್ಣ ಗಿಡದ ಟೊಂಗೆಯಂತೆ ಅಲುಗಿತು. ಹೆರಳಿನ ತುದಿಗೆ ಕಟ್ಟಿದ ದಾರ ಹೂವಿನಂತೆ ಶೋಭಿಸಿತು. ಓಡಿ ಹೋಗಲು ಪ್ರಯತ್ನಿಸುತ್ತಿರುವ ಮೀನೆಯನ್ನು ನೋಡಿ ತಾತನೆಂದ "ಎಷ್ಟು ಸುಂದರವಾಗಿರುವದು ನಮ್ಮ ಕೊಂಕಣ"

"ಅಲ್ಲಿ ಎಲ್ಲಿದೆ ಸಿನೇಮಾ?" ಕೋಣೆಯೊಳಗಿನ ಮೇಜಿನ ಮೇಲೆ ಒಂದರ ಹಿಂದೊಂದು ಕೂಡಿಸಿಟ್ಟ ಜಾಹೀರಾತದ ಕಡೆಗೆ ನೋಡಿ ಮೀನೆ ಚೀರಿದಳು

"ಅಲ್ಲಿ ನನಗೆ ಆಡಲಿಕ್ಕೆ 'ಫಟಿಫಟಿ' ಇದೆಯೇನು?" ಕೊಂಕಣದ ವಿಷಯವಾಗಿ ಮಾತನಾಡುವದು ತಾತನಿಗೆ ಅವಶ್ಯವಾಯಿತು. ಆತ ಹೇಳಿದ. ಅಲ್ಲಿ ಬಹಳ ಮಜಾ ಇದೆ ನೋಡು.

ಧನುಷ್ಯಾಕೃತಿಯಂತೆ ಇದ್ದ ಆಕೆಯ ಹುಬ್ಬು ಮಿನುಗುತ್ತಿರಲು ಸ್ವಲ್ಪ ಬಗ್ಗಿರಬೇಕಾದರೆ ಯಾವದೇ ಒಂದು ಪ್ರಶ್ನೆಯ ವಿಚಾರದಲ್ಲೇ......,

ಎತ್ತರವಾದ ತೆಂಗಿನ ಗಿಡಗಳಿವೆ.
ಪರ್ವತಕ್ಕಿಂತ ಎತ್ತರ?
ಆಕಾಶಕ್ಕೆ ಮುಟ್ಟುತ್ತವೆಯೇ?

ಮೀನೆ ಆನಂದದಿಂದ ಚಪ್ಪಾಳೆ ಬಾರಿಸುತ್ತ ಕೇಳಿದಳು. ಅಲ್ಲಿಂದ ದೇವರ ಮನೆ ಕಾಣಿಸುವದೇನು? ಎಲ್ಲಿಯಾದರೂ ಭೂಮಿಯ ಮೇಲೆ ಬಿದ್ದುಕೊಂಡಿರುವ ಗ್ಲಾಸಿನ ತುಣುಕು ಕಾಲಿನಲ್ಲಿ ಸೇರಿದಂತಾಯಿತು ಆತನಿಗೆ.

ತೆಂಗಿನ ಮರದ ತುದಿಯ ಮೇಲಿಂದ ದೇವರ ಮನೆ ಕಾಣಿಸುವದೇನು? ಈ ಪ್ರಶ್ನೆಯು ಆ ಬಾಲಿಕೆಯದಲ್ಲವಾಗಿತ್ತು. ತಾಯಿಯ ಸಲುವಾಗಿ ನೆನಪು ಮಾಡುತ್ತಿರುವ ಆಕೆಯ ಹೃದಯವು ಅದರೊಳಗಿಂದ ನೋಡಲು ಆಸೆ ಪಡುತ್ತಿದ್ದಿರಬೇಕು. ಮೀನೆಯ ತಾಯಿಯು ತನ್ನ ಮಗುವಿನ ಆಟಪಾಟ ಆಡುವದನ್ನು ನೋಡಲು ಈ ಜಗತ್ತಿನಲ್ಲಿರಲಿಲ್ಲ. ಐದು ವರ್ಷದ ತನಕ ಆಕೆಯು ತನ್ನ ತಾಯಿಯ ತವರ್ಮನೆಯಲ್ಲಿಯೇ ಬೆಳೆದಳು. ಇನ್ನುಳಿದ ಹುಡುಗಿಯರು "ಅಮ್ಮಾ ಅಮ್ಮಾ" ಎಂದು ಅಪ್ಪಿಕೊಳ್ಳುವಾಗ ತಾನೂ ಕೂಡ ಅಮ್ಮನಿಗೆ ಅಪ್ಪಿಕೊಳ್ಳಬೇಕೆಂದು ಆಕೆಗೆ ಅನ್ನಿಸುತ್ತಿತ್ತು. ಆದರೆ ಆಕೆಯ ಅಜ್ಜ ಅಜ್ಜಿ ಮಾವಯ್ಯ ಆಕೆಗೆ ಒಂದೇ ಹೇಳುತ್ತಿದ್ದರು. "ನಿನ್ನ ಅಮ್ಮ ದೇವರ ಮನೆಗೆ ಹೋಗಿದ್ದಾಳೆ" ತಾತ ಆಕೆಗೆ ಹೇಳಿದ, "ಅಮ್ಮನ ವಿಷಯವಾಗಿ ನೀನು ಏನೂ ಕೇಳಬಾರದು. ಕೊಂಕಣದಲ್ಲಿ ಸಮುದ್ರವಿದೆ. ಅದರಲ್ಲಿ ಬಹಳ ನೀರಿದೆ. "ಸಮುದ್ರದೊಳಗೆ ದೇವರಿರುತ್ತಾನಂತೆ, ಹಾಗೇನೊ ತಾತ?"

'ಸಣ್ಣ ಹುಡುಗರಿಗೆಲ್ಲ ದೇವರ ವಿಚಾರ ಏಕೆ?' ತಾತನಿಗೆ ಸಿಟ್ಟು ಬಂದದ್ದು ನೋಡಿ ಮೀನೆಯ ಕಣ್ಣಲ್ಲಿ ನೀರೂರಿತು. ತಾತನನ್ನು ನೋಡದೆ ಮೋರೆ ಕೆಳಗಿಟ್ಟು ಅಂದಳು. "ದೇವರ ಮನೆ ನೋಡಿದಾಕ್ಷಣವೇ ನಾನವನಿಗೆ ಕೂಗಿ ಹೇಳುವೆ" ಏನು?

"ನನ್ನ ಅಮ್ಮನನ್ನು ಕೊಡು ನನಗೆ ನನ್ನ ಎಲ್ಲಾ ಆಟಪಾಟ ತೆಗೆದುಕೋ ಬೇಕು. ಮೋಟಾರ, ವಿಮಾನ—" ಹೀಗೆ ಅನ್ನುತ್ತಿರಬೇಕಾದರೆ ಮೀನೆ ಕರುಣಾಜನಕ ದೃಷ್ಟಿಯಿಂದ ಆಕಾಶದ ಕಡೆಗೆ ನೋಡಿದಳು. ತಾತನು ಮೀನೆಯನ್ನು ಗಟ್ಟಿಯಾಗಿ ಅಪ್ಪಿ ಹಿಡಿದನು. ತನನ್ನು ಹೀಗೇಕೆ ಅಪ್ಪಿ ಹಿಡಿದಿರಬೇಕೆಂಬುದರ ಅರಿವು ಮೀನೆಗೆ ಆಗಲಿಲ್ಲ.

ಊರಿಗೆ ಹೋದ ಮೇಲೆ ಮೀನೆಯ ಲಕ್ಷ್ಯ ಎಲ್ಲವೂ ಲಾಡಕ್ಯಾನ ಮೇಲೆ ಬಿತ್ತು. ಕಪ್ಪಾಗಿ ದಪ್ಪಗಾಗಿದ್ದ ಆತನ ಮೈಕಟ್ಟು ಸೊಂಟದಲ್ಲಿ ಹೇಗಾದರೂ ಮಾಡಿ ಸುತ್ತಿದ ವಸ್ತ್ರದ ತುಂಡು, ಮೂಗಿನಿಂದಾಡುವ ಆತನ ಮಾತು. ಇದನ್ನೆಲ್ಲ ಕೇಳಿದಾಗ ಮೀನೆಗೆ ನಗು ಬರುತ್ತಿತ್ತು. ತಾತ ಲಾಡಕ್ಯಾನಿಗೆ ಹೇಳಿದ "ಎಳನೀರು ತೆಗೆದುಕೊಡು" ಅಂಗಳದಲ್ಲಿರುವ ಮರದ ಮೇಲೆ ಮಂಗನಂತೆ ಹತ್ತಿದ. ಕೆಲವು ಹೊತ್ತಿನ ಮೇಲೆ ಮರದ ಚಂಡಿಕೆಯ ಮೇಲೆ ಹೋಗಿ [illegible] ಜೋಕಾಲಿಯಲ್ಲಿ ಕುಳಿತು ತೂಗುವಂತೆ ಮರದ ತುದಿಯಲ್ಲಿ ತೂಗುತ್ತಿದ್ದ ಆತ ಕೆಳಗಿಳಿದು ತನ್ನ ಕೈಯಲ್ಲಿದ್ದ ಕತ್ತಿಯಿಂದ ಕಾಯಿಗೆ ತೂತು ಮಾಡಿ ಮೀನೆಗೆ ಕುಡಿಯಲು ಕೊಟ್ಟ. ಅದೆಷ್ಟು ಸಿಹಿ ನೀರು ಅದರದು. ಲಾಡಕ್ಯಾ ಆಕೆಗೆ ಸಮುದ್ರದ ತೀರದ ಮೇಲೆ ತಿರುಗಾಡಲಿಕ್ಕೆ ಕರೆದುಕೊಂಡು ಹೋಗುವನು. ಮೆತ್ತನ್ನ ಉಸುಕಿನ ಮೇಲೆ ಓಡಾಡುವಾಗ 'ಕುರ್, ಕುರ್' ಎಂಬ ಸಪ್ಪಳವಾಗುತ್ತಿತ್ತು. ಸಪ್ಪಳವು ಕೇಳಿದೊಡನೆಯೇ ಏಡಿಗಳು ತಮ್ಮ ತಮ್ಮ ಗೂಡಗಳನ್ನು ಸೇರಿಕೊಳ್ಳುತ್ತಿದ್ದವು. ತೆರೆಗಳು ದಂಡೆಗೆ ಅಪ್ಪಳಿಸಿ ಸರ್ರನೆ ಹಿಂದೆ ಹೋಗುತ್ತಿದ್ದವು. ಸಂಜೆಯಾದಾಗ ಆಕಾಶದಲ್ಲಿ ನಾನಾ ಬಣ್ಣಗಳು ಕಾಣುತ್ತಿದ್ದವು. ಇವೆಲ್ಲವುಗಳಿಗಿಂತ ಆಕೆಗೆ ಆನಂದವನ್ನುಂಟು ಮಾಡುವ ಸಂಗತಿಯೇ ಬೇರೆಯಾಗಿತ್ತು. ಲಾಡಕ್ಯಾ ಸಮುದ್ರದಲ್ಲಿ ಬಲೆಯನ್ನು ಬೀಸಲು ದೋಣಿ ತೆಗೆದುಕೊಂಡು ಹೋಗುವನು. ದೋಣಿಯು ದೂರ ದೂರ ಹೋದ ಹಾಗೆ ಬಹಳ ಸಣ್ಣದಾಗಿ ಕಾಣಿಸುತ್ತಿತ್ತು. ಆ ಸಮಯ ಆಕೆಯ ಹೃದಯದಲ್ಲಿ ನಡುಗು ಉತ್ಪನ್ನವಾಯಿತು. ಲಾಡಕ್ಯಾ ಸಮುದ್ರದಲ್ಲಿ ಮುಳುಗಿದರೆ? ಆಕೆಗೆ ಒಮ್ಮೆಲೆ ತಾಯಿಯ ನೆನಪು ಬರುತ್ತಿತ್ತು. ದೇವರು ತಾಯಿಯನ್ನು ತೆಗೆದುಕೊಂಡು ಹೋದಹಾಗೆ ಲಾಡಕ್ಯಾನನ್ನು ತೆಗೆದುಕೊಂಡು ಹೋಗಬಾರದೆಂದು ಆಕೆಗೆ ಅನಿಸುತ್ತಿತ್ತು. ಉಸುಬಿನಿಂದ ಕಟ್ಟಿದ ಮನೆಯನ್ನು ಅರ್ಧದಲ್ಲಿಯೇ ಬಿಟ್ಟು ಸಮುದ್ರದ ನೀರಿನ ಕಡೆ ನೋಡುತ್ತಿದ್ದಳು. ದೇವರ ವಿಷಯವಾಗಿ ಪ್ರಶ್ನೋತ್ತರಗಳನ್ನು ಕೊಡುವಾಗ ಲಾಡಕ್ಯಾಗೆ ಜೀವವು ಸಾಕುಬೇಕಾಗುತ್ತಿತ್ತು. ದೇವಸ್ಥಾನದ ದಿಕ್ಕಿಗೆ ಬೊಟ್ಟು ತೋರಿಸಿ ಅಲ್ಲಿ ದೇವರಿದ್ದಾನೆ ಎಂದು ಹೇಳುತ್ತಿದ್ದನು. ಆಗ ಮೀನೆ [illegible] ದೇವಸ್ಥಾನಕ್ಕೆ ಹೋಗುವಳು. ಗಂಟೆಯ ಗಂಭೀರನಾದ [illegible] ಆಕೆಗೆ ಕೇಳುತ್ತಿತ್ತು. ದೇವರಿಗೆ ಮುಡಿಸಿದ ಹೂವಿನ ಪರಿಮಳವು ಆಕೆಗೆ [illegible]ತ್ತಿತ್ತು. ಒಳಗೆ ಮುಸುಕಿದ ಅಂಧಕಾರ, ದೇವರ ಮೂರ್ತಿ, ಆತನ ಬಂಗಾರದ ಕಣ್ಣು, [illegible] ಎಂದು ಉರಿಯುತ್ತಿರುವ ನಂದಾದೀಪ ಇವೆಲ್ಲವನ್ನು ನೋಡಿದಾಗ ಆಕೆಗೆ [illegible] ಯಾವದೋ ಒಂದು ಭೀತಿ ಉತ್ಪನ್ನವಾಗುತ್ತಿತ್ತು. ಮೀನೆ ಹಿಂದಿರುಗಿ ನೋಡುವಳು. [illegible] ಮಂಟಪದಲ್ಲಿ ದೇವರ ಕಡೆಗೆ ಕೈಮುಗಿದು [illegible] ತಿರುವ ಲಾಡಕ್ಯಾನನ್ನು ನೋಡಿದಾಗ ಮಾತ್ರ [illegible] ಯು ಮಾಯವಾಗುತ್ತಿತ್ತು. ಆಗ ಆಕೆ [illegible]

...[illegible]ನೆಯ ಪುಟಕ್ಕೆ

Reg. No. B. 3148

LICENCE No. 3
Licensed to Post without Prepayment

KARMVEER 22-3-48



ಜ್ಯೋತಿಷಿ— ಕೃಷ್ಣಶಾಸ್ತ್ರಿ ಘಟೆ ಭವಿಷ್ಯ ಕಥನ ಆಫೀಸ ಖಡೇಬಜಾರ ಬೆಳಗಾವಿ.

ಮಾರ್ಚ ೨೨ ರಿಂದ ೨೮ ರ ವರೆಗೆ

ಮೇಷ

ಸ್ವಲ್ಪ ಶಾರೀರಿಕ ಆದರೆ ಅತ್ಯಂತಿಕ ಮಾನಸಿಕ ಕ್ಲೇಶದಿಂದ ಬಹಳ ಆಯಾಸ. ಹೆಂಡತಿಗೂ ತಲೆ ನೋವಿನಿಂದ ಮೇಲೆ ತಿಕ್ಕಾಟ. ಮಕ್ಕಳಲ್ಲಿ ಒಬ್ಬರು ಗಂಭೀರವಾದ ಬಾಲರೋಗದ ಅಪಕ್ವತ್ಯ ಎಳೆಗು ತ್ತಾರೆ. ನೌಕರ ಚಾಕರರು ಮತ್ತು ಆಪ್ತರು ನಿಮ್ಮ ಬಂದಂತೆ ಬೆದರಿಕೆ ಹಾಕುವರು. ಗಾಜನದಲ್ಲಿ ಅಪಘಾತ ಮತ್ತು ಧನಕರುಗಳಿಗೆ ರೋಗವಾಗಿ ಕೆಲವು ಮರಣ ಹೊಂದುವವು. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಅನುಕೂಲ ಆದರೆ ಗೊತ್ತಾದ ಲಾಭವು ಕೈಗೆ ಬಾರದೆ ತಪ್ಪುತ್ತ ಮಾನನಷ್ಟಕ್ಕಾಗಿ ಕೈಯಿಂದ ಹಣ ವೆಚ್ಚ ಮಾಡಬೇಕಾದ ಸ್ಥಿತಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅತಿ ಕಷ್ಟದಿಂದ ಅನುಕೂಲತೆ. ವ್ಯವಹಾರದಲ್ಲಿ ವಿರೋಧ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಸ್ವಲ್ಪ ಅನುಕೂಲ. ಅಶ್ವಿನಿಯು ಅನೆ ಮತ್ತು ಭರಣಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨೪, ೨೬, ೨೮ ಅನುಕೂಲ.

ವೃಷಭ

ಸ್ವಂತ ಸಹ ಮನೆಯಲ್ಲಿಯ ಬಹುತರ ವ್ಯಕ್ತಿ ಕೆಡುವವು ಆದರೆ ಎಲ್ಲರ ಒಮ್ಮತ ದಿಂದ ಇರುವದರಿಂದ ಪ್ರಾಪಂಚಿಕ ಸಮಾ ಧಾನ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆ ಕುಂದುತ್ತ ನಡೆಯುವದು. ಬಂಧು ವರ್ಗದವ ರಿಗೆ ಬಹಳ ಕ್ಲೇಶ. ವಾದದಲ್ಲಿ ಮತ್ತು ಸ್ಪರ್ಧೆ ಯಲ್ಲಿ ಯಶಸ್ಸು. ಆದರೆ ಅದಕ್ಕಾಗಿಯೆ ಜನ ರಿಗೆ ಪ್ರತಿಕೂಲ. ಪರಸ್ತ್ರೀ ಬಗ್ಗೆ ಬಹಳ ಎಚ್ಚರಿಕೆ. ಮಿತ್ರ ಸುಖ ಅನುಕೂಲ. ಅಪ್ರಿಯ ಘಾಟನೆಗಾಗಿ ವೆಚ್ಚ. ಪ್ರವಾಸ ಮತ್ತು ಭೆಟ್ಟಿ ಗಳ ಪತ್ರವ್ಯವಹಾರ ಅನುಕೂಲ. ಕೃತ್ತಿಕೆಯ ನೇ ಮತ್ತು ರೋಹಿಣಿಯ ಮೊದಲನೆ ೩ ಚರಣ ಗಳಿಗೆ ತೊಂದರೆ ಕಡಮೆ. ತಾ. ೨೪, ೨೫, ೨೬ ಅನುಕೂಲ.

ಮಿಥುನ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಆದರೆ ಉಳಿದ ವೆಚ್ಚದ ವಿಷಯಗಳಲ್ಲಿ ಪ್ರಾಪಂಚಿಕ ದಿಂದರೆ ವಿಪರೀತ. ಕೆಲ ವಸ್ತುಗಳು ಕಳೆಯುವ, ಕಳವಾಗುವ ಅಂಜಿಕೆ. ಉದ್ಯೋಗದಲ್ಲಿ ಪ್ರಗತಿ ಕಡಿಮೆಯು ಆದರೆ ಪ್ರತಿಷ್ಠೆ ಮತ್ತು ಲಾಭವೂ ಅನುಕೂಲ. ಪ್ರತಿಯೊಂದು ಕೆಲಸದಲ್ಲಿ ಮೊದಲು ವಿಘ್ನ ತೊಂದರೆ. ಆದರೆ ನಂತರ ಯಶಸ್ಸು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು ಇಲ್ಲವೆ ಸ್ವಲ್ಪ ದಿನ ಅನುಕೂಲತೆ. ಆದರೆ ಶತ್ರುವೂ ಹೆಚ್ಚು ದಿನದಲ್ಲಿ ಉಪದ್ರವ ಕೊಡುವ ತಯಾರಿಯಲ್ಲಿ. ಮಿತ್ರರಲ್ಲಿ ಕ್ಲೇಶ ಮತ್ತು ವಿರೋಧ. ಪ್ರವಾಸಿ ಕೆಲಸ ಹಿತದ್ದು. ಮೃಗಾದ ಅನೇ ಮತ್ತು ಆರ್ದ್ರಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨೪, ೨೭, ೨೭ ಅನುಕೂಲ.

ಕರ್ಕ

ಕೆಲ್ಲರ ಪ್ರಕೃತಿ ಶಾಪ. ಬೇರು ಕೋಷ್ಟಕದಲ್ಲಿಯೆ ವಿಕಾರದಿಂದ ಬಹಳ ತೊಂದರೆ. ಉಳಿದ ಪ್ರಾಪಂಚಿಕ ಕೆಲಸಗಳಲ್ಲಿಯೂ ಅಸಮಾಧಾನ. ಉದ್ಯೋಗದಲ್ಲಿ ಎಲ್ಲ ದೃಷ್ಟಿಯಿಂದ ಹಿಮ್ಮೆಡು ಹೊತ್ತು. ಸ್ತ್ರೀವರ್ಗದಲ್ಲಿ ಬಹಳ ತಪ್ಪು ತಿಳುವಳಿಕೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಪಕ್ಷಗಳದೆ ಕೈ ಜೋರು ಮಿತ್ರರಲ್ಲಿ ವಿರೋಧ. ಅಲ್ಪ ಉಪಯೋಗ. ಪ್ರವಾಸಾದಿ ಕೆಲಸ ತಡೆಯುವು. ಆದರೆ ಪುಷ್ಯದ ಅನೇ ಮತ್ತು ಆಶ್ಲೇಷಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨೩, ೨೭, ೨೮ ಅನುಕೂಲ.

ಸಿಂಹ

ಶಕ್ತಿ ಮತ್ತು ಹೆಂಡತಿಗೆ ಬಹಳ ಕಾಯಿಲೆ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ. ಮಕ್ಕಳಲ್ಲಿ ಉತ್ಕರ್ಷ. ಉದ್ಯೋಗದಲ್ಲಿ ಪ್ರಗತಿ ಕಡಿಮೆಯು ಆದರೆ ಪ್ರತಿಷ್ಠೆ ಮತ್ತು ಲಾಭ ಅನು ಕೂಲ. ವೆಚ್ಚ ವಿಪರೀತ. ಕಡಮೆ ಕರಣೆತಿಯ

ಜನರೊಡನೆ ತಿಕ್ಕಾಟದ ಪ್ರಸಂಗ. ಮಿತ್ರಸುಖ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ಕೆಲವೊಂದು ಹೊಸ ಸಂಕಟ ಬರುವ ಅಂಜಿಕೆ ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಮಘಾದ ಅನೆ ಮತ್ತು ಪೂರ್ವಾದ ಮೊದಲನೆ ೩ ಚರಣ ಗಳಿಗೆ ತೊಂದರೆ ಕಡಮೆ. ತಾ. ೨೫, ೨೬, ೨೮ ಅನುಕೂಲ.

ಕನ್ಯಾ

ಪ್ರಕೃತಿಗೆ ಕ್ಲೇಶ. ಮನೆಯಲ್ಲಿಯು ಬಹುತಃ ಎಲ್ಲರೊಡನೆ ವಿರೋಧ. ಉದ್ಯೋಗದಲ್ಲಿ ಪ್ರಗತಿ ಕಡಮೆ. ಆದರೆ ಪ್ರತಿಷ್ಠೆ ಮತ್ತು ಲಾಭ ಅನು ಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನಸ್ಥಿತಿ. ಕೆಲ ದುಷ್ಟ ವಿಚಾರಗಳು ಮೇಲಿಂದಮೇಲೆ ಮನಸ್ಸಿನಲ್ಲಿ ಬರು ತಿರುವ ಸಂಭವ. ಸ್ವಲ್ಪ ಅನುಚಿತ ಲಾಭ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಉತ್ತರಾದ ಅನೆ ಮತ್ತು ಹಸ್ತಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨೫, ೨೬, ೨೭ ಅನುಕೂಲ.

ತುಲಾ

ನಿಮ್ಮ ಪ್ರಕೃತಿ ಅನುಕೂಲ. ಆದರೆ ಹೆಂಡ ತಿಗೆ ಕಾಯಿಲೆಯಿಂದ ಕ್ಲೇಶ. ಆದರೆ ಉಭಯತ ರಲ್ಲಿ ಒಳ್ಳೆ ಪ್ರೇಮ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಲಾಭ ಬಹಳ ಕಡಮೆ. ಆದರೆ ಪ್ರಗತಿ ಮತ್ತು ಪ್ರತಿಷ್ಠೆ ಜೋರಿ ನಲ್ಲಿ. ವಿರೋಧಿಗಳ ಜೋರು ಒಮ್ಮೆಲೆ ಇಳಿ ಯುವ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆ ಯಲ್ಲಿ ಕಿಂಚಿತ್ ಅನುಕೂಲತೆ. ಮಿತ್ರರೂ ಶತ್ರುಗಳಂತೆ ಕೆಲ ಉಪದ್ರವದ ಕೃತ್ಯಗಳನ್ನು ಮಾಡುವರು. ಪ್ರವಾಸಾದಿ ಕೆಲಸ ಸುಖಕರ. ಚಿತ್ರಾದ ಅನೆ ಮತ್ತು ಸ್ವಾತಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ.

ವೃಶ್ಚಿಕ

ಪ್ರಕೃತಿ ಸಾಧಾರಣ ಅನುಕೂಲ. ಆದರೆ ಸ್ತ್ರೀ ಸುಖದಲ್ಲಿ ವಿರಸ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅಲ್ಪ ಸ್ವಲ್ಪ ಕಷ್ಟದಿಂದ ಆದರೆ ಬಹಳ ಉತ್ತಮ. ಭಾವೀ ಭಾಗ್ಯಕ್ಕೆ ಪೋಷಕವಾಗುವ ಕೆಲ ಸಂಗತಿಗಳು ಆಕಸ್ಮಿಕ ಕೂಡಿಬರುವ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ನಿಮ್ಮ ಜನರೆ ಪ್ರತಿಕೂಲ ವಾಗಿ ಕಳೆಸುವರು. ಪ್ರವಾಸಾದಿ ಕೆಲಸ ಅನು ಕೂಲ. ಅನುರಾಧೆಯ ಅನೇ ಮತ್ತು ಜ್ಯೇಷ್ಠಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨೩, ೨೪, ೨೭, ೨೮ ಅನುಕೂಲ.

ಧನು

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ. ಆದರೆ ಮಕ್ಕಳಲ್ಲಿ ಬಹಳ ಕ್ಲೇಶ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಪ್ರತಿಯೊಂದು ಕೆಲಸದಲ್ಲಿ ಮೊದಲು ಹತಾಶರಾಗ ಬೇಕಾದರೂ ಮುಂದೆ ಬಹಳ ಯಶಸ್ಸು ವಿಶೇಷ ಪ್ರಕಾರದ ಕೆಲ ಧಾರ್ಮಿಕ ಕೃತ್ಯಗಳು. ಖರ್ಚ ವಿಪರೀತ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು ಇಲ್ಲವೆ ಅನುಕೂಲತೆ. ಪ್ರವಾಸಾದಿ ಕೆಲಸ ಕಷ್ಟಸಾಧ್ಯ. ಮೂಲಾದ ಅನೆ ಮತ್ತು ಪೂರ್ವಾಷಾಢಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨೪, ೨೭, ೨೭, ೨೮ ಅನುಕೂಲ.

ಮಕರ

ಪ್ರಕೃತಿ ಮತ್ತು ಸ್ತ್ರೀಸುಖ ಅನುಕೂಲ. ಆದರೆ ನಿಮ್ಮ ನಿಮ್ಮಲ್ಲಿ ಮೇಲಿಂದ ಮೇಲೆ ಮತ ಭೇದ. ಉಳಿದ ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಮಾನ್ಯ ಅನುಕೂಲ. ಆದರೆ ವೆಚ್ಚ ವಿಪರೀತ. ಮಿತ್ರರಲ್ಲಿ ಒಬ್ಬರ ಮೇಲೆ ದೊಡ್ಡ ಸಂಕಟ ಬರುವದರಿಂದ ಮನಸ್ಸು ಅತಿ ವ್ಯಗ್ರ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರವೂ ಅನುಕೂಲ. ಉತ್ತರಾಷಾಢಾದ ಅನೆ ಮತ್ತು ಶ್ರವಣಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨೫, ೨೬, ೨೭, ೨೮ ಅನುಕೂಲ.

ಕುಂಭ

ಪ್ರಕೃತಿ ಸಾಧಾರಣವೆ. ಸ್ತ್ರೀಸುಖ ಅನು ಕೂಲ. ಆದರೆ ಎಲ್ಲ ವಿಷಯಗಳಲ್ಲಿ ಪ್ರಾಪಂ ಚಿಕ ಸುಖದಲ್ಲಿ ಅನಪೇಕ್ಷಿತ ಕಾರಣಗಳಿಂದ ಅಸ್ಥಿ ರವಾಗುವದರಿಂದ ವಿರಸ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆ ಬೆಳೆ ವುದರ ಬದಲು ಕುಂದುತ್ತ ನಡೆಯುವದು. ಮಕ್ಕಳಲ್ಲಿ ಉತ್ಕರ್ಷ. ವಾದದಲ್ಲಿ ಮತ್ತು ಸ್ಪರ್ಧೆ ಯಲ್ಲಿ ಬಹಳ ಅನುಕೂಲತೆ. ಮಿತ್ರಸುಖ ಉತ್ತಮ. ಪ್ರವಾಸಾದಿ ಕೆಲಸ ಅನುಕೂಲ ಆದರೆ ಪ್ರತ್ಯಕ್ಷ ಭೆಟ್ಟಿಯಲ್ಲಿ ವಾಗ್ಯುದ್ಧ ನಡೆವ ಮತ್ತು ಅಪಮಾನವಾಗುವ ಸಂಭವ. ಧನಿಷ್ಠಾದ ಅನೆ ಮತ್ತು ಶತತಾರಿಕೆಯ ಮೊದಲನೆ ೩ ಚರಣ ಗಳಿಗೆ ತೊಂದರೆ ಕಡಮೆ. ತಾ. ೨೪, ೨೬, ೨೮ ಅನುಕೂಲ.

ಮೀನ

ಪ್ರಕೃತಿ ಮತ್ತು ಸ್ತ್ರೀಸುಖ ಅನುಕೂಲ. ಆದರೆ ಹೆಂಡತಿ ಬೇಕೆಂತಲೆ ಆಗ್ರಹದಿಂದ ಮನ ಸ್ಸಿನ ವಿರುದ್ಧ ಕೆಲ ಸಂಗತಿಗಳನ್ನು ಒಂದೇ ಸವನೆ ಮಾಡಹತ್ತುವಳು. ಅಪ್ರಿಯ ಅತಿಥಿಗಳ ಆಗಮನದಿಂದ ಮನಸ್ಸು ಉದಾಸೀನ ಉದ್ಯೋ ಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ಸ್ಥಾವರದಲ್ಲಿ ಸ್ವಲ್ಪ ಹಾನಿ. ಎರಡನೆಯವ ರಿಗೆ ತಪ್ಪು ಸಲಹೆಕೊಡುವ ಕುಬುದ್ಧಿ. ವಾದ ದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ಮಿತ್ರ ರಲ್ಲಿ ಕೆಲ ಜನರ ಮೇಲೆ ಸಂಕಟ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಉತ್ತರಾಭಾದ್ರಪದದ ಅನೇ ಮತ್ತು ರೇವತಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨೫, ೨೬ ಅನುಕೂಲ.

ಮೃಗಜಲದಲ್ಲಿಯ ಕಮಲ

(೧೫ನೇ ಪುಟದಿಂದ)

ನಮಸ್ಕಾರಮಾಡುವಳು. ಪೂಜಾರಿಯು ಕಡೆ ಯಿಂದ ತೀರ್ಥ ಪ್ರಸಾದ ತೆಗೆದುಕೊಂಡ ಹೊರತು ಲಾಡಕ್ಯಾ ಎಂದಿಗೂ ಹಿಂದಿರುಗುತ್ತಿರಲಿಲ್ಲ.

ಮೆಲ್ಲಮೆಲ್ಲನೆ ಬೇಸಿಗೆ ಕಾಲವು ಬಂದಿತು. ಲಾಡಕ್ಯಾನು ಮೀನೆಗೆ ಸುರುಗಿ ಹೂವನ್ನು ತೆಗೆದು ಕೊಡುವನು. ಮತ್ತ ಗೋವೆ ಹಣ್ಣಿನ ಬೀಜ ವನ್ನು ತೆಗೆದು ಅದನ್ನು ತಿನ್ನಲು ಕೊಡುವನು. ತಾಕತಿಗಿಂತ ಲಾಡಕ್ಯಾನ ಮೇಲೆ ಆಕೆಗೆ ಮಮತೆ ಹೆಚ್ಚಿತ್ತು. ಹಿಂದಿನಂತೆ ಈಗ ತಾಯಿಯ ನೆನಪು ತೆಗೆಯುತ್ತಿರಲಿಲ್ಲ. ಐದು ವರುಷ ಕೆಳಗಿನದಲ್ಲಿ ಬೆಳೆದ ಹುಡುಗಿ ಹಳ್ಳಿಯಲ್ಲಿ ಬೆರೆತುಹೋದೀ ತೆಂಬ ಕಲ್ಪನೆಯು ಕೂಡ ತಾತನಿಗೆ ಇರಲಿಲ್ಲ.

ಮಳೆಗಾಲ ಬಂದಿತು ಆಕಾಶದಲ್ಲಿ ಗುಡುಗು ಗುಡುಗಹತ್ತಿತು. ಮಿಂಚು ಮಿನುಗ ಹತ್ತಿತು. ಈ ಶಬ್ದವನ್ನೆಲ್ಲ ಕೇಳಿದಾಗ ಆಕೆ ಲಾಡಕ್ಯಾನ ಹತ್ತಿರ ಹೋಗಿ ಕುಳಿತು ಕೊಳ್ಳುವಳು ಹೊರಗೆ ಗಾಳಿಯು ಮಳೆಗೆ ಲೇಝಿಯು ಮತ್ತು ಮರಗ ಳಿಗೆ ಲಾಠಿ ಕಳಿಸುತ್ತಿತ್ತು ಲಾಡಕ್ಯಾ ಸಮೀಪ ವಿದ್ದರೆ ಮಾತ್ರ ಧೈರ್ಯ ಆಕೆಗೆ. ಭಾರೀ ಮಳೆಯಲ್ಲಿ ಊರಲ್ಲಿ ಇಲಿಗಳು ಬೀಳಹತ್ತಿದವು ಮೇಲಿಂದ ಮೇಲೆ “ಪ್ಲೇಗ” ಎಂಬ ಶಬ್ದವು ಆಕೆಗೆ ಕೇಳುತ್ತಿತ್ತು ಇದರಲ್ಲಿ ಏನಾದರೂ ಭಯಾನಕ ಇರಬೇಕೆಂದು ಆಕೆ ಅರಿತಿದ್ದಳು ಕೊನೆಗೆ ತಾತನು ಸಾವಂತವಾಡಿಗೆ ಹೋಗುವದನ್ನು ನಿಶ್ಚಯಿಸಿ ದನು ಮೀನೆ ಲಾಡಕ್ಯಾನಿಗೆ ಕೇಳಿದಳು “ನೀನು ನಮ್ಮ ಸಂಗಡ ಬರುತ್ತಿಯಲ್ಲ?” ಆತ ನಸುನಕ್ಕು ತನ್ನನ್ನು ಅಲ್ಲಾಡಿಸುತ್ತ ಇಲ್ಲವೆಂದು ಹೇಳಿದ. ಮೀನೆ ಒಮ್ಮೆಲೇ ಕೇಳಿದಳು “ ತಾತ ನಿನ್ನನ್ನು ಕರೆದುಕೊಂಡು ಹೋಗುವದಿಲ್ಲವೇನು!

“ ಹೋಗಲಿಕ್ಕೆ ದೇವರ ಅಪ್ಪಣೆ ಇಲ್ಲ!”

“ ದೇವರ! ”

“ ಹೌದು ”

“ ದೇವಸ್ಥಾನದೊಳಗಿರುವ ದೇವರ ”!

“ ಹೌದು ತಂಗಿ ”.

“ ದೇವರು ಮಾತಾಡುತ್ತಾನೆಯೇ? ”

“ ಆತನ ಮೈಗೆ ತುಳಸೀ ಎಲೆಯನ್ನು ಹಚ್ಚುತ್ತಾರೆ ಅದಾದರಿಂದ ಎಲ್ಲವೂ ತಿಳಿಯು ವದು ಅದರಿಂದ ದೇವರು ಊರಲ್ಲಿಯೇ ಉಳಿ ಯಲಿಕ್ಕೆ ಹೇಳಿದ್ದಾನೆ. ನನಗೆ ಅವನ ಕಾವಲು ಇದ್ದ ಮೇಲೆ ಹೇದರಲೇಕೆ?

ಲಾಡಕ್ಯಾ ದೇವಸ್ಥಾನದ ದಿಕ್ಕಿಗೆ ತಿರುಗಿ ನಮ ಸ್ಕಾರ ಮಾಡಿದ. ಮೀನೆ ಆತನನ್ನು ಅನುಕರಣ ಮಾಡಿದಳು.

ಸಾವಂತವಾಡಿಗೆ ಬಂದು ಎರಡು ತಿಂಗಳು ಕಾಲಕಳೆದರೂ ಆಕೆಯ ಬೇಸರಿಕೆ ಇನ್ನೂ ಕಳೆ ದಿರಲಿಲ್ಲ. ದೇವರು ಲಾಡಕ್ಯಾನಂತೆ ತನ್ನ ತಾತನ ರಕ್ಷಣೆ ಮಾಡಲಿಕ್ಕೆ ಏಕೆ ಒಪ್ಪಲಿಲ್ಲ? ಆಕೆಗೆ ಹೊಸ ಗೆಳತಿಯರು ಸಿಕ್ಕಿದರು. ಅವರೊ ಡನೆ ಹೊಸ ಹೊಸ ಆಟ ಶುರುವಾದವು. ಆದರೆ ರಾತ್ರಿ ವೇಳೆಯಲ್ಲಿ ಹಾಸಿಗೆಯಮೇಲೆ ಹೊದ್ದು ಕೊಂಡು ಮಲಗಿದಾಗ ಈ ಜಗತ್ತು ದೂರ ಹೋಗುವದು ಮತ್ತು ಆಕೆಯ ಕಣ್ಣಮುಂದೆ ಲಾಡಕ್ಯಾನು ನಿಂತಂತೆ ಕಾಣುವನು ಈ ಎರಡು ತಿಂಗಳ ಕಾಲದಲ್ಲಿ ತನಗೆ ಒಮ್ಮೆಯಾದರು ಭೆಟ್ಟಿ ಯಾಗಲಿಕ್ಕೆ ಲಾಡಕ್ಯಾ ಏಕೆ ಬರಲಿಲ್ಲ? ಇದೇ ಆ ಕೆಗೆ ಆಶ್ಚರ್ಯವಾಗಿ ಕಾಣುವದು ಕೊನೆಗೆ ಆಕೆ ಧೈರ್ಯದಿಂದ ತಾತನ ಕಡೆಗೆ ಕೇಳಿದಳು. ಹೋಗಿ ಲಾಡಕ್ಯಾ ನನ್ನನ್ನು ಮರೆತು ಬಿಟ್ಟನು ಅಲ್ಲ ವೇನೋ ತಾತ? ತಾತ ಏನೂ ಮಾತಾಡಲಿಲ್ಲ. ಮೀನೆಯ ಮನಸ್ಸು ಕದಡಿದಂತಾಯಿತು.

ಕರಾಳ ರೂಪವನ್ನು ತಾಳಿದಂಥ ಪ್ಲೇಗು ಇಲ್ಲ ದಂತಾಯಿತು. ಜಾತ್ರೆಯ ದಿವಸ ಸಂಜೆಗೆ ತಾತ ಮನೆಗೆ ಬಂದ. ಲಾಡಕ್ಯಾನು ತನ್ನ ಹಾದಿ ನೋಡುತ್ತ ಬಾಗಿಲಲ್ಲಿ ನಿಂತಿರಬೇಕು ಎಂಬ ಕಲ್ಪನೆಯು ಮೀನೆಗಿತ್ತು. ಆದರೆ ಅದು ಸುಳ್ಳಾ ಯಿತು. ಆಕೆಗೆ ಆತನ ಮೇಲೆ ಸಿಟ್ಟು ಬಂದಿತು ಕೋಪ ಬಂದಿತು ಅವನು ಬಂದರೆ ಅವನ ಕೂಡ ಮಾತುಕತೆ ಆಡಬಾರದು ಹೀಗೆ ಅವಳು ಮನಸ್ಸಿ ನಲ್ಲಿ ಇಚ್ಛಿಸಿದಳು. ಮೀನೆಬಂದು ಎರಡು ಮೂರು ಮಿನಿಟುಗಳಾದರೂ ಲಾಡಕ್ಯಾ ಮನೆಯಕಡೆಗೆ ಸುಳಿದಾಡಲಿಲ್ಲ. ಕತ್ತಲೆ ಮುಸು ಕಿರಲು ತಾತ ಆಕೆಯನ್ನು ಜಾತ್ರೆಗೆ ಕರೆದುಕೊಂಡು ಹೋದ ಜನದಟ್ಟಣೆಯಲ್ಲಿ ಲಾಡಕ್ಯಾ ಎಲ್ಲಿಯಾ ದರೂ ಕಣ್ಣಿಗೆ ಬಿದ್ದಾನೆಂದು ಬಿರಬಿರನೆ ಅತ್ತಿತ್ತ ನೋಡುತ್ತ ನಿಂತಿದ್ದಳು ದೇವರಿಗೆ ಕೊಡು ವದರ ಸಲುವಾಗಿ ತಾತ ಬಾಳೆಯ ಹಣ್ಣುಗಳನ್ನು ತೆಗೆದುಕೊಂಡಿದ್ದ ಅದರೊಳಗಿಂದ ಒಂದು ಯಾವಾಗ ಬಿದ್ದು ಹೋಯಿತೆಂಬ ಅರಿವು ಆಕೆಗೆ ಇರಲಿಲ್ಲ.

ದೇವರ ಮುಂದೆ ತಾಟನಲ್ಲಿ ಹಣ್ಣಿಟ್ಟಿರಿಸಿ ತಾತ ಯಾರೊಡನೆಯೋ ಮಾತಾಡಹತ್ತಿದ ಪೂಜಾ ರಿಯು ಪ್ರಸಾದವನ್ನು ಕೊಡಲು ಕೆಳಗೆ ಬಗ್ಗಿ ದನು. ಮೀನೆ ಮುಂದಾಗಿ ಹೋಗಿ ಆತನನ್ನು ಕೇಳಿ ದಳು “ ಲಾಡಕ್ಯಾ ಎಲ್ಲಿರುವ? ” “ಲಾಡಕ್ಯಾ ತೀರಿಕೊಂಡ, ಪ್ಲೇಗು ಆಗಿತ್ತವನಿಗೆ” ದೇವರು ಲಾಡಕ್ಯಾನ ರಕ್ಷಣೆ ಮಾಡುತ್ತೇನೆ ಎಂದವನಾತು ಆಕೆಯ ಮನಸ್ಸಿನಲ್ಲಿ ಬಂದಿತು ಇವನೆಂತ ಸುಳ್ಳ ದೇವ? ಒಡನೆ ದೇವರಕಡೆಗೆ ಎವೆಯಿಕ್ಕದೆ ನೋಡುತ್ತ ನಿಂತಳು ಪೂಜಾರಿಗೆ ಏಕೆಂಬುದು ತಿಳಿದಿರಲಿಲ್ಲ. ಆತ ಪ್ರಸಾದದ ಹಣ್ಣು ಆಕೆಯ ಕೈ ಯಲ್ಲಿ ಕೊಟ್ಟ ಅದನ್ನು ಸಿಟ್ಟಿನಿಂದ ದೇವರ ಮುಂದೆ ಒಗೆದಳು ಇದನ್ನು ನೋಡಿ ತಾತ ಸಿಟ್ಟಿನಿಂದ ಕೂಗಿದ.

“ ಮೀನೇ—”

ಪೂಜಾರಿ ತೀರ್ಥದಿಂದ ತುಂಬಿದ ಗಿಂಡಿ ಯನ್ನು ಮುಂದೆಮಾಡಿದ. ಅದನ್ನು ಕೈಯಿಂದ ಹೊಡೆದೊಗೆದು ದೇವರ ಕಡೆಗೆ ಬೆನ್ನು ತಿರುಗಿ ಜನದಟ್ಟಣೆಯೊಳಗಿಂದ ಮೀನೆ ಓಡಿದಳು.

ಸರ್ವೋದಯ ಸಮಾಜ

ಮಹಾತ್ಮರ ತತ್ವಗಳಲ್ಲಿ ವಿಶ್ವಾಸವಿದ್ದವರ ಸಂ ಘವೊಂದನ್ನು ನಿರ್ಮಿಸುವದು ಅತ್ಯವಶ್ಯವೆಂದು ವರ್ಧಾದಲ್ಲಿ ಕೂಡಿದ ವಿಧಾಯಕ ಕಾರ್ಯಕರ್ತರ ಸಭೆಯಲ್ಲಿ ಸ್ವೀಕೃತವಾದ ಹಿಂದೀ ಭಾಷೆಯಲ್ಲಿ ಯ ಗೊತ್ತುವಳಿಯಲ್ಲಿ ಹೇಳಲಾಗಿದೆ. ಈ ಸಮಾ ಜದ ಧ್ಯೇಯವನ್ನು ೨೨ ವಿಧವಾಗಿ ಸಾಧಿಸಬಹು ದೆಂದು ಹೇಳಲಾಗಿದೆ. ಅದರಲ್ಲಿ ಜಾತೀಯ ಐಕ್ಯ, ಅಸ್ಪೃಶ್ಯತಾ ನಿವಾರಣೆ, ಖಾದಿ ಮತ್ತು ಗ್ರಾಮೋ ದ್ಯೋಗಗಳು, ನಯೀತಾಲೀಮು, ಸಮಾಜದಲ್ಲಿ ಲಿಂಗಭೇದವಿಲ್ಲದೆ ಎಲ್ಲರಿಗೆ ಸಮಾನ ಹಕ್ಕುಗಳು, ದೇಶೀಭಾಷಾ ಪ್ರಸಾರ, ಸಂಕುಚಿತ ಪ್ರಾಂತೀಯ ಭಾವನೆಯ ಉಚ್ಚಾಟನೆ, ಹಿಂದುಸ್ತಾನೀ ಪ್ರಚಾ ರ, ಆರ್ಥಿಕ ಸಮತೆ, ಕೂಲಿಕಾರ ಸಂಘಟನೆ, ಹಿಂದುಳಿದ ವರ್ಗದವರ ಸೇವೆ, ವಿದ್ಯಾರ್ಥಿಗಳ ಸಂಘಟನೆ, ಕುಷ್ಠರೋಗ ನಿವಾರಣೆ, ಗೋ ಸಂ ರಕ್ಷಣೆ ಮುಂತಾದವುಗಳು. ಇಲ್ಲಿ ನಿರ್ದಿಷ್ಟವಾದ ಕಾರ್ಯವನ್ನು ಮಾಡಲಿಚ್ಛಿಸುವ ಈ ಸಮಾಜದ ಸದಸ್ಯರಲ್ಲಿ ಪರಸ್ಪರ ಸಂಬಂಧ ವನ್ನಿಂಟು ಮಾಡುವದಕ್ಕಾಗಿ ಪ್ರತಿವರುಷವೂ ಜನವರಿ ೩೦ ಕ್ಕೆ ಒಂದು ನಿರ್ದಿಷ್ಟ ಸ್ಥಳದಲ್ಲಿ ಸಮ್ಮೇಲನ ಸೇರುವದು. ಸಮಾಜವು ಸಲಹೆ ಸೂ ಚನೆ ನೀಡುವ ಕೆಲಸವನ್ನು ಮಾತ್ರ ಮಾಡುವದು.

ಈ ಪತ್ರಿಕೆಯು ಹುಬ್ಬಳ್ಳಿ ಸಂಯುಕ್ತ ಕರ್ನಾ ಟಕ ಮುದ್ರಣಾಲಯದಲ್ಲಿ ಲೋಕಶಿಕ್ಷಣ ಟ್ರಸ್ಟದ ಪರವಾಗಿ ಹ. ರಾ. ಮೊಹರೆಯವರಿಂದ ಮುದ್ರಿತ ಪ್ರಕಟಿತವಾಯಿತು.